
ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಬಾಪು ಪ್ರಪಂಚ


BAPU PRAPANCHA


ಕನ್ನಡ - English Monthly

ಸಂಪುಟ – 4 : ಸಂಚಿಕೆ – 4 ಜುಲೈ 2022 ಪುಟ – 36 ₹ 28/–















ಸ್ವಾತಂತ್ರ್ಯೋತ್ಸವ @ 75 ವರ್ಷಾಚರಣೆ – 2022–2023



ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನ ಮಂತ್ರಿಗಳು

ಸ್ವಾತಂತ್ರ್ಯದ ಅಮೃತಮಹೋತ್ಸವ

ನವ ಭಾರತಕ್ಕಾಗಿ
ನವ ಕರ್ನಾಟಕ




ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ದಾವೋಸ್‌ನಲ್ಲಿ ಬಂಡವಾಳ ಹೂಡಿಕೆ ಆಕರ್ಷಿಸುವಲ್ಲಿ ರಾಜ್ಯ ಮುಂಚೂಣಿಯಲ್ಲಿ

ದಾವೋಸ್
ವಿಶ್ವ ಆರ್ಥಿಕ
ಶೃಂಗಸಭೆ
ಮೇ 22–26

ರಾಜ್ಯಕ್ಕೆ ₹52,000 ಕೋಟಿ ಬಂಡವಾಳ ಹೂಡಿಕೆ ತರುವ ಐತಿಹಾಸಿಕ ಒಪ್ಪಂದಗಳಿಗೆ ಸಹಿ



ದಾವೋಸ್‌ನಲ್ಲಿ ನಡೆದ ವಿಶ್ವ ಆರ್ಥಿಕ ಶೃಂಗ ಸಭೆಯಲ್ಲಿ ರಾಜ್ಯ ಸರ್ಕಾರ ಭಾಗವಹಿಸಿದ್ದು ಭಾರಿ ಮೊತ್ತದ ಹೂಡಿಕೆಯನ್ನು ರಾಜ್ಯಕ್ಕೆ ತರುವಲ್ಲಿ ಯಶಸ್ವಿಯಾಗಿದೆ.

ವಿವಿಧ ಜಾಗತಿಕ ಸಂಸ್ಥೆಗಳು ರಾಜ್ಯದಲ್ಲಿ ರೂ.59,350 ಕೋಟಿ ಮೊತ್ತದ ಬಂಡವಾಳ ಹೂಡಿಕೆ ಹೂಡಲು ಬದ್ಧತೆ ವ್ಯಕ್ತಪಡಿಸಿವೆ.

ಅಲ್ಲದೇ ರಾಜ್ಯದಲ್ಲಿ ಹೂಡಿಕೆ ಮಾಡಲು ಹಲವಾರು ಸಂಸ್ಥೆಗಳು ಆಸಕ್ತಿ ತೋರಿವೆ.

ರಾಜ್ಯದಲ್ಲಿ ಬಂಡವಾಳ ಹೂಡಿಕೆ ಮಾಡಲು ಒಪ್ಪಿಕೊಂಡಿರುವ ಸಂಸ್ಥೆಗಳು.

ರಿನ್ಯೂ ಪವರ್

ನವೀಕರಿಸಬಹುದಾದ ಇಂಧನ ವಲಯದಲ್ಲಿ ದೊಡ್ಡ ಸಂಸ್ಥೆಯಾಗಿರುವ ರಿನ್ಯೂ ಪವರ್ ರಾಜ್ಯದಲ್ಲಿ **ರೂ.50,000 ಕೋಟಿ** ಬಂಡವಾಳ ಹೂಡಿಕೆ ಮಾಡಲು ಒಪ್ಪಂದಕ್ಕೆ ಸಹಿ ಹಾಕಿದೆ. ಮೊದಲ ಹಂತದಲ್ಲಿ ರೂ. 11,900 ಕೋಟಿ ಹಾಗೂ ಎರಡನೇ ಹಂತದಲ್ಲಿ ರೂ. 37,500 ಕೋಟಿ ಬಂಡವಾಳ ಹೂಡಿಕೆಯನ್ನು ಈ ಸಂಸ್ಥೆ ಮಾಡಲಿದೆ.
ಉದ್ಯೋಗವಕಾಶ: 30,000 ಜನರಿಗೆ



ಲುಲು ಗ್ರೂಪ್ ಇಂಟರ್‌ನ್ಯಾಷನಲ್

ಈ ಸಂಸ್ಥೆಯು ರಾಜ್ಯದಲ್ಲಿ ನಾಲ್ಕು ಶಾಪಿಂಗ್ ಮಾಲ್‌ಗಳು ಹಾಗೂ ಒಂದು ಹೈಪರ್ ಮಾರ್ಕೆಟ್ ತೆರೆಯಲಿದ್ದು ಇದಕ್ಕಾಗಿ **ರೂ.2,000 ಕೋಟಿ** ಬಂಡವಾಳ ಹೂಡಿಕೆ ಮಾಡಲಿದೆ. ಸಂಸ್ಥೆಯು ರಫ್ತು-ಆಧಾರಿತ ಆಹಾರ ಸಂಸ್ಕರಣಾ ಘಟಕಗಳನ್ನು ಸಹ ರಾಜ್ಯದಲ್ಲಿ ಸ್ಥಾಪಿಸಲಿಸಿದೆ.

ಉದ್ಯೋಗವಕಾಶ: 10,000 ಜನರಿಗೆ

ದಾವೋಸ್ ನಲ್ಲಿ ನಡೆದ ವಿಶ್ವ ಆರ್ಥಿಕ ಶೃಂಗಸಭೆಯಲ್ಲಿ ರಾಜ್ಯದ ತಂಡದ ನೇತೃತ್ವವನ್ನು ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು ವಹಿಸಿದ್ದರು. ರಾಜ್ಯದ ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವರಾದ ಶ್ರೀ ಮುರುಗೇಶ ನಿರಾಣಿ, ಐಟಿ-ಬಿಟಿ ಸಚಿವರಾದ ಡಾ. ಅಶ್ವತ್ಥನಾರಾಯಣ ಸಿ.ಎನ್., ಡಾ. ಇ.ವಿ. ರಮಣ ರೆಡ್ಡಿ, ಅಪರ ಮುಖ್ಯಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಶ್ರೀ. ಎನ್. ಮಂಜುನಾಥ್ ಪ್ರಸಾದ್, ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ, ಹಾಗೂ ಶ್ರೀಮತಿ ಗುಂಜನ್ ಕೃಷ್ಣ, ಆಯುಕ್ತರು, ಕೈಗಾರಿಕಾ ಅಭಿವೃದ್ಧಿ ಹಾಗೂ ನಿರ್ದೇಶಕರು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಇವರುಗಳು ತಂಡದ ಸದಸ್ಯರುಗಳಾಗಿದ್ದರು.

ಬಂಡವಾಳ ಹೂಡಿಕೆ/ಹೆಚ್ಚಿನ ಹೂಡಿಕೆ ಮಾಡಲು ಆಸಕ್ತಿ ತೋರಿರುವ ಸಂಸ್ಥೆಗಳು.

ಸೀಮನ್ಸ್

ಮ್ಯಾಗ್ನೆಟಿಕ್ ಇಮೇಜಿಂಗ್ ಹಾಗೂ ಡಯಾಗ್ನೊಸ್ಟಿಕ್ಸ್ ಕೇಂದ್ರೀಕೃತವಾದ ಆರೋಗ್ಯ-ಸಂಬಂಧಿತ ಆರ್‌ಅಂಡ್‌ಡಿ ಯೋಜನೆಯನ್ನು **ರೂ.1,300 ಕೋಟಿ** ಬಂಡವಾಳ ಹೂಡಿಕೆಯೊಂದಿಗೆ ಹಾಗೂ **ರೂ.300 ಕೋಟಿ** ಮೊತ್ತದ ಹೂಡಿಕೆಯೊಂದಿಗೆ ಆಧುನಿಕ ವೈದ್ಯಕೀಯ ಉಪಕರಣಗಳ ಘಟಕದ ಸ್ಥಾಪನೆಯನ್ನು ಸೀಮನ್ಸ್ ರಾಜ್ಯದಲ್ಲಿ ಕೈಗೆತ್ತಿಕೊಳ್ಳುತ್ತಿದೆ.

ತುಮಕೂರು, ಹುಬ್ಬಳ್ಳಿ-ಧಾರವಾಡ ಹಾಗೂ ಮೈಸೂರು ನಗರಗಳಲ್ಲಿ ಸಹ ಹೂಡಿಕೆ ಮಾಡಲು ಈ ಸಂಸ್ಥೆಗೆ ಕರ್ನಾಟಕ ತಂಡ ತಿಳಿಸಿತು.



ಜ್ಯುಬಿಲಿಯೆಂಟ್ ಗ್ರೂಪ್

ಈ ಸಮೂಹ ರಾಜ್ಯದಲ್ಲಿ ಎರಡು ಪ್ರಮುಖ ಯೋಜನೆಗಳನ್ನು **ರೂ.700 ಕೋಟಿ** ವೆಚ್ಚದಲ್ಲಿ ಆರಂಭಿಸಲಿದೆ.
ಉದ್ಯೋಗವಕಾಶ: 9000 ಜನರಿಗೆ.
ಕರ್ನಾಟಕ ಸರ್ಕಾರ ಈ ಸಂಸ್ಥೆಗೆ ರಾಜ್ಯದಲ್ಲಿರುವ ಫಾರ್ಮ ಹಾಗೂ ಎಫ್.ಎಂ.ಸಿ.ಜಿ. ಕ್ಷೇತ್ರದಲ್ಲಿರುವ ಅವಕಾಶಗಳನ್ನು ಬಳಸಿಕೊಳ್ಳಲು ತಿಳಿಸಿತು.

ನೋಕಿಯಾ

ಟೆಲಿಕಮ್ಯೂನಿಕೇಶನ್ ಸಾಧನಗಳ ತಯಾರಿಕೆಗೆ ರಾಜ್ಯದಲ್ಲಿರುವ ಅವಕಾಶಗಳನ್ನು ಬಳಸಿಕೊಳ್ಳುವಂತೆ ಕರ್ನಾಟಕ ತಂಡ ನೋಕಿಯಾ ಸಂಸ್ಥೆಗೆ ತಿಳಿಸಿತು.

ನೆಸ್ಲೆ

ಈಗಾಗಲೇ ನಂಜನಗೂಡಿನಲ್ಲಿರುವ ನೆಸ್ಲೆ ಇನ್‌ಸ್ಟೆಂಟ್ ಕಾಫಿ ಘಟಕವನ್ನು ಆಧುನೀಕರಣಗೊಳಿಸಿ, ವಿಸ್ತರಣೆ ಮಾಡಲು ಸಂಸ್ಥೆಯು ಆಸಕ್ತಿ ತೋರಿದೆ.

ಅರ್ಸೆಲರ್ ಮಿತ್ತಲ್

ಈ ಸಂಸ್ಥೆಯೂ ರಾಜ್ಯದಲ್ಲಿ ಸೌರ-ವಾಯು ಹೈಬ್ರಿಡ್ ಯೋಜನೆಯನ್ನು **ರೂ.6,000 ಕೋಟಿ** ಬಂಡವಾಳ ಹೂಡಿಕೆಯೊಂದಿಗೆ ಆರಂಭಿಸಲು ಯೋಜಿಸಿದೆ.

ಭಾರತಿ ಎಂಟರ್‌ಪ್ರೈಸಸ್

ಭಾರತಿ ಎಂಟರ್‌ಪ್ರೈಸಸ್ ಸಂಸ್ಥೆಯ ಮುಖ್ಯಸ್ಥರಾದ ಸುನಿಲ್ ಭಾರತಿ ಮಿತ್ತಲ್ ರಾಜ್ಯದಲ್ಲಿ ಒಂದು ಮೆಗಾ ಡಾಟ ಕೇಂದ್ರ ಆರಂಭಿಸಲು ಆಸಕ್ತಿ ತೋರಿಸಿದ್ದಾರೆ.

ಐಕಿಯಾ ಸ್ಟೋರ್

ಬೆಂಗಳೂರಿನಲ್ಲಿ ಐಕಿಯಾ ಸ್ಟೋರ್ ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ಆ ಸಂಸ್ಥೆಯ ಸಿ.ಇ.ಒ. ಜೆಸ್ಪರ್ ಬ್ರೋಡಿನ್‌ರವರು ಸ್ಥಳೀಯವಾಗಿ ಕಚ್ಚಾವಸ್ತುಗಳ ಸಂಗ್ರಹಣೆ ಹೆಚ್ಚಿಸುವ ಯೋಜನೆ ಹೊಂದಿರುವುದಾಗಿ ತಿಳಿಸಿದರು.

ಹಿಟಾಚಿ ಎನರ್ಜಿ


ಈ ಸಂಸ್ಥೆಯು ರಾಜ್ಯದಲ್ಲಿ ವಿದ್ಯುತ್ ಚಾಲಿತ ವಾಹನಗಳ ಚಾರ್ಜಿಂಗ್ ಮೂಲಭೂತ ಸೌಕರ್ಯವನ್ನು ಸ್ಥಾಪಿಸಲು ಯೋಜಿಸುತ್ತಿದೆ.

ಅದಾನಿ ಗ್ರೂಪ್

ಈ ಗ್ರೂಪ್ ರಾಜ್ಯದಲ್ಲಿ ವಿವಿಧ ವಲಯಗಳಲ್ಲಿ ಹೂಡಿಕೆ ಮಾಡಲು ಆಸಕ್ತಿ ತೋರಿದೆ.

ಡಸಾಲ್ಟ್ ಸಿಸ್ಟಮ್ಸ್

ಈ ಸಂಸ್ಥೆಯು ರಾಜ್ಯದಲ್ಲಿ ವಿದ್ಯುತ್ ಚಾಲಿತ ವಾಹನಗಳು ಹಾಗೂ ಆಧುನಿಕ ಉತ್ಪಾದನಾ ವ್ಯವಸ್ಥೆ ವಲಯಗಳಲ್ಲಿ ಸೆಂಟರ್-ಆಫ್-ಎಕ್ಸೆಲೆನ್ಸ್ ಸ್ಥಾಪಿಸುವುದಾಗಿ ತಿಳಿಸಿತು.



ಎಬಿ ಇನ್‌ಬೆವ್

ಈ ಸಂಸ್ಥೆಯು ರಾಜ್ಯದಲ್ಲಿ ರೂ.50 ಕೋಟಿ ಬಂಡವಾಳ ಹೂಡಿಕೆಯೊಂದಿಗೆ ಆಲ್ಕೊಹಾಲ್ ಇಲ್ಲದ ಪಾನೀಯಗಳ ತಯಾರಿಕಾ ಘಟಕವನ್ನು ಸ್ಥಾಪಿಸಲು ಯೋಜಿಸಿದೆ.



ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಕನ್ನಡ – ಇಂಗ್ಲಿಷ್ ಮಾಸಪತ್ರಿಕೆ

BAPU PRAPANCHA

(A Monthly Kannada - English Magazine of Gandhian Thoughts)

ಪ್ರಧಾನ ಸಂಪಾದಕರು :
ನಾಡೋಜ ಡಾ.ವೂಡೇ ಪಿ. ಕೃಷ್ಣ
Chief Editor :
Nadoja Dr. Wooday P. Krishna

ಸಂಪಾದಕರು : ಇಂದಿರಾ ಕೃಷ್ಣಪ್ಪ
Editor : **Indira Krishnappa**

ಸಲಹಾ ಸಂಪಾದಕರು : ವಿ.ಎನ್. ತಿಪ್ಪನಗೌಡ
Advisory Editor : **V.N. Tippana Gouda**

ಪ್ರಕಾಶಕರು : ಕಾರ್ಯದರ್ಶಿ
ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧೀ ಭವನ
ಕುಮಾರ ಪಾರ್ಕ್ ಪೂರ್ವ, ಬೆಂಗಳೂರು–560001

Published by :
Karnataka Gandhi Smaraka Nidhi
Gandhi Bhavana, Kumarapark East
Bengaluru - 560001
Phone : +91 80 22261967, 9738605799
gandhibhavanabengaluru@gmail.com

Design & Print : **CreativeGeekZ**
Yadhava College Road, Madhavanagara
Bengaluru - 560001
Ph : +91 80 40927049
E-mail : mail@creativegeekz.com

ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರವು, ಬಾಪು ಪ್ರಪಂಚದ್ದಲ್ಲ.ಚಿತ್ರಗಳು ಸಾಂದರ್ಭಿಕವಾಗಿರುತ್ತವೆ.

ಈ ಸಂಚಿಕೆಯಲ್ಲಿ

ಸಂಪಾದಕೀಯ



– ಇಂದಿರಾ ಕೃಷ್ಣಪ್ಪ

ಎಲ್ಲರಿಗೂ ನಮಸ್ಕಾರಗಳು...

ಕರೋನಾದ ಕರಾಳ ಕಾಲ ಕಳೆದು ಹೋಗುತ್ತಿರುವ ಈ ದಿನಗಳಲ್ಲಿ ಅತಿವೃಷ್ಟಿ, ಪ್ರವಾಹ, ನೆರೆ ಜನರನ್ನು ಅತೀವ ಸಂಕಷ್ಟಕ್ಕೆ ಒಳಮಾಡಿದೆ. ಪ್ರಕೃತಿ ಪ್ರಜೆಗಳನ್ನು ಅಪೋಶನ ತೆಗೆದುಕೊಳ್ಳುವಂತೆ ಊರುಕೇರಿ, ನಗರ, ಪಟ್ಟಣಗಳನ್ನು ಆವರಿಸಿಕೊಳ್ಳುತ್ತಾ ದುಮ್ಮಿಕ್ಕಿ ಜಲಧಾರೆ ಹರಿಯುತ್ತಿದೆ. ಭೂತಾಯಿ ಮತ್ತು ಜಲದೇವಿ ಅತ್ಯುಗ್ರಳಾದಂತೆ, ನಾಗರೀಕರು ನಿರ್ಮಿಸಿದ, ಮಾರ್ಗಗಳನ್ನು, ಬಂಗಲೆಗಳನ್ನು ನಿಮಿಷಾರ್ಧದಲ್ಲಿ ಭೂಕಂಪನದಿಂದ, ವರ್ಷಧಾರೆಯಿಂದ ನೆಲಕಚ್ಚಿಸಿದ್ದಾಳೆ. ಮಾನವರು ನಿಸರ್ಗದೊಂದಿಗೆ ಅನ್ಯೋನ್ಯ ಬದುಕನ್ನು ಬಿಟ್ಟು, ಧ್ವಂಸೀಕರಣ, ಭೂಗರ್ಭ ಬಗೆಯುವ, ಕೃತ್ಯದಿಂದ ಕುಪಿತಳಾಗಿ ಪ್ರಕೃತಿ ವಿಕೋಪಗಳು ಸಂಭವಿಸುತ್ತಿರುವುದನ್ನು ಅವಲೋಕಿಸಬಹುದಾಗಿದೆ. ಕೈಗಾರೀಕರಣದ ಯುಗದ ಆರಂಭವಾದಾಗಿನಿಂದ ನಿಸರ್ಗದ ನಾಶಕ್ಕೆ ಕಾರಣಗಳು, ಅನಾಹುತಗಳ ಮೂಲ ಹುಡುಕಲು ವಿಜ್ಞಾನಿಗಳು, ತಜ್ಞರು ಸಿದ್ಧರಾಗಿದ್ದಾರೆ. ಅಂತರರಾಷ್ಟ್ರೀಯ ಅಧ್ಯಯನ ತಂಡವೊಂದು ಆಸ್ಟ್ರೇಲಿಯಾದ ಫೆಡರೇಶನ್ ಯೂನಿವರ್ಸಿಟಿಯ ಸವಿನ್‌ಚಾಂದ್ ಅವರ ನೇತೃತ್ವದಲ್ಲಿ ರೂಪುಗೊಂಡಿದೆ. ಇದು ಶತಮಾನದ ಅಂದರೆ 1850ರಿಂದ ಈಗಿನವರೆಗಿನ ಪ್ರಕೃತಿ ವಿಕೋಪದ ಬಗ್ಗೆ ಅಧ್ಯಯನ ನಡೆಸಿ, 20ನೇ ಶತಮಾನದ ಪುನರ್ ವಿಮರ್ಶಾತ್ಮಕ (20CR) ವರದಿಯನ್ನು ಸಿದ್ಧಗೊಳಿಸಿದೆ. 20CR (20th Centruy Reanalysis) ನ್ಯಾಷನಲ್ ಓಷಿಯಾನಿಕ್ ಅಂಡ್ ಅಟ್‌ಮಾಸ್‌ಫಿಯರಿಕ್ ಅಡ್ಮಿನಿಸ್ಟ್ರೇಷನ್ ಸಂಸ್ಥೆಯು ಬಿಡುಗಡೆ ಮಾಡಿರುವ ಒಂದು ವರದಿ **"The Study published in Nature Climate Change"** 1850 ರಿಂದ ವಾರ್ಷಿಕವಾಗಿ ಪ್ರಾಕೃತಿಕ ಸೈಕ್ಲೋನ್‌ಗಳು ಇಳಿಕೆ ಗತಿಯಲ್ಲಿ ಅಂದರೆ 13% ಕಡಿಮೆಯಾಗುತ್ತಿದೆ. 1900 ರಿಂದ 1950ರ ನಂತರದ ಕಾಲಾವಧಿಯಲ್ಲಿ ಬಿಸಿಲಿನ ತಾಪ ಏಕರಿಕೆಯಾಗಿರುವುದನ್ನು ಗಮನಿಸಬಹುದು. ಯು.ಕೆಯ. ನ್ಯಾಷನಲ್ ಸೆಂಟರ್ ಫಾರ್ ಅಟ್ಮಾಸ್ಫೆರಿಕ್ ಸೈನ್ಸ್ ಸಂಸ್ಥೆಯ ಅಲೆಗ್ಸಾಂಡರ್ ಜೆ. ಬೆರರ್, ಹಿರಿಯ ವಿಜ್ಞಾನಿ ಮತ್ತು ರೀಡಿಂಗ್ ವಿಶ್ವವಿದ್ಯಾಲಯ, ಹವಾಮಾನ ಇಲಾಖೆಯು ಜಂಟಿಯಾಗಿ ಬರೆದ ಲೇಖನದಲ್ಲಿ ಭೂಮಿಯಿಂದ ಆವಿಯಾಗುವ ತೇವಾಂಶದ ಇಳಿಕೆ ಮತ್ತು ನೀರಿನ ತೇವಾಂಶದ ಒಣಗುವಿಕೆ ಹಾಗೂ ವಾತಾವರಣದಲ್ಲಿನ ಗಾಳಿಯ ಸ್ಥಳದಲ್ಲೇ ಸುತ್ತುವಿಕೆ ಇವುಗಳು ಸೈಕ್ಲೋನ್‌ಗಳಿಗೆ ಕಾರಣವಾಗಿವೆ. ಭಾರತದ ಹವಾಮಾನ ಇಲಾಖೆಯ ವರದಿಯನ್ವಯ, ಅರಬ್ಬಿ ಸಮುದ್ರದಲ್ಲಿ ಕಳೆದ 4 ವರ್ಷಗಳಿಂದ 52% ಚಂಡಮಾರುತಗಳ ಏರಿಕೆ ಮತ್ತು ಬಂಗಾಳಕೊಲ್ಲಿಯಲ್ಲಿ 8% ಚಂಡಮಾರುತ ಏರಿಕೆಯಾಗಿರುವುದನ್ನು ಅವಲೋಕಿಸಿದ್ದಾರೆ. ನಾವೆಲ್ಲ ಗಮನಿಸಿದ, ಫನಿ, ತೌಕೆ, ಆಮಫನ್ ಮತ್ತು ಯಾಸ್ ಚಂಡಮಾರುತಗಳು ತಂದೊಡ್ಡಿದ ಭೀಕರ ಕಾಯಿಲೆಗಳು, ಅನಾಹುತಗಳು, ಧ್ವಂಸಗಳು ನಮ್ಮ ಮನದಲ್ಲಿ ಮಡುಗಟ್ಟಿರುವುದನ್ನು ಜ್ಞಾಪಿಸಿಕೊಳ್ಳಬಹುದು. ಅತಿ ಮುಖ್ಯವಾಗಿ ಅಸ್ಸಾಂ, ಈಶಾನ್ಯ ಭಾರತ ಬಿಹಾರ, ಒಡಿಸ್ಸಾ ಹಾಗೂ ಭಾರತಾದ್ಯಂತ ಜನರ ಪ್ರಾಣ, ಸೊತ್ತು, ಬೆಳೆ ವಿನಾಶದಿಂದ ದೇಶದ ಆರ್ಥಿಕತೆಗೆ ಅಪಾರ ನಷ್ಟವುಂಟಾಗಿದೆ. ಈಗ ಭಾರತದ ಮುನ್ನೆಚ್ಚರಿಕಾ ಕ್ರಮಗಳ ವ್ಯವಸ್ಥೆಯ ಬಗ್ಗೆ ಗಮನಿಸೋಣ. ಭಾರತೀಯ ಹವಾಮಾನ ಇಲಾಖೆ, ಕೇಂದ್ರೀಯ ಜಲ ಆಯೋಗ, ಜಲ ಮಾಪನ ಕೇಂದ್ರ, ಪ್ರವಾಹ ನಿಗಾ ಕೇಂದ್ರಗಳು, ವಿಪತ್ತು ನಿರ್ವಹಣಾ ಸಂಸ್ಥೆ ಕಾರ್ಯ ನಿರ್ವಹಿಸುತ್ತಿವೆ. ಮಳೆ ನೀರು ಸರಾಗವಾಗಿ ಹರಿದು ಹೋಗಲು ಸೂಕ್ತ ಚರಂಡಿ ವ್ಯವಸ್ಥೆ, ಪ್ರವಾಹ ಮುನ್ನೆಚ್ಚರಿಕಾ ಕ್ರಮಗಳ ಸಾರ್ವಜನಿಕ ಪ್ರಸಾರ, ಸಾಕು ಪ್ರಾಣಿಪಶುಗಳ ಸಾಗಾಣಿಕೆ, ಜನರು ಹಾಗೂ ಸ್ವತ್ತುಗಳ ಸುರಕ್ಷಿತ ಸ್ಥಳಾಂತರ, ಅಣೆಕಟ್ಟುಗಳು ಮತ್ತು ಒಡ್ಡುಗಳ ನಿರ್ಮಾಣ, ಪರಿಹಾರದ ಕೆಲಸಗಳು, ಒಳಹರಿವು ಮುನ್ನೆಚ್ಚರಿಕೆಗಳ ಪ್ರಸಾರ, ಮೀನುಗಾರರಿಗೆ ಸೂಕ್ತ ಮುನ್ನೆಚ್ಚರಿಕೆ, ಹವಾಮಾನ ಕಚೇರಿಗಳ ಸ್ಥಾಪನೆ, ಮೂಲ ಸೌಕರ್ಯ ಸುವ್ಯವಸ್ಥೆ ಇತ್ಯಾದಿಗಳು ಮೂಲಭೂತ ಮುನ್ನೆಚ್ಚರಿಕೆ ಕ್ರಮಗಳಾಗಿವೆ. ಕೇಂದ್ರೀಯ ಜಲ ಆಯೋಗ, ಗೂಗಲ್‌ನೊಂದಿಗೆ ಒಡಂಬಡಿಕೆ ಮಾಡಿಕೊಂಡು ಮುನ್ನೆಚ್ಚರಿಕಾ ಕ್ರಮಗಳನ್ನು ಸಾರ್ವತ್ರಿಕಗೊಳಿಸಿದೆ. 14 ಕಡೆಯಲ್ಲಿ ಪ್ರವಾಹ ಹವಾಮಾನ ಕಚೇರಿಗಳಿವೆ. (ಆಗ್ರಾ, ಅಹಮದಾಬಾದ್, ಭುವನೇಶ್ವರ, ಬೆಂಗಳೂರು, ಚೆನ್ನೈ, ಅಸನ್ಸೋಲ್, ಗೌಹಾತಿ, ಹೈದ್ರಾಬಾದ್, ಜಲಪಯ್ಗುರಿ, ಲಕ್ನೋ, ಹೊಸ ದೆಹಲಿ, ಪಾಟ್ನಾ, ಶ್ರೀನಗರ ಮತ್ತು ತಿರುವನಂತಪುರ). ಹೀಗಿದ್ದು ದಿಡೀರ್ ಪ್ರವಾಹಗಳು ಸಂಭವಿಸುತ್ತಿವೆ. ಹವಾಮಾನ ವೈಪರೀತ್ಯವನ್ನು ಸುಮಾರು 24 ಗಂಟೆ ಮುಂಚಿತವಾಗಿ ತಿಳಿಯಬಹುದಾಗಿದೆ. ಆದರೆ ಹವಾಮಾನ ಅಧ್ಯಯನ ಕೇಂದ್ರದ ಪ್ರೊ. ಶ್ರೀಧರ್ ಅವರು 48–72 ಗಂಟೆ ಪೂರ್ವಭಾವಿಯಾಗಿಯೂ ಹಾಗೂ ರಾಜಧಾನಿ ನಗರಗಳಲ್ಲಿ 3 ಗಂಟೆ ಪೂರ್ವದಲ್ಲಿ ತಿಳಿಸಬಹುದು ಎಂದಿದ್ದಾರೆ. ಕೌನ್ಸಿಲ್ ಆಫ್ ಎನರ್ಜಿ & ಎನ್‌ವಿರಾನ್‌ಮೆಂಟ್ ಅಂಡ್ ವಾಟರ್ ಸಂಸ್ಥೆಯ ಮುಖ್ಯಸ್ಥರಾದ ಅವಿನಾಶ್ ಮೊಹಂತಿ ಅವರು ನಡೆಸುತ್ತಿರುವ ಸಂಶೋಧನೆ ಫಲಿತಾಂಶಗಳು ಇನ್ನು ಮುಂದೆ ಹೊಸ ಮಾರ್ಗಗಳನ್ನೂ ಮುನ್ನೆಚ್ಚರಿಕಾ ಕ್ರಮಗಳಾಗಿಸಬಹುದು ಎಂದು ಭಾವಿಸಿದ್ದೇನೆ.

ಬಹುಮುಖ್ಯವಾದ ಮತ್ತೊಂದು ವಿಷಯವೆಂದರೆ ಭೂಮಿಯಲ್ಲಿ ಶೇ 70% ಆವರಿಸಿರುವ ಸಾಗರಗಳೇ ಹವಾಮಾನ ನಿಯಂತ್ರಕಗಳಾಗಿವೆ. ಅವುಗಳ ಬಗ್ಗೆ ನಮಗಿರುವ ನಿರ್ಲಕ್ಷವೇ ಹವಾಮಾನ ವೈಪರೀತ್ಯಕ್ಕೆ ಕಾರಣಗಳಾಗಿವೆ. ಸಮುದ್ರ ಮಾಲಿನ್ಯದ ಶೇ 80% ಭಾಗ, ನಮ್ಮಿಂದಾದುದೇ ಆಗಿವೆ. ಜಾಗತಿಕ ತಾಪಮಾನ, ಸಾಗರ ಪ್ರಕ್ರಿಯೆಗಳನ್ನು ಬದಲಾಯಸುತ್ತದೆ. ಇದರಿಂದ ಸಾಗರ ಜೀವಿಗಳ ಆಪತ್ತು, ಜೀವವೈವಿಧ್ಯದ ನಾಶದಿಂದಾಗಿ ಸಾಗರದಿಂದ ಉತ್ಪಾದಿತ ಆಮ್ಲಜನಕ ಕೊರತೆ ಹೆಚ್ಚಾಗುತ್ತಿದೆ. ಹವಾಮಾನ ವೈಪರೀತ್ಯ, ಜೀವವೈವಿಧ್ಯ, ಸಾಗರ ಪರಿಸರ ಕಾರ್ಯಸೂಚಿಗೆ, ಜಾಗತಿಕ ಮುಖಂಡರು, ಒಪ್ಪಂದಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಮೀನುಗಾರಿಕೆ ಮೇಲೆ ಸಹಾಯಧನ ನಿಷೇಧ, ಸಮುದ್ರ ಗಡಿ ವ್ಯಾಜ್ಯಗಳ ಒಪ್ಪಂದಗಳು, ಸಮುದ್ರದ ಮೇಲಿನ ನಿಯಂತ್ರಣಗಳು, WTO ಒಪ್ಪಂದಗಳು, ಸಮುದ್ರಗಳನ್ನು ಸಂರಕ್ಷಿಸಲು ಕೈಗೊಂಡ ಜಾಗತಿಕ ಕ್ರಮಗಳನ್ನು ಪಾಲಿಸಲು ನಾವೆಲ್ಲರೂ ಕೈಜೋಡಿಸೋಣ.

ಭಾರತ ಸುತ್ತಮುತ್ತಲಿನ ದೇಶಗಳಾದ, ಶ್ರೀಲಂಕಾ, ಪಾಕೀಸ್ತಾನ, ಟಿಬೆಟ್ ಮುಂತಾದ ದೇಶಗಳಲ್ಲಾಗುತ್ತಿರುವ ಅರಾಜಕತೆ ನಮ್ಮ ಕಣ್ಣು ತೆರೆಸಿ, ಭಾರತದ ಪ್ರಜಾಪ್ರಭುತ್ವದ ಉಳಿವಿಗಾಗಿ ನಾವೆಲ್ಲರೂ ಶ್ರಮಿಸಬೇಕಾಗಿದೆ. ಕರ್ನಾಟಕದಲ್ಲಿ ಎದ್ದಿರುವ ಪಠ್ಯಪುಸ್ತಕ ವಿವಾದದಲ್ಲಿ ಸೌಹಾರ್ದ ಕರ್ನಾಟಕಕ್ಕಾಗಿ ಭಾರತದ ಬಹುತ್ವವನ್ನು ಶತಮಾನದಿಂದ ಜತನದಿಂದ ಮುಂದಿನ ಪೀಳಿಗೆಗೆ ತಲುಪಿಸಿದ, ಬುದ್ಧ, ಬಸವ, ಪುಲೆ, ಗಾಂಧಿ, ಅಂಬೇಡ್ಕರ್, ಕುವೆಂಪು, ಬೇಂದ್ರೆ ಮತ್ತು ಸಂತರು, ದಾಸರು, ಶರಣರು, ಸೂಫಿಗಳು ಮುಂತಾದವರ ಪಠ್ಯಗಳನ್ನು ಒಂದನೇ ತರಗತಿಯಿಂದ ಹಿಡಿದು ಉನ್ನತ ವ್ಯಾಸಂಗದಲ್ಲಿ ಮತ್ತು ತಾಂತ್ರಿಕ – ವೈದ್ಯಕೀಯ ಕೋರ್ಸ್‌ಗಳಲ್ಲಿ ಸೇರ್ಪಡೆ ಮಾಡಲು ಸರ್ಕಾರ ತೀವ್ರ ಕ್ರಮವಹಿಸುವುದು ತುರ್ತಾಗಿ ಆಗಬೇಕಾಗಿದೆ. ಮಕ್ಕಳ ಭವಿಷ್ಯದ ಮೇಲೆ, ಪರಿಣಾಮ ಬೀರುವ ಶಿಕ್ಷಣ ವ್ಯವಸ್ಥೆಯು ಪುಸ್ತಕ ಪರಿಷ್ಕರಣೆ ವಿವಾದದಿಂದ ನಲುಗಬಾರದು. ಸದರಿ ಸಮಿತಿಯನ್ನು ಸಂವಿಧಾನಾತ್ಮಕ ಪ್ರಾತಿನಿಧ್ಯದಂತೆ ಪುನರ್‌ರಚಿಸಿ, ಕಾಲಮಿತಿ ಕ್ರಮಗಳು, ಉನ್ನತ ಸಮಿತಿಯ ಪುನರಾವಲೋಕನಾ ಕ್ರಮಗಳಿಗೆ ಒಳಪಡಿಸಿ, ಪಠ್ಯಪುಸ್ತಕಗಳನ್ನು ಶಾಲಾಕಾಲೇಜುಗಳಿಗೆ ಕೊಡಬೇಕಾದ, ತುರ್ತು ಕ್ರಮಗಳಾಗಿವೆ. ಇಂಥಹ ಬಹುದೊಡ್ಡ ಪರಿವರ್ತನಾ ಕ್ರಮಗಳಿಗಾಗಿ ಕಳೆದ 6 ತಿಂಗಳಿಂದ ಹೋರಾಟ ಮಾಡುತ್ತಿರುವ ಸಾಹಿತಿಗಳು, ಶಿಕ್ಷಣ ತಜ್ಞರು, ಸಂಘ–ಸಂಸ್ಥೆಗಳು, ಅಧ್ಯಾಪಕರು, ಯುವಜನರು ಮತ್ತು ಸಾರ್ವಜನಿಕರು ಹಾಗೂ ಮಠಮಾನ್ಯಗಳಿಗೆ ಗಾಂಧಿ ಭವನವು ಕೃತಜ್ಞತೆಗಳನ್ನು ತಿಳಿಸುತ್ತದೆ.

ಪ್ರಿಟೋರಿಯಾಕ್ಕೆ ಹೋಗುವಾಗ : ಗಾಂಧೀಜಿ ಅವರ "ನನ್ನ ಸತ್ಯಾನ್ವೇಷಣೆ' ಕೃತಿಯಿಂದ ಆಯ್ದ ಭಾಗ

(ಗಾಂಧೀಜಿ ಅವರ ಜೀವನದಲ್ಲಿ ನಡೆದ ಹಲವಾರು ಘಟನೆಗಳು ಇಂದಿನ ಹಲವು ಸಂಕಷ್ಟದಲ್ಲಿ ದಾರಿತೋರುವ ದೀವಿಗೆಗಳಾಗಿವೆ. ಹೀಗಾಗಿ ಗಾಂಧೀಜಿ ಅವರ ಆತ್ಮಕಥೆಯ ಆಯ್ದ ಭಾಗಗಳನ್ನು ನಿಯತವಾಗಿ ಪ್ರಕಟಿಸಲಾಗಿದೆ.

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಇನ್ನೂ ಹೆಚ್ಚಿನ ಕಷ್ಟಗಳು

ಸ್ಟೇಷನ್ ಮಾಸ್ಟರರ ಮುಂದೆ ಮೇಜಿನ ಮೇಲೆ ಒಂದು ಸವರನ್ ನಾಣ್ಯವನ್ನು ಇಟ್ಟು ನನಗೆ ಮೊದಲನೆಯ ದರ್ಜೆಯ ಟಿಕೆಟ್ ಕೊಡುವಂತೆ ಕೇಳಿದೆ. ಆತ ನೀವು ನನಗೆ ಆ ಕಾಗದ ಬರೆದು ಕಳುಹಿಸಿದ್ದೀರಿ ಅಲ್ಲವೇ". ನಾನು "ಹೌದು, ನನಗೆ ಒಂದು ಮೊದಲನೆಯ ದರ್ಜೆಯ ಟಿಕೆಟ್ ಕೊಟ್ಟರೆ ತುಂಬಾ ಉಪಕಾರವಾಗುವುದು, ನಾನು ಇಂದೇ ಪ್ರಿಟೋರಿಯಾ ತಲುಪಬೇಕು."

ಆತ ನಕ್ಕನು. ಆತನಿಗೆ ನನ್ನಲ್ಲಿ ಕನಿಕರವುಂಟಾಯಿತು, "ನಾನು ಟ್ರಾನ್ಸ್‌ವಾಲಿನವನಲ್ಲ. ನಾನು ಹಾಲೆಂಡಿಗೆ ಸೇರಿದವನು. ನಿಮ್ಮ ಭಾವನೆಗಳು ನನಗೆ ಅರ್ಥವಾಗುತ್ತವೆ. ನಿಮ್ಮಲ್ಲಿ ನನ್ನ ಸಹಾನುಭೂತಿ ಇದೆ. ನಿಮಗೆ ಒಂದು ಟಿಕೆಟ್ ಕೊಡುತ್ತೇನೆ. ಆದರೆ ಒಂದು ಷರತ್ತಿನ ಮೇಲೆ. ಗಾರ್ಡ್ ನಿಮ್ಮ ಪ್ರಯಾಣಕ್ಕೆ ತಡೆ ಹಾಕಿದರೆ ನೀವು ರೈಲ್ವೆ ಕಂಪನಿಗೆ ವಿರೋಧವಾಗಿ ಮೊಕದ್ದಮೆ ಹೂಡಬಾರದು. ಅದೇ ಷರತ್ತು. ನಿಮಗೆ ಸುಖ ಪ್ರಯಾಣವನ್ನು ಕೋರುತ್ತೇನೆ. ನೀವು ಸಭ್ಯ ಗೃಹಸ್ಥರೆಂಬುದು (ಜೆಂಟಲ್‌ಮನ್) ನಿಮ್ಮನ್ನು ನೋಡಿದರೆ ಗೊತ್ತಾಗುತ್ತದೆ." ಹೀಗೆ ಹೇಳಿ ಆತ ನನಗೆ ಟಿಕೆಟ್ ಕೊಟ್ಟ. ನಾನು ಆತನಿಗೆ ನನ್ನ ಕೃತಜ್ಞತೆಯನ್ನು ಅರ್ಪಿಸಿ, ಆತನು ಕೇಳಿದ ಆಶ್ವಾಸನೆಯನ್ನು ಕೊಟ್ಟೆ.

ನನ್ನನ್ನು ರೈಲಿಗೆ ಕೂರಿಸಲು ಸೇಠ್ ಅಬ್ದುಲ್ ಗನಿ ಸ್ಟೇಷನ್ನಿಗೆ ಬಂದಿದ್ದರು. ನಡೆದ ಸಂಗತಿಯನ್ನು ನೋಡಿ ಅವರಿಗೆ ಸಂತೋಷವೂ, ಆಶ್ಚರ್ಯವೂ ಉಂಟಾಯಿತು. ಆದರೂ ಅವರು ನನ್ನನ್ನು ಎಚ್ಚರಿಸಿದರು. "ಸದ್ಯ ನೀವು ಸುಖವಾಗಿ ಪ್ರಿಟೋರಿಯಾ ತಲುಪಿದರೆ ಸಾಕು. ಗಾರ್ಡ್, ನಿಮ್ಮನ್ನು ಪ್ರಥಮ ದರ್ಜೆಯ ಗಾಡಿಯಲ್ಲಿ ಕೂರಗೊಡುವುದಿಲ್ಲ. ಒಂದು ವೇಳೆ ಆತ ಕೂರಗೊಟ್ಟರೂ ಉಳಿದ ಪ್ರಯಾಣಿಕರು ಕೂರಗೊಡುವುದಿಲ್ಲ ಎಂಬುದು ನನ್ನ ಭಯ" ಎಂದು ಹೇಳಿದರು.

ನಾನು ಒಂದನೆಯ ದರ್ಜೆಯ ಗಾಡಿಯಲ್ಲಿ ಕುಳಿತೆ. ರೈಲು ಹೊರಟಿತು. ಜರ್ಮಿಸ್ಟನ್ ಎಂಬ ಸ್ಟೇಷನ್ನಿನಲ್ಲಿ ಗಾರ್ಡ್, ಟಿಕೆಟ್‌ಗಳನ್ನು ಪರೀಕ್ಷಿಸಲು ಗಾಡಿಗೆ ಬಂದ. ನನ್ನನ್ನು ಅಲ್ಲಿ ನೋಡಿ ಆತನಿಗೆ ಕೋಪ ಬಂತು. ಮೂರನೆಯ ದರ್ಜೆಯ ಗಾಡಿಗೆ ಹೋಗು ಎಂದು ನನಗೆ ಬೆರಳ ಸನ್ನೆಯಿಂದ ಆತ ಸೂಚಿಸಿದ. ನಾನು ಆತನಿಗೆ ನನ್ನ ಮೊದಲನೆಯ ದರ್ಜೆಯ ಟಿಕೆಟ್ ತೋರಿಸಿದೆ. ಆತ "ಪರವಾಗಿಲ್ಲ, ಮೂರನೆಯ ತರಗತಿಗೆ ನಡೆ", ಎಂದ. ಗಾಡಿಯಲ್ಲಿ ನನ್ನ ಹೊರತು ಇದ್ದವನು ಒಬ್ಬ ಇಂಗ್ಲಿಷ್ ಪ್ರಯಾಣಿಕ ಮಾತ್ರ. ಆತ ಗಾರ್ಡಿಗೆ "ಆ ಗೃಹಸ್ಥನಿಗೆ ಏಕೆ ತೊಂದರೆ ಕೊಡುತ್ತೀಯೆ. ಅವನ ಹತ್ತಿರ ಮೊದಲನೆಯ ದರ್ಜೆಯ ಟಿಕೆಟ್ ಇರುವುದು ನಿನಗೆ ಕಾಣುವುದಿಲ್ಲವೆ. ಆತ ನನ್ನ ಜತೆ ಪ್ರಯಾಣ ಮಾಡುವುದರಿಂದ ನನಗೆ ಎಳ್ಳಷ್ಟೂ ತೊಂದರೆಯಿಲ್ಲ" ಎಂದು ಹೇಳಿ ನನ್ನ ಕಡೆ ತಿರುಗಿ," ನಿಮ್ಮ ಪಾಡಿಗೆ ನೀವು ಸುಖವಾಗಿ ಪ್ರಯಾಣ ಮಾಡಿ' ಎಂದು ಹೇಳಿದ.

ಗಾರ್ಡ್ ಕೂಲಿಯೊಂದಿಗೆ ಪ್ರಯಾಣ ಮಾಡುವುದು ನಿಮ್ಮ ಇಚ್ಛೆಯಾದರೆ ನನಗೇನು?" ಎಂದು ಗೊಣಗುತ್ತಾ ಹೊರಟು ಹೋದ. ಸಂಧ್ಯಾ ಕಾಲ ಎಂಟು ಗಂಟೆಗೆ ರೈಲು ಪ್ರಿಟೋರಿಯಾವನ್ನು ಸೇರಿತು.

ಪ್ರಿಟೋರಿಯಾದಲ್ಲಿ ಮೊದಲನೆಯ ದಿನ

ದಾದಾ ಅಬ್ದುಲ್ಲಾರ ವಕೀಲರ ಪರವಾಗಿ, ನನ್ನನ್ನು ಎದುರುಗೊಳ್ಳಲು ಯಾರಾದರೂ, ಪ್ರಿಟೋರಿಯಾ ರೈಲ್ವೆ ನಿಲ್ದಾಣಕ್ಕೆ ಬಂದಿರಬಹುದೆಂದು ನಿರೀಕ್ಷಿಸಿದೆ. ನಾನು ಯಾವ ಭಾರತೀಯರ ಮನೆಯಲ್ಲಿಯೂ ಇಳಿದು ಕೊಳ್ಳುವುದಿಲ್ಲವೆಂದು ಖಂಡಿತವಾಗಿ ಹೇಳಿದ್ದುದರಿಂದ, ನನ್ನನ್ನು ಎದುರುಗೊಳ್ಳಲು ಯಾವ ಭಾರತೀಯನೂ ಸ್ಟೇಷನ್ನಿಗೆ ಬಂದಿರುವುದಿಲ್ಲವೆಂದು ನನಗೆ ಗೊತ್ತಿತ್ತು. ಆದರೆ ವಕೀಲರು ಯಾರನ್ನೂ ಕಳುಹಿಸಿರಲಿಲ್ಲ. ನಾನು ಅಲ್ಲಿಗೆ ಹೋದ ದಿನ ಭಾನುವಾರವಾಗಿದ್ದುದರಿಂದ ಯಾರನ್ನಾದರೂ ಕಳುಹಿಸಬೇಕಾದರೆ ತುಂಬಾ ತೊಂದರೆಯಾಗುತ್ತಿತ್ತೆಂದು ನನಗೆ ಅನಂತರ ಗೊತ್ತಾಯಿತು. ನನಗೆ ಏನು ಮಾಡುವುದಕ್ಕೂ ತೋಚಲಿಲ್ಲ. ಎಲ್ಲಿಗೆ ಹೋಗುವುದು ಎಂಬ ಯೋಚನೆ ಉಂಟಾಯಿತು. ಯಾವ ಹೋಟೆಲಿನಲ್ಲಿಯೂ ನನ್ನನ್ನು ಸೇರಿಸಲಾರರೆಂದು ಹೆದರಿದೆ.

1896ನೆಯ ಇಸವಿಯ ಪ್ರಿಟೋರಿಯಾ ಸ್ಟೇಷನ್ನೇ ಬೇರೆ, 1914ರ ಪ್ರಿಟೋರಿಯಾ ಸ್ಟೇಷನ್ನೇ ಬೇರೆ, ದೀಪಗಳು ಮಂಕಾಗಿ ಉರಿಯುತ್ತಿದ್ದವು. ಪ್ರಯಾಣಿಕರ ಸಂಖ್ಯೆ ಬಹು ಕಡಿಮೆಯಾಗಿತ್ತು. ಎಲ್ಲ ಪ್ರಯಾಣಿಕರೂ – ಸ್ಟೇಷನ್ನಿನಿಂದ ಹೋಗುವವರೆಗೆ ನಾನು ಸುಮ್ಮನಿದ್ದೆ. ಅನಂತರ ಟಿಕೆಟ್ ಕಲೆಕ್ಟರನಿಗೆ ಬಿಡುವಾದಾಗ ನನ್ನ ಟಿಕೆಟ್ಟನ್ನು ಅವನಿಗೆ ಕೊಟ್ಟು ಒಂದು ಸಣ್ಣ ಹೋಟೆಲು ಎಲ್ಲಿರುವುದೆಂಬುದನ್ನು ತಿಳಿದುಕೊಳ್ಳೋಣ, ಅಥವಾ ಒಂದು ರಾತ್ರಿಯನ್ನು ಎಲ್ಲಿ ಕಳೆಯಬಹುದೆಂಬುದನ್ನು ತಿಳಿದುಕೊಳ್ಳೋಣ ಎಂದು ಯೋಚಿಸಿದ. ಈ ವಿಷಯವನ್ನು ಟಿಕೆಟ್ ಕಲೆಕ್ಟರನಿಂದ ವಿಚಾರಿಸಲೂ ನಾನು ಹಿಂದೆಗೆದ. ಎಲ್ಲಿ ಆತ, ನನ್ನನ್ನು ಅವಮಾನಗೊಳಿಸುತ್ತಾನೋ ಎಂದು ನನಗೆ ಭಯವಾಗಿತ್ತು.

ಮುಂದುವರಿಯುವುದು...

ಕರ್ನಾಟಕದಲ್ಲಿ ಕಾಂಗ್ರೆಸ್ : ಬೆಳಗಾವಿ, 1924

ಗಾಂಧಿ ಮತ್ತು ಕರ್ನಾಟಕ ಕೃತಿಯಿಂದ : ಸಂಪಾದನೆ : ಸಿದ್ದವನಹಳ್ಳಿ ಕೃಷ್ಣಶರ್ಮ

"ಗಾಂಧೀಜಿ ಅವರ ವಿಚಾರಗಳು - ಚಿಂತನೆಗಳು - ಈ ಅಂಕಣದಲ್ಲಿ ಗಾಂಧೀಜಿ ಅವರು ಕೈಗೊಂಡ ನಿಲುವು ನಿರ್ಧಾರಗಳನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ. ಈ ಅಂಕಣವು ನಿಯತವಾಗಿ ಬರಲಿದೆ.

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಇಂಥ ಜನರನ್ನು ಕಾಂಗ್ರೆಸ್ಸಿನಿಂದ ಹೊರಗಿಡುವುದು ವ್ಯಾವಹಾರಿಕವಾಗಿ ಸುಲಭವಲ್ಲ. ಅಪರಿವರ್ತನವಾದಿಗಳನ್ನು ಹೊರಗೆ ಓಡಿಸಬೇಕು ಎಂಬುದು ಎಷ್ಟು ಅವ್ಯವಹಾರ್ಯವೋ ಇದೂ ಅಷ್ಟೇ. ಇಬ್ಬರೂ ಕಾಂಗ್ರೆಸ್ಸಿನೊಳಗೇ ಇರಬೇಕು. ಪರಸ್ಪರ ಹಸ್ತಕ್ಷೇಪ ಮಾಡಬಾರದು. ಪರಸ್ಪರ ವಿರುದ್ಧವಾಗಿ ವೈರ ತುಂಬಿ ಟೀಕೆ ಮಾಡಬಾರದು. ಹಿಂದೂ ಮುಸ್ಲಿಂ ಏಕತೆಗೆ ಯಾವುದು ಅನ್ವಯಿಸುತ್ತದೆಯೋ ಅದೇ ಭಿನ್ನ ರಾಜಕೀಯ ಪಕ್ಷಗಳಿಗೂ ಅನ್ವಯಿಸುತ್ತದೆ ಎಂದು ನನ್ನ ಭಾವನೆ. ನಾವು ಪರಸ್ಪರ ಸಹನೆಯಿಂದ ಇರಬೇಕು. ಕಾಲಕ್ರಮೇಣ, ಒಬ್ಬರು ತಮ್ಮ ವಿರುದ್ಧವಾದ ಇನ್ನೊಂದು ಮತಕ್ಕೆ ಪರಿವರ್ತನೆ ಹೊಂದಬಹುದೆಂದು ನಾವು ನಂಬೋಣ. ಇಷ್ಟೇ ಅಲ್ಲ, ಇನ್ನೂ ಮುಂದೆ ಹೋಗಿ ಕಾಂಗ್ರೆಸ್ಸನ್ನು ಬಿಟ್ಟಿರುವ ಉದಾರ ಮತವಾದಿಗಳನ್ನೂ ಇತರರನ್ನೂ ಮತ್ತೆ ಕಾಂಗ್ರೆಸ್ಸಿಗೆ ಸೇರುವಂತೆ ಪ್ರಾರ್ಥಿಸಬೇಕು. ಅಸಹಕಾರವನ್ನು ಸದ್ಯಕ್ಕೆ ನಿಲ್ಲಿಸಿದರೆ, ಅವರು ಹೊರಗೆ ಇರಲು ಯಾವ ಕಾರಣವೂ ಇಲ್ಲ. ಈ ಕೆಲಸದಲ್ಲಿ ಕಾಂಗ್ರೆಸ್ಸಿಗರೇ ಮೊದಲು ಹೆಜ್ಜೆ ಹಾಕಬೇಕು. ಅವರನ್ನು ಸ್ನೇಹಪೂರ್ಣವಾಗಿ ಆಹ್ವಾನಿಸಿ, ಅವರು ಒಳಕ್ಕೆ ಬರಲು ಸುಲಭವಾಗುವಂತೆ ಮಾಡಬೇಕು. ಈಗ ನಿಮಗೆ ಅರ್ಥವಾಗಬಹುದು ಸ್ವರಾಜ್ಯ ಪಕ್ಷದವರೊಂದಿಗೆ ನಾನು ಏಕೆ ಒಪ್ಪಂದ ಮಾಡಿಕೊಂಡೆನು ಎಂಬುದು.

ಪರದೇಶಿ ವಸ್ತ್ರ ಬಹಿಷ್ಕಾರ

ಒಂದು ಬಹಿಷ್ಕಾರವನ್ನು ಮಾತ್ರ ನಾವು ಉಳಿಸಿಕೊಂಡಿದ್ದೇವೆ ಎಂಬುದನ್ನು ಮರೆಯಬೇಡಿರಿ. ಒಬ್ಬ ಇಂಗ್ಲೀಷು ಸ್ನೇಹಿತನ ಮನಸ್ಸಿಗೆ ನೋವು ಆಗಬಾರದು ಎಂದು 'ಬಹಿಷ್ಕಾರ' ಎಂಬ ಶಬ್ದವನ್ನು ಬದಲಿಸಿ ಪರದೇಶಿ ವಸ್ತ್ರದ ಉಪಯೋಗವನ್ನು ಬಿಡಬೇಕು ಎಂದು ಒಪ್ಪಂದದಲ್ಲಿ ಮಾಡಿಕೊಂಡಿದೆ. ಬಹಿಷ್ಕಾರ ಶಬ್ದದಲ್ಲಿ ಒಂದು ದುರ್ವಾಸನೆ ಇರುವದೇನೋ ನಿಜ. ಅದು ದ್ವೇಷವನ್ನು ಸೂಚಿಸುತ್ತದೆ. ಅಂಥ ಅರ್ಥ ಯಾವುದೂ ನನ್ನ ಮನಸ್ಸಿನಲ್ಲಿ ಇಲ್ಲ. ಕೇವಲ ಬ್ರಿಟಿಷ್ ವಸ್ತ್ರ ಬಹಿಷ್ಕಾರ ಇದಲ್ಲ. ಪರದೇಶಿ ವಸ್ತ್ರ ಬಹಿಷ್ಕಾರ. ಇಂಥ ಬಹಿಷ್ಕಾರ ನಮಗೆ ಕೇವಲ ಒಂದು ಹಕ್ಕು ಮಾತ್ರವಲ್ಲ ಅದು ನಮಗೆ ಒಂದು ಕರ್ತವ್ಯ. ನಮ್ಮ ದೇಶದ ನದಿಗಳ ನೀರಿನ ಬದಲು ಪರದೇಶದಿಂದ ನೀರನ್ನು ತರಿಸಲು ಮೊದಲಿಟ್ಟರೆ ಅದರ ಬಹಿಷ್ಕಾರ ಹೇಗೆ ನಮ್ಮ ಕರ್ತವ್ಯವಾಗುತ್ತದೆಯೋ ಅಷ್ಟೇ ಮಟ್ಟಿಗೆ ಇದಾದರೂ ನಮ್ಮ ಕರ್ತವ್ಯ. ಆದರೆ ಇದು ವಿಷಯಾಂತರ.

ನಾನು ಹೇಳಬೇಕಾದ್ದು ಇಷ್ಟು:– ಈ ಒಪ್ಪಂದದಿಂದ ಪರದೇಶೀ ವಸ್ತ್ರ ಬಹಿಷ್ಕಾರ ಉಳಿಯುತ್ತದೆ. ಮತ್ತು ಅದಕ್ಕೊಂದು ಮಹತ್ವ ಬರುತ್ತದೆ. ನನ್ನ ಪಾಲಿಗೆ ಇದಂತೂ ಹಿಂಸಾತ್ಮಕ ವಿಧಾನಕ್ಕೆ ಒಂದು ಪರ್ಯಾಯ. ಕೆಲವು ಕೃತಿ, ಬೈಗಳು, ರೇಗಿಸುವ ನಡತೆ, ಸುಳ್ಳು ಹೇಳುವದು, ಇತರರನ್ನು ಗಾಸಿಗೊಳಿಸುವದು, ಕೊಲೆ ಮಾಡುವದು ಇಂಥವೆಲ್ಲ ಹಿಂಸೆಯ ಸಂಕೇತ. ಅದರಂತೆಯೇ ನಯ ವಿನಯ, ಯಾರಿಗೂ ನೋವು ಕೊಡದ ನಡತೆ; ಸತ್ಯಸಂಧತೆ ಇತ್ಯಾದಿ ಅಹಿಂಸೆಯ ಸಂಕೇತ. ನನ್ನ ಮಟ್ಟಿಗೆ ಪರದೇಶೀ ವಸ್ತ್ರ ಬಹಿಷ್ಕಾರವೂ ಅಹಿಂಸೆಯ ಸಂಕೇತವೇ. ಕ್ರಾಂತಿಕಾರಿ ಅಪರಾಧವನ್ನು ಒತ್ತಾಯ ತರುವ ಉದ್ದೇಶದಿಂದ ಮಾಡಲಾಗುತ್ತದೆ. ಆದರೆ ಆ ಒತ್ತಾಯ ಸಿಟ್ಟಿನದು, ದ್ವೇಷದ್ದು. ಅಹಿಂಸೆಯ ಕೃತಿಗಳಿಂದ ಆಗುವ ಒತ್ತಾಯ ಹಿಂಸಾಕೃತಿಯ ಒತ್ತಾಯಕ್ಕಿಂತ ಹೆಚ್ಚು ಪರಿಣಾಮಕಾರಿ ಎಂದು ನನ್ನ ವಾದ. ಈ ಒತ್ತಾಯ ಸದ್ಭಾವನೆಯದು, ನಮ್ರತೆಯದು. ಪರದೇಶಿ ವಸ್ತ್ರ ಬಹಿಷ್ಕಾರದಿಂದ ಇಂಥ ಸೌಮ್ಯ ಒತ್ತಾಯ ಆಗುತ್ತದೆ. ತಾವು ತರಿಸಿಕೊಳ್ಳುವ ಪರದೇಶಿ ವಸ್ತ್ರ ಹೆಚ್ಚಾಗಿ ಲ್ಯಾಂಕಾಷೈರಿನದು. ನಮ್ಮ ಆಮದು ಪದಾರ್ಥಗಳಲ್ಲಿ ಎಲ್ಲಕ್ಕಿಂತ ಅದೇ ಹೆಚ್ಚಿನದು. ಎರಡನೆಯದು ಸಕ್ಕರೆ. ಭಾರತದೊಡನೆ ಲ್ಯಾಂಕಾಷೈರಿನ ವ್ಯಾಪಾರವೇ ಬ್ರಿಟನ್ನಿನ ಮುಖ್ಯ ಆಸಕ್ತಿ. ಭಾರತದ ರೈತನನ್ನು ನಾಶಮಾಡಿ ಅವನ ಮೇಲೆ ಆಂಶಿಕ ನಿರುದ್ಯೋಗವನ್ನೂ ಹೊರಿಸುವುದು ಎಲ್ಲಕ್ಕಿಂತ ಹೆಚ್ಚು ಇದೇ. ಆತನಿಗೆ ಇದ್ದದ್ದು ಇದೊಂದೇ ಉಪವೃತ್ತಿ. ಅದನ್ನು ಇದು ಇಲ್ಲದಂತೆ ಮಾಡಿತು. ಆದ್ದರಿಂದ ನಮ್ಮ ರೈತ ಬದುಕಬೇಕು ಎಂದರೆ ಪರದೇಶಿ ವಸ್ತ್ರ ಬಹಿಷ್ಕಾರ ಅತ್ಯಗತ್ಯ. ಹೀಗೆ ನಮ್ಮ ರೈತನನ್ನು ಅಗ್ಗವಾದ ಮತ್ತು ಚೆಂದಕಾಣುವ ಪರದೇಶಿ ವಸ್ತ್ರ ಕೊಳ್ಳುವದನ್ನು ಬಿಡುವಂತೆ ಮಾಡುವದು ಒಂದೇ ಉದ್ದೇಶವಲ್ಲ ಈ ಬಹಿಷ್ಕಾರಕ್ಕೆ. ತನ್ನ ಬಿಡುವಿನ ವೇಳೆಯಲ್ಲಿ ಅರಳೆಯನ್ನು ಹಿಂಜುವುದು, ನೂಲುವದು ಮುಂತಾದ್ದನ್ನು ಮಾಡಿ ಅದನ್ನು ತನ್ನ ಹಳ್ಳಿಯಲ್ಲೆ ನೇಯಿಸಿಕೊಳ್ಳುವಂತೆ ಅವನ ಮನವೊಲಿಸಿ ಅಥವಾ ಹಾಗೆ ಹಳ್ಳಿಯಲ್ಲಿ ನೇಯ್ದ ಖಾದಿಯನ್ನು ಉಟ್ಟು ತೊಟ್ಟು ಪರದೇಶಿ ವಸ್ತ್ರವನ್ನು, ಅಷ್ಟೇ ಅಲ್ಲ ದೇಶಿ ಗಿರಣಿಬಟ್ಟೆಯನ್ನು ಕೊಳ್ಳುವುದನ್ನೂ ತಪ್ಪಿಸುವದು, ಕೊಳ್ಳದಂತೆ ಮಾಡುವುದು ಇದರ ಉದ್ದೇಶ. ಹೀಗೆ ಕೈನೂಲು ಕೈನೇಯ್ಗೆಯ ಮೂಲಕ ಎಂದರೆ ಖಾದಿಯ ಮೂಲಕ ಪರದೇಶಿ ವಸ್ತ್ರ ಬಹಿಷ್ಕಾರ ನಡೆಸುವದು, ರೈತನಿಗೆ ದುಡ್ಡು ಮಿಗಿಸುವದು ಮಾತ್ರವಲ್ಲದೆ, ಒಂದು ಉತ್ತಮ ಸಮಾಜ ಸೇವೆ ಮಾಡಲು ನಮ್ಮ ಕೆಲಸಗಾರರಿಗೆ ಅದು ಅವಕಾಶ ಮಾಡಿಕೊಡುತ್ತದೆ. ಇದರಿಂದ ಹಳ್ಳಿಯವರ ಪ್ರತ್ಯಕ್ಷ ಸಂಪರ್ಕ ನಮಗೆ ಆಗುತ್ತದೆ. ಅವರಿಗೆ ನಿಜವಾದ ರಾಜಕೀಯ ಬಣ್ಣ ಕೊಟ್ಟು, ಅವರು ಸ್ವಾವಲಂಬಿಗಳೂ, ಸ್ವಶ್ರಮಿಗಳೂ ಆಗುವಂತೆ ಮಾಡುತ್ತದೆ.

ಮುಂದುವರಿಯುವುದು...

ಅಂದಿನ ಪತ್ರಿಕಾ ವರದಿಗಳಲ್ಲಿ ಬಾಬು ಜಗಜೀವನರಾಮ್

(05.04.1908–06.07.1986)

– ರುದ್ರಪ್ಪ ಹನಗವಾಡಿ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಹರಿಜನರ ಸ್ಥಿತಿ : ನವದೆಹಲಿಯಲ್ಲಿ ನಡೆದ ಗಾಂಧಿ ಶತಮಾನೋತ್ಸವ ಸಮಾರಂಭದಲ್ಲಿ "ಮಹಾತ್ಮ ಗಾಂಧಿ ಮತ್ತು ಸಮಾಜಿಕ ಬದಲಾವಣೆ" ಕುರಿತು ಶ್ರೀ ಬಾಬು ಜಗಜೀವನರಾಮ್ ಅವರು 'ಗಾಂಧೀಜಿ ಹೊಸ ಚಿಂತನೆಗಳನ್ನು ಹಿಂದೂ ಆತ್ಮಸಾಕ್ಷಿಯ ಗ್ರಹಿಸಬೇಕೆಂದು ನಿರೀಕ್ಷಿಸುತ್ತಾ ಅಸ್ಪೃಶ್ಯತಾ ನಿವಾರಣೆ ತೀವ್ರವಾದ ತುರ್ತೆಂದು ಪರಿಗಣಿಸಿ ಜಾತಿ ವರ್ಣಗಳ ತಮ್ಮ ಪರಿಕಲ್ಪನೆಗೆ ಒತ್ತುಕೊಟ್ಟರು ಮತ್ತು ವಿಶದಪಡಿಸಿದರು. ಇದಕ್ಕೆ ಮುನ್ನ ಅವರು, ಸಾಮಾಜಿಕ ಸ್ತರಗಳ ಹಿನ್ನೆಲೆಯನ್ನು ಮತ್ತು ಭಾರತದ ಬದಲಾಗುತ್ತಿರುವ ಸಾಮಾಜಿಕ ಪ್ರಜ್ಞೆಯನ್ನೂ ಚಿತ್ರಿಸಿದರು. ತಮ್ಮ ಭಾಷಣವನ್ನು ಸಮಾಪ್ತಿಗೊಳಿಸುತ್ತಾ ಅವರು ಇಸ್ಲಾಂ ಮತ್ತು ಕ್ರಿಶ್ಚಿಯನ್ ಸಾಮಾಜಿಕ ವರ್ಗೀಕರಣದಲ್ಲಿ ವೈಚಾರಿಕ ಬದಲಾವಣೆಗಳನ್ನು ತರುವಲ್ಲಿ ಗಾಂಧೀಜಿ ವಿಫಲರಾದರು. ಆದರೆ ಅವರು ಅಸ್ಪೃಶ್ಯರನ್ನು ಬಿಡುಗಡೆಯ ಹಾದಿಗೆ ತಂದು ನಿಲ್ಲಿಸಿದರು' ಎಂದರು.

ಜೂನ್ 3ರಂದು ಪ್ರಸಿದ್ಧ ಸಮಾಜಸೇವಕ ಮತ್ತು ಲೇಖಕ ಕೆ.ಎಲ್. ಚಂಚ್ರೀಕ್ ಅವರು ಸಂಪಾದಿಸಿರುವ "ಏಕ್ ಯುಗ್; ಏಕ್ ಪ್ರಥೀಕ್ ಸ್ಮರಣ ಸಂಚಿಕೆ ಅರ್ಪಿಸುತ್ತಾ ರಾಷ್ಟ್ರಪತಿ ವಿ.ವಿ.ಗಿರಿ ಅವರು ಶ್ರೀ ಜಗಜೀವನರಾಮ್ ಅವರು ದೇಶಕ್ಕಾಗಿ ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ದುರ್ಬಲವರ್ಗಗಳ ಏಳಿಗೆಗಾಗಿ ಮಾಡಿರುವ ಸೇವೆ ಮತ್ತು ಮಹಾ ತ್ಯಾಗಗಳಿಗಾಗಿ ಪ್ರಶಂಸಿಸಿದರು.

ವಿಜ್ಞಾನ–ತಂತ್ರಜ್ಞಾನ ಕುರಿತು

ಅಣು ಮತ್ತು ಶಕ್ತಿ : ದೇಶದ ಪರಮಾಣು (ನ್ಯೂಕ್ಲಿಯರ್) ಉಪಕರಣಗಳನ್ನು ಶಾಂತಿಯುತ ಉದ್ದೇಶಗಳಿಗೆ ಬಳಸುವುದನ್ನು ಪರಿಶೀಲಿಸುತ್ತಿದೆ ಮತ್ತು ಅಣುಶಕ್ತಿ ಇಲಾಖೆಯು ನೀಡಿರುವ ಇತ್ತೀಚಿನ ವಾರ್ಷಿಕ ವರದಿಯನ್ನು ವಿಶ್ಲೇಷಿಸುತ್ತಿದೆ ಎಂದು ಕೇಂದ್ರದ ರಕ್ಷಣಾ ಸಚಿವರು ಹೇಳಿದ್ದಾರೆ.

-ಮದರ್ ಲ್ಯಾಂಡ್ (ನವದೆಹಲಿ) ಮೇ 10, 1972

ಭಾರತೀಯ ಜ್ಞಾನಕ್ಕೆ ಒತ್ತು : ಪೂನಾದ ರಕ್ಷಣಾಪಡೆ ವೈದ್ಯಕೀಯ ಕಾಲೇಜಿನಲ್ಲಿ ವೈದ್ಯಕೀಯ ಅಧಿವೇಶನವನ್ನು ಉದ್ಘಾಟಿಸುತ್ತಾ ರಕ್ಷಣಾ ಸಚಿವ ಶ್ರೀ ಜಗಜೀವನರಾಮ್ 'ಸಮಾಜದ ಅಗತ್ಯಕ್ಕೆ ಅನುಗುಣವಾಗಿ ವೈದ್ಯಕೀಯ ಶಿಕ್ಷಣವನ್ನು ಗಂಭೀರ ಕಾಳಜಿಯಿಂದ ಪುನರಚಿಸಬೇಕೆಂದು' ನಾಗರಿಕರು ಮತ್ತು ರಕ್ಷಣಾ ಪಡೆಯ ವೈದ್ಯಕೀಯ ವಿಜ್ಞಾನಿಗಳಿಗೆ ಕರೆ ನೀಡಿದರು. ಮುಂದುವರೆದು 'ಪಾಶ್ಚಾತ್ಯ ವಿಶ್ವವಿದ್ಯಾಲಯಗಳಲ್ಲಿ ವೈದ್ಯಕೀಯ ಶಿಕ್ಷಣ ಪದ್ಧತಿಯನ್ನೇ ಅವಲಂಭಿಸುವುದು, ಆಮದು ಮಾಡಿಕೊಳ್ಳುವುದು, ನಮ್ಮ ಈಗಿನ ಅಭಿವೃದ್ಧಿಯ ಹಂತದಲ್ಲಿ ಯುಕ್ತವಾದುದಲ್ಲ" ಎಂದರು.

-ಹಿಂದೂಸ್ಥಾನ್ ಟೈಮ್ಸ್ (ನವದೆಹಲಿ) ಫೆಬ್ರವರಿ 25.1972

ವಿದೇಶಾಂಗ ನೀತಿಯ ಕುರಿತು

ವಿದೇಶಾಂಗ ನೀತಿಯ ಮೇಲೆ ಕಾಂಗ್ರೆಸ್ ವಿಚಾರ ಸಂಕೀರ್ಣ:

ಪ್ರಧಾನ ಮಂತ್ರಿ ಇಂದಿರಾಗಾಂಧಿ ಅವರು ಉದ್ಘಾಟಿಸಿದ ಕಾಂಗ್ರೆಸ್ ಸಂಸದೀಯ ಪಕ್ಷ ಮತ್ತು ವಿದೇಶ ಸಂಬಂಧ ವಿಭಾಗವು ಆಯೋಜಿಸಿದ ಭಾರತದ ವಿದೇಶಾಂಗ ನೀತಿ ಕುರಿತ ಸಂಕೀರ್ಣದಲ್ಲಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ಜಗಜೀವನರಾಮ್ ಅವರು ಮಾತನಾಡುತ್ತಾ 'ರಾಷ್ಟ್ರೀಯ ಹಿತಾಸಕ್ತಿ, ಅಂತರಾಷ್ಟ್ರೀಯ ಭದ್ರತೆ ಮತ್ತು ಅಭಿವೃದ್ಧಿಗಳನ್ನು ಆಧರಿಸಿದ ವಿದೇಶಾಂಗ ನೀತಿಯನ್ನು ಭಾರತವು ಮುಂದುವರೆಸಲು ಇಚ್ಛಿಸುತ್ತದೆ' ಎಂದರು. ಮುಂದುವರೆದು 'ಭಾರತದ ದೃಢ ಮತ್ತು ಸಮರ್ಥ ವಿದೇಶಾಂಗ ನೀತಿಯ ಕಾರಣದಿಂದಾಗಿ ವಿಶ್ವವು ಅದರ ಮಾತುಗಳಿಗೆ ಕಿವಿಕೊಡುತ್ತಿದೆ' ಎಂದರು. ವಿದ್ವಾಂಸರು ಮತ್ತು ವಿವಿಧ ರಾಜ್ಯಗಳ 70 ಪ್ರತಿನಿಧಿಗಳು ವಿಚಾರ ಸಂಕೀರ್ಣದಲ್ಲಿ ಭಾಗವಹಿಸಿದ್ದರು.

-ಸೋಷಿಯಲಿಯನ್ಸ್ ಇಂಡಿಯಾ (ನವದೆಹಲಿ) 5.09.1970

ಇಂಡೋ–ಸೋವಿಯತ್ ಒಪ್ಪಂದ ಶಾಂತಿ ಭರವಸೆ : ಆಗಸ್ಟ್ 9 ರಂದು ದೆಹಲಿಯಲ್ಲಿ ಇಂಡೋ–ಸೋವಿಯತ್ ಶಾಂತಿ ಒಪ್ಪಂದದ ವಾರ್ಷಿಕೋತ್ಸವವನ್ನು ಉದ್ಘಾಟಿಸಿ ಮಾತನಾಡುತ್ತಾ ರಕ್ಷಣಾ ಸಚಿವ ಶ್ರೀ ಜಗಜೀವನರಾಮ್ ಅವರು 'ಭಾರತವು ವಿಶ್ವಾದ್ಯಂತ ಸ್ವಾತಂತ್ರ್ಯ ಮತ್ತು ವಿಮೋಚನಾ ಹೋರಾಟಗಳಿಗೆ ಯಾವಾಗಲೂ ಬೆಂಬಲ ನೀಡುತ್ತಾ ಬಂದಿದೆ, ಅಷ್ಟೇ ಅಲ್ಲ, ಸಾಮ್ರಾಜ್ಯಶಾಹಿಯ, ವಸಾಹತುಶಾಹಿಯ ಮತ್ತು ಗುಲಾಮಗಿರಿಯ ಕೊನೆಯ ಗುರುತು ಈ ಭೂಮಿಯ ಮೇಲಿರುವ ತನಕ ಹೋರಾಟಕ್ಕೆ ಬೆಂಬಲವನ್ನು ಮುಂದುವರೆಸುತ್ತಲೇ ಇರುತ್ತದೆ. ಸಾಮ್ರಾಜ್ಯಶಾಹಿ ಶಕ್ತಿಗಳು ಒಂದಲ್ಲ ಒಂದು ರೀತಿಯ ಉಪಾಯಗಳಿಂದ ಭೇದಿಸುವ ಹಾದಿಗಳನ್ನು ಹುಡುಕುತ್ತಿರುತ್ತವೆ, ಅಂತಹ ದುಷ್ಟ ತಂತ್ರಗಳು ಫಲಕಾರಿಯಾಗಲು ಏಷ್ಯಾ ಅವಕಾಶ ನೀಡುವುದಿಲ್ಲ'ವೆಂದು ಎಚ್ಚರಿಕೆ ನೀಡಿದರು.

- ಪೇಟ್ರಿಯಾಟ್ (ನವದೆಹಲಿ) ಆಗಸ್ಟ್ 10, 1972

ಭಾರತದ ವಿದೇಶಾಂಗ ನೀತಿಯು ಶಾಂತಿ, ಸಹಬಾಳ್ವೆ ಮತ್ತು ಅಭಿವೃದ್ಧಿ ತತ್ವಗಳನ್ನು ಆಧರಿಸಿದೆ.


ಶ್ರೀ ಜಗಜೀವನರಾಮ್-ವಿಮೆನ್ ಆನ್ ದಿ ಮಾರ್ಚ್
(ನವದೆಹಲಿ) ಅಕ್ಟೋಬರ್ 1970

ರಕ್ಷಣಾ ಸಚಿವ ಶ್ರೀ ಜಗಜೀವನರಾಮ್ ಅವರು 'ಡೈಲಿ ಟೆಲಿಗ್ರಾಫ್' ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ 'ಕಾಶ್ಮೀರದಲ್ಲಿ ವಿಶ್ವಸಂಸ್ಥೆಯ ಪಾತ್ರವನ್ನು ಕುರಿತು ಹೇಳಿರುವುದು ಸಕಾರಣವಾಗಿದೆ. ಭಾರತ ಮತ್ತು ಪಾಕಿಸ್ತಾನಗಳು ಸಮಸ್ಯೆಯನ್ನು ದ್ವಿಪಕ್ಷೀಯವಾಗಿ ಬಗೆಹರಿಸಿಕೊಳ್ಳಬೇಕೆಂಬ ಸಿಮ್ಲಾ ಒಪ್ಪಂದ ವಿಶ್ವಸಂಸ್ಥೆಗೆ ಈಗ ಅರಿವಿಗೆ ಬಂದಿದೆ' ಎಂದು ಹೇಳಿದರು.

- ವಿಶ್ವಸಂಸ್ಥೆ ಮತ್ತು ಕಾಶ್ಮೀರ-ಶ್ರೀ ಜಗಜೀವನರಾಮ್,
ಮದರ್‌ಲ್ಯಾಂಡ್ (ನವದೆಹಲಿ) ಆಗಸ್ಟ್ 4, 1972

ಕೋಮು ಸೌಹಾರ್ದ

– ಡಾ. ಹೆಚ್.ಎಸ್. ದೊರೆಸ್ವಾಮಿ



(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಮತೀಯ ಗಲಭೆಗಳಾದರೆ ಸಾವುನೋವಿಗೆ ಈಡಾಗುವವರು ಸಾಮಾನ್ಯ ಮುಗ್ಧ ಜನ, ಘರ್ಷಣೆಗಳಿಗೆ ಪ್ರಚೋದನೆ ನೀಡುವವರು ಅಲಕ್ ಆಗಿಬಿಡುತ್ತಾರೆ. ಅವರು ನಾಯಕರುಗಳೆನಿಸಿಕೊಂಡು ಬಿಡುತ್ತಾರೆ. ಬಲಿಪಶುವಾಗುವವರು, ಗುಂಡಿಗೆ ಆಹುತಿಯಾಗುವವರು ಈ ಪುಢಾರಿಗಳಲ್ಲ, ಅವರ ಪ್ರೇರಣೆಗೆ ಒಳಗಾದ ಬಡಪಾಯಿಗಳು. ರಾಜಕಾರಣಿಗಳ ಸ್ವಾರ್ಥ, ಅಧಿಕಾರಶಾಹಿಯ ದಬ್ಬಾಳಿಕೆ, ಜಾತೀಯವಾದಿಗಳ ಕುಬ್ಜ ದೃಷ್ಟಿ, ಮತಧರ್ಮಗಳ ಹೆಸರಿನಲ್ಲಿ ನಡೆಯುವ ಘರ್ಷಣೆಗಳು, ಇವೆಲ್ಲ ದೇಶದ ಐಕ್ಯತೆ, ಸಮಗ್ರತೆಗಳನ್ನು ಒಡೆಯುವ ಮುಖ್ಯ ಸಾಧನಗಳು.ಈ ನಮ್ಮ ಸಮಾಜದ ವ್ಯವಸ್ಥೆ ಒಂದು ಉಕ್ಕಿನ ಕೋಟೆ. ಇಲ್ಲಿ ಮೌಲ್ಯಗಳನ್ನೂ, ಆದರ್ಶಗಳನ್ನೂ, ಕಾರ್ಯಕ್ರಮಗಳನ್ನೂ ರೂಪಿಸುವವರು ರಾಜಕೀಯ ಹಿತಾಸಕ್ತಿಗಳು ಮತ್ತು ಜಾತಿವಾದಿಗಳು, ಅವರಿಗೆ ಬೆಂಬಲಿಗರಾಗಿ ನಿಲ್ಲುವ ಮಠಾಧಿಪತಿಗಳು, ಮುಲ್ಲಾಗಳು, ಧರ್ಮಗುರುಗಳು. ಇದೊಂದು ವೈಯಕ್ತಿಕ ಹಿತಾಸಕ್ತಿಯ ಜಾಲವೇ ಸರಿ. ಯಾರ ಬಳಿಯಲ್ಲಿ ಹಣವಿದೆಯೋ, ಯಾರಿಗೆ ಮುಗ್ಧ ಹಿಂದು, ಕ್ರಿಶ್ಚಿಯನ್ ಮುಸ್ಲಿಂ, ಸಿಖ್‌ರಲ್ಲಿ ಆವೇಶ ತುಂಬಿ, ಕೊಲೆ ಮಾಡಲು ಪ್ರೇರಣೆ ನೀಡುವ ಸಾಮರ್ಥ್ಯವಿದೆಯೋ ಅವರೇ ಈಗಿನ ನಮ್ಮ ನಾಯಕರು. ನಮ್ಮ ಹೆಂಡತಿ ಮಕ್ಕಳನ್ನು ಬಲಿಪಶುಗಳನ್ನಾಗಿ ಮಾಡಿ ಅವರ ಕೈಗೆ ಅಧಿಕಾರ ಹಸ್ತಾಂತರಿಗೊಳ್ಳುತ್ತಾರೆ. ಸಾಮಾಜಿಕ ರಾಜಕೀಯ ವ್ಯವಸ್ಥೆಗಳು ಎಷ್ಟು ಕಲುಷಿತವಾಗಿದೆ ಎಂದರೆ ಈ ಹಿಡಿ ಜನ ದೇಶವನ್ನು ತಮ್ಮ ಅಧೀನ ಮಾಡಿಕೊಳ್ಳಬಲ್ಲರು. ಇವರು ಜಾತೀವಾದ ಎಬ್ಬಿಸುವುದು ಅಧಿಕಾರ ಮತ್ತು ಹಣಕ್ಕಾಗಿ, ಮಠಾಧಿಪತಿಗಳು ಕಾವೀ ಧರಿಸುವುದು ಅದೇ ಕಾರಣಕ್ಕಾಗಿ, ಶಸ್ತ್ರಾಸ್ತ್ರಗಳನ್ನು ಬಾಂಬ್‌ಗಳನ್ನು ತಯಾರಿಸುವುದೂ, ಮಂತ್ರಿಯಾಗುವುದೂ, ಶಾಸಕರಾಗುವುದೂ ಅದಕ್ಕಾಗಿಯೇ. ಜನಸಾಮಾನ್ಯರು ಗಾಂಧೀಜಿಯ ಅಹಿಂಸೆಯಲ್ಲಿ ಪೂರ್ಣ ನಂಬಿಕೆ ಇಟ್ಟಿರಲಿಲ್ಲ. ಗಾಂಧಿಯವರಿಗೆ ಅಹಿಂಸೆ ಒಂದು ಧರ್ಮ **(Creed)** ಆಗಿತ್ತು. ಉಳಿದವರಿಗೆ ಅದು ಒಂದು **Expediency** ಅನುಕೂಲ ಸಿಂಧು ಮಾರ್ಗವಾಗಿತ್ತು. ಅನುಕೂಲಸಿಂಧುವಾಗಿ ಬಳಸಿಕೊಂಡವರ ಅಹಿಂಸೆಯನ್ನು ಗಾಂಧೀಜಿ ದುರ್ಬಲರ ಅಹಿಂಸೆ ಎಂದು ಕರೆದರು. ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ತಂದು ಕೊಟ್ಟಿದ್ದು ಈ ದುರ್ಬಲರ ಅಹಿಂಸೆಯೇ. ಈ ದುರ್ಬಲರ ಅಹಿಂಸೆಯೇ ಬ್ರಿಟಿಷರನ್ನು ಗಂಟು ಮೂಟೆ ಕಟ್ಟಿಕೊಂಡು ಭಾರತವನ್ನು ಬಿಟ್ಟುಹೋಗುವಂತೆ ಮಾಡಿರಬೇಕಾದರೆ ನಿಜವಾದ ಅಹಿಂಸೆಗೆ ಇನ್ನೆಂಥ ಪ್ರಚಂಡ ಶಕ್ತಿ ಇರಬೇಕು ಎಂಬುದನ್ನು ನಾವು ಊಹಿಸಿಕೊಳ್ಳಬೇಕು. ಇಂದಿಗೂ ಭಾರತ ಅಹಿಂಸೆಯನ್ನು ಕಾಯಾ ವಾಚಾ ಮನಸಾ ಪಾಲಿಸುವುದಾದರೆ, ಅದರಿಂದ ಎಂಥ ಅದ್ಭುತ ಶಕ್ತಿ ಹೊರಹೊಮ್ಮೀತು. ಸಮಾಜದ ಮೇಲೆ ಅದು ಎಂಥ ಸತ್ಪರಿಣಾಮ ಬೀರೀತು ಎಂಬುದನ್ನು ಚಿತ್ರಿಸಿಕೊಳ್ಳಬಹುದು.


ಮುಂದುವರಿಯುವುದು...

ಪುಸ್ತಕ ಪರಿಚಯ

– ಡಾ. ಎಸ್. ರಾಮಲಿಂಗೇಶ್ವರ (ಸಿಸಿರಾ)

ಕಟ್ಟುವ ಹಾದಿಯಲ್ಲಿ

ಕೃತಿಕಾರರು : ಕಡಿದಾಳ್ ಪ್ರಕಾಶ್, ಪ್ರಕಾಶಕರು : ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ, ಕುಪ್ಪಳ್ಳಿ



ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಹುಟ್ಟು ಮತ್ತು ಬೆಳವಣಿಗೆ ಕುರಿತು ಕ್ರಮಬದ್ಧವಾದ ದಾಖಲೆಯೊಂದರ ಅಗತ್ಯವನ್ನು ಪೂರೈಸಿಕೊಟ್ಟವರು, ಪ್ರತಿಷ್ಠಾನದ ಕಾರ್ಯದರ್ಶಿ ಶ್ರೀ ಕಡಿದಾಳ್ ಪ್ರಕಾಶ್ ಅವರ ಕಾರ್ಯನಿಷ್ಠೆ ಶ್ಲಾಘನೀಯವಾದದ್ದು, ಅಭಿನಂದನಾರ್ಹರೂ ಕೂಡ. ಲೇಖಕರೇ ತಮ್ಮ ಮಾತುಗಳಲ್ಲಿ ಇದು ನನ್ನ ಮೊದಲ ಪುಸ್ತಕ ರೂಪದ ಬರಹ ಎಂದು ಹೇಳಿಕೊಂಡಿದ್ದಾರೆ. ಪ್ರತಿಷ್ಠಾನದ ಪ್ರಾರಂಭದಿಂದಲೂ ಇದರ ಬೆಳವಣಿಗೆಯನ್ನು ದಾಖಲಿಸಬೇಕೆನ್ನುವ ಹಂಬಲವನ್ನು ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರ ಸಲಹೆ ಸೂಚನೆಯನ್ನು ಅಕ್ಷರ ರೂಪದಲ್ಲಿ ತೆರೆದಿಡುವ ಪ್ರಯತ್ನ ಮಾಡಿರುವುದು ಸಂತೋಷದ ಸಂಗತಿಯಾಗಿದೆ. ಕುವೆಂಪು ಅವರನ್ನು ಕಂಡು ಅವರೊಡನೆ ಮಾತನಾಡಿದ ನೆನಪನ್ನು, ಅವರಿಂದ ಪ್ರಭಾವ ಬೀರಿದ ಸಂದೇಶ–ಸಂಬಂಧಗಳನ್ನು ಪ್ರಾರಂಭಿಕ ಲೇಖನದಲ್ಲಿ ತಿಳಿಸಿದ್ದಾರೆ. ಕುಪ್ಪಳ್ಳಿಯ ಪರಿಸರ, ಅನೇಕ ಚಿತ್ರಗಳು ಪೂರಕವಾಗಿದ್ದು ಕನ್ನಡ ಸಾರಸ್ವತ ಲೋಕಕ್ಕೆ ಕುವೆಂಪು ಅವರನ್ನು ಸಮಗ್ರವಾಗಿ ಅರಿಯಲು, ಸಾಧ್ಯವಾಗುವ ಹಾಗೆ 'ಕಟ್ಟುವ ಹಾದಿಯಲ್ಲಿ' ಕೃತಿಯು ಸಹಕಾರಿಯಾಗುತ್ತದೆ. ಅಂದಿನ ಮುಖ್ಯಮಂತ್ರಿ ಎಸ್. ಬಂಗಾರಪ್ಪ ಅವರ ದೂರದೃಷ್ಟಿಯಿಂದಾಗಿ 1992ರಲ್ಲಿ ಕರ್ನಾಟಕ ಸರ್ಕಾರ ಆರಂಭ ಮಾಡಿದ ಈ ಪ್ರತಿಷ್ಠಾನವು ಇಡೀ ಭಾರತದಾದ್ಯಂತ ಸಾಹಿತ್ಯ ಚೇತನಗಳ ಅಭಿಲಾಶೆಯಂತೆ ಕುವೆಂಪು ಪ್ರತಿಷ್ಠಾನ ಕಾರ್ಯನಿರ್ವಹಿಸುತ್ತಿದೆ. ರಾಷ್ಟ್ರೀಯ ಮಟ್ಟದಲ್ಲಿ ಕುವೆಂಪು ಅವರ ಸಮಗ್ರ ಸಾಹಿತ್ಯವನ್ನು, ವಿಶ್ವಮಾನವ ಸಂದೇಶ ಹಾಗೂ ಸರ್ವೋದಯದ ಕಲ್ಪನೆಯನ್ನು ಪ್ರಸಾರ ಮಾಡುವ ಒಂದು ದೊಡ್ಡ ಸಂಸ್ಥೆಯಾಗಿ ಕುವೆಂಪು ಜನ್ಮತಾಳಿದ ನೆಲದಿಂದಲೇ ಜಗತ್ತಿಗೆ ವಿಸ್ತರಿಸುವ ಕಾಯಕವನ್ನು ಪ್ರತಿಷ್ಠಾನ ಮಾಡುತ್ತಿರುವುದನ್ನು ಎಳೆಎಳೆಯಾಗಿ ವಿವರಿಸಿದ್ದಾರೆ. 28 ಲೇಖನಗಳ ಮಣಿಮಾಲೆಯಂತಿರುವ ಅತ್ಯುತ್ತಮ ಮುದ್ರಣದೊಂದಿಗೆ, ಕುವೆಂಪು ಅವರ ಜೀವನ, ಸಾಹಿತ್ಯ, ಪರಿಸರ ಹಾಗೂ ಪ್ರಶಸ್ತಿಗಳ ದಾಖಲೀಕರಣವನ್ನು ಈ ಕೃತಿಯು ಪರಿಚಯಿಸುತ್ತದೆ. ಈ ಕೃತಿಯನ್ನು ರಚಿಸಿದ ಶ್ರೀ ಕಡಿದಾಳ್ ಪ್ರಕಾಶ್ ಅವರಿಗೆ ಗಾಂಧಿ ಭವನದ ಪರವಾಗಿ ಅಭಿನಂದನೆಗಳು

ಒಪ್ಪೋಲೆ : 'ಬಾಪು ಪ್ರಪಂಚ' ಜೂನ್ ತಿಂಗಳ ಸಂಚಿಕೆಯಲ್ಲಿ ಹೆಮ್ಮೆಯ ಕನ್ನಡಿಗ : ಡಾ. ಸಿದ್ಧಲಿಂಗಯ್ಯ ಅವರ ಲೇಖನದಲ್ಲಿ ಅವರ ಜನನ ಹಾಗೂ ಮರಣ ದಿನಾಂಕಗಳು ತಪ್ಪಾಗಿ ಮುದ್ರಣಗೊಂಡಿದೆ. ಸರಿಯಾದ ಜನ್ಮ ದಿನಾಂಕ 3.2.1954. ಹಾಗೂ ನಿಧನರಾದ ದಿನಾಂಕ 11.11.2021.

ನವ ಭಾರತ ನಿರ್ಮಾಪಕರು : ಲೋಕ ಮಾನ್ಯರು : ಶತದಿನ ಸಂಸ್ಮರಣೆ

– ಇಂದಿರಾ ಕೃಷ್ಣಪ್ಪ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಲಕ್ಷಾಂತರ ಜನರು ಹೋರಾಡಿದ್ದಾರೆ. ತಮ್ಮ ಸ್ವಂತ ಹಿತಾಸಕ್ತಿಗಳನ್ನು ಬದಿಗಿಟ್ಟು ದೇಶವನ್ನು ವಿದೇಶಿಯರಿಂದ ಮುಕ್ತಗೊಳಿಸಲು ಜೀವನವನ್ನೇ ಪಣಕ್ಕಿಟ್ಟು ಶ್ರಮಿಸಿದ್ದಾರೆ. ಅಂತಹ ತ್ಯಾಗ, ನಿಸ್ವಾರ್ಥ ದೇಶಪ್ರೇಮಿಗಳ ಜೀವನವನ್ನು ಪರಿಚಯಿಸಲು ಈ ಅಂಕಣ.

ರಾಜದ್ರೋಹದ ಆಪಾದನೆ

ಟಿಳಕರ ಬಂಧನ ಮತ್ತು ವಿಚಾರಣೆ ರಾಜಕೀಯ ವಲಯದಲ್ಲಿ ಅವರಿಗೆ ಗೌರವ ತಂದುಕೊಟ್ಟಿತು. ಸಭೆ ಸಮಾರಂಭಗಳಲ್ಲಿ ಅವರಿಗೆ ಸಹಾನುಭೂತಿಗಳು ವ್ಯಕ್ತವಾದುವು. ಬ್ರಿಟನ್ನಿನಲ್ಲಿ ಭಾರತೀಯವಾಸಿಗಳು ಸಭೆ ಸೇರಿ ಟಿಳಕರಿಗೆ ವಿಧಿಸಿದ ಶಿಕ್ಷೆಯನ್ನು ಟೀಕಿಸಿದವು. ಅಮರಾವತಿ ಕಾಂಗ್ರೆಸ್ ಅಧಿವೇಶನದಲ್ಲಿ ಏರಿದ ಧ್ವನಿಯಲ್ಲಿ ಸುರೇಂದ್ರನಾಥ ಬ್ಯಾನರ್ಜಿ ಘೋಷಿಸಿದರು. "ನಾನು ನನ್ನ ಪರವಾಗಿ ಮತ್ತು ಭಾಷಾ ಪತ್ರಿಕೆಗಳ ಪರವಾಗಿ ಅಂತಃಕರಣಪೂರ್ವಕವಾಗಿ ಹೇಳುತ್ತಿದ್ದೇನೆ. ಟಿಳಕ್ ನಿರಪರಾಧಿ, ನಾನು ಅವರ ಬಗ್ಗೆ ಅನುಕಂಪ ವ್ಯಕ್ತಪಡಿಸುತ್ತೇನೆ. ಅವರಿಗಾಗಿ ದೇಶ ಕಣ್ಣೀರಿಡುತ್ತಿದೆ. ಅವರೊಂದಿಗೆ ದೈಹಿಕವಾಗಿ ಇರುವುದು ಸಾಧ್ಯವಿಲ್ಲದಿದ್ದರೂ ನಾನು ಮಾನಸಿಕವಾಗಿರುವೆ". ಕಾಂಗ್ರೆಸ್ ಅಧಿವೇಶನದಲ್ಲಿ ಟಿಳಕರ ಹೆಸರು ಹೇಳುತ್ತಿದ್ದಂತೆ ಜನ ದೀರ್ಘ ಕರತಾಡನ ಮಾಡಿದರು. ಟಿಳಕರ ಅನೇಕ ಸ್ನೇಹಿತರು ಸರ್ಕಾರಕ್ಕೆ ಕ್ಷಮೆಯಾಚಿಸಿ ಬಿಡುಗಡೆ ಹೊಂದಬೇಕೆಂಬ ಸಲಹೆ ನೀಡಿದರು. ಅದಕ್ಕೆ ಟಿಳಕರು ಉತ್ತರಿಸಿದ್ದು ಹೀಗೆ. "ಜನತೆಯಲ್ಲಿ ನನ್ನ ಸಾಧನೆ ನಿರ್ಧಾರವಾಗುವುದು ನನ್ನ ಗುಣಗಳಿಂದ". ದೇಶದ ದೃಷ್ಟಿಯಲ್ಲಿ ಟಿಳಕರು 'ಸಿಂಹ' ಆದರ್ಶ ನಾಯಕ, ಆದರೆ ಸರ್ಕಾರದ ದೃಷ್ಟಿಯಲ್ಲಿ ಅವರೊಬ್ಬ ಬಂಡುಕೋರ ರಾಜಕೀಯ ನಾಯಕರಲ್ಲಿರಬೇಕಾದ ಗುಣಗಳೇನೆಂಬುದನ್ನು ಅವರು ತೋರಿಸಿಕೊಟ್ಟಿದ್ದರು. ಟಿಳಕರಿಗೆ ಶಿಕ್ಷೆಯಾದ ಬಳಿಕ ಸುಧಾರಣಾವಾದಿಗಳು ಮತ್ತು ಡೆಕ್ಕನ್ ಸಭಾದ ಸದಸ್ಯರು ಅವರಿಂದ ದೂರ ಸರಿಯಲಾರಂಭಿಸಿದರು. ರಾಷ್ಟ್ರಸೇವೆಗಾಗಿ ತಮ್ಮನ್ನೇ ಸ್ವತಃ ದಹಿಸಿಕೊಳ್ಳಲು ಸಿದ್ಧರಾದ ಟಿಳಕರನ್ನು ನೆನೆದು ಜನ ಕಂಬನಿಗರೆಯಿತು. ಬ್ರಿಟಿಷ್ ಕಾನೂನಿನ ಎದುರು ಅವರೊಬ್ಬ ಅಪರಾಧಿ. ಆದರೆ ಸಹಸ್ರಾರು ಭಾರತೀಯರಿಗೆ ಅವರು ನಿರಪರಾಧಿ ಮುಗ್ಧ. ಟಿಳಕರನ್ನು ಮೊದಲಿಗೆ ಕಳುಹಿಸಿದ್ದು ಡೋಂಗಿ ಜೈಲಿಗೆ, ಅಲ್ಲಿ ಅವರು ಕಳೆದದ್ದು ಮೂರು ತಿಂಗಳು, ಬಳಿಕ ಅವರನ್ನು ಬೈದುಲ್ಲಾ ಜೈಲಿಗೆ ಸ್ಥಳಾಂತರಿಸಲಾಯಿತು. ಚಾಪೆ ಹೆಣೆಯುವುದು ಮತ್ತು ತೆಂಗಿನ ನಾರು ಜೋಡಿಸುವ ಕಾರ್ಯವನ್ನು ಅವರಿಗೆ ವಹಿಸಲಾಯಿತು. ಟಿಳಕ್ ಶ್ರಮಜೀವಿ, ತಮಗೆ ನಿರ್ವಹಿಸಿದ ಕಾರ್ಯವನ್ನು ತುಂಬ ಅಚ್ಚುಕಟ್ಟಾಗಿ ಮಾಡುತ್ತಿದ್ದರು. ಅವರೀಗ ಒಬ್ಬ ಆದರ್ಶ ಕೈದಿ. ಟಿಳಕ್ ಸಸ್ಯಾಹಾರಿ, ಜೈಲಿನಲ್ಲಿ ಅವರು ಸ್ವೀಕರಿಸುತ್ತಿದ್ದುದು ಬ್ರೆಡ್, ಈರುಳ್ಳಿ ಮತ್ತು ತರಕಾರಿ, ಭಾರತದ ದಂಡ ಸಂಹಿತೆಗೆ ಅನುಗುಣವಾಗಿ ಬ್ರಿಟಿಷ್ ಸರ್ಕಾರ ಅವರನ್ನು ನಡೆಸಿಕೊಂಡಿದ್ದು ಒಬ್ಬ ಸಾಮಾನ್ಯ ಅಪರಾಧಿಯಂತೆ. ಅಂದಿನ ದಿನಗಳಲ್ಲಿ ರಾಜಕೀಯ ಕೈದಿಗಳಿಗೆ ಮಾನ್ಯತೆ ಇರಲಿಲ್ಲ. ಟಿಳಕರ ತೂಕ ಎರಡು ತಿಂಗಳಲ್ಲಿ ಕಡಿಮೆಯಾಯಿತು. ಅವರ ಹದಗೆಡುತ್ತಿರುವ ಆರೋಗ್ಯ ಕಳವಳಕ್ಕೆ ಕಾರಣವಾಯಿತು. ಮುಂಬೈಯಲ್ಲಿ ಪುನಃ ಪ್ಲೇಗ್ ಕಾಣಿಸಿಕೊಂಡಿದ್ದರಿಂದ ಅವರನ್ನು ಪುಣೆಯ ಯರವಾಡ ಜೈಲಿಗೆ ಕಳುಹಿಸಲಾಯಿತು. ಅವರೀಗ ತಮಗೆ ಬೇಕಾದ ಹವಾಮಾನವಿರುವ ಸ್ಥಳಕ್ಕೆ ಬಂದಿದ್ದರು. ಟಿಳಕರ ಆರೋಗ್ಯದ ದೃಷ್ಟಿಯಿಂದ ಅವರಿಗೆ ಹಾಲು ಮತ್ತು ಬೆಣ್ಣೆ ನೀಡಲಾಗುತ್ತಿತ್ತು. ಓದಲು ಕೂಡ ಅವರಿಗೆ ಅವಕಾಶ ಕಲ್ಪಿಸಲಾಯಿತು. ಇದು ಅವರ ಬುದ್ಧಿಯ ಹಸಿವಿಗೆ ಆಹಾರ ಒದಗಿಸಿತು. ತತ್ತ್ವಶಾಸ್ತ್ರ ಧರ್ಮಗಳಿಗೆ ಸಂಬಂಧಿಸಿದಂತೆ ಅವರು ಪುಸ್ತಕಗಳನ್ನು ಓದಬಹುದಿತ್ತು. ಆದರೆ ಸ್ಥಳೀಯ ಪತ್ರಿಕೆಗಳನ್ನು ಮಾತ್ರ ಅವರಿಗೆ ನೀಡಲಾಗುತ್ತಿರಲಿಲ್ಲ. ಜೈಲಿನಲ್ಲಿದ್ದಾಗಲೇ ಅವರು 'ದಿ ಆರ್ಕಟಿಕ್ ಹೋಮ್ ಇನ್ ವೇದಾಸ್' ಪುಸ್ತಕಕ್ಕೆ ಟಿಪ್ಪಣಿಗಳನ್ನು ರಚಿಸಿಕೊಂಡರು. ಇದು ಆರ್ಯನ್ನರ ನಾಗರಿಕತೆ ಮತ್ತು ವೇದದ ಮೂಲ ಕುರಿತಂತೆ ವಿದ್ವಾಂಸರು ತಮ್ಮ ನಿಲವು ಬದಲಾಯಿಸಿಕೊಳ್ಳಲು ಸಾಧ್ಯವಾಯಿತು.



ಟಿಳಕರನ್ನು ಸೆರೆಮನೆಯಿಂದ ಬಿಡುಗಡೆ ಮಾಡಬೇಕೆಂದು ಅವರು ಸ್ನೇಹಿತರು ಭಾರತದಲ್ಲೂ ಇಂಗ್ಲೆಂಡಿನಲ್ಲೂ ಸತತ ಪ್ರಯತ್ನ ನಡೆಸಿಯೇ ಇದ್ದರು. ತಾವು ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುವುದಿಲ್ಲವೆಂದು ಟಿಳಕರು ಮುಚ್ಚಳಿಕೆ ಬರೆದು ಕೊಟ್ಟರೆ ಅವರನ್ನು ಬಿಡುಗಡೆ ಮಾಡುವುದಾಗಿ ಸಲಹೆ ಬಂತು. ಆದರೆ ಟಿಳಕುರ ಇಂತಹ ಮುಚ್ಚಳಿಕ ಬರೆದುಕೊಡುವರೆಂದು ಊಹಿಸುವುದೂ ಕಷ್ಟವಾಯಿತು. ಬ್ರೂಯಿನ್ ಮತ್ತು ರಾಜಿ ಅಬ್ಬಾಜಿ ಖರೆ ಅವರ ಮಧ್ಯಸ್ಥಿಕೆಯಿಂದ ಒಪ್ಪಂದವೊಂದಕ್ಕೆ ಬರಲಾಯಿತು. ಟಿಳಕರನ್ನು ಪುನಃ ರಾಜದ್ರೋಹದ ಆರೋಪದ ಮೇಲೆ ವಿಚಾರಣೆ ನಡೆಸಿದಲ್ಲಿ ಈಗ ಆರು ತಿಂಗಳು ಕಡಿಮೆಗೊಳಿಸಿದ ಶಿಕ್ಷೆಯ ಅವಧಿಯನ್ನೂ ಸೇರಿಸಿ ಶಿಕ್ಷೆ ವಿಧಿಸಲಾಗುವುದು.

ಮುಂದುವರಿಯುವುದು...



ತಿಲಕರನ್ನಿರಿಸಿದ್ದ ಸೆರೆಮನೆ

ಗಾಂಧಿ ಹೆಜ್ಜೆ ಜಾಡಿನಲ್ಲಿ ಸಾಗಿದವರು

– ಡಾ. ಗಣನಾಥಶೆಟ್ಟಿ ಎಕ್ಕಾರು

ಗಾಂಧೀಜಿ ಅವರ ತತ್ವ, ಸಿದ್ಧಾಂತ, ಆದರ್ಶಗಳನ್ನು ಅಳವಡಿಸಿಕೊಂಡು, ಅವರ ಹಾದಿಯಲ್ಲೇ ಸಾಗಿದವರ ಕುರಿತಾದ ಲೇಖನಮಾಲೆ ಇದಾಗಿದೆ. ಜನಪ್ರಿಯತೆಗಾಗಿ, ಗೌರವಕ್ಕಾಗಿಯೋ ಮತ್ತು ಪ್ರಭಾವಕ್ಕಾಗಿಯೋ ಕಾತರಿಸದವರು, ತಲೆಮಾರಿನ ಹಿಂದಿನ ಅವರ ಬದುಕು ಸರ್ವರಿಗೂ ಆದರ್ಶವಾಗಿದೆ.

ರಾಮ ನಾರಾಯಣ ಪೈ ಮೂಡ್ಲಗಿರಿ

ಗಾಂಧೀಜಿ ಅವರ ತತ್ವ-ಆದರ್ಶಗಳನ್ನು ಮೈಗೂಡಿಸಿಕೊಂಡಿದ್ದ ರಾಮನಾರಾಯಣ ಪೈ ಅವರಿಗೆ ತಂದೆಯಿಂದ ಬಳುವಳಿಯಾಗಿ ಬಂದ ಸೇವಾ ಮನೋಭಾವದಿಂದಾಗಿ ಸಣ್ಣ ಪ್ರಾಯದಲ್ಲಿಯೇ ಸ್ವಾತಂತ್ರ್ಯ ಚಳುವಳಿ, ಕಾರ್ಯಕರ್ತರ ಒಡನಾಟ, ಹೋರಾಟಗಳಲ್ಲಿ ಭಾಗವಹಿಸಲು ಕಾರಣವಾಯಿತು.

ಶಿಷ್ಟಮಂಡಳದ ಸದಸ್ಯರಾಗಿದ್ದ ಪೈ ಅವರು, 1917ರಲ್ಲಿ ಬಿಳಗಿಯಲ್ಲಿ ನಡೆದ ತಾಲೂಕು ವನದುಃಖ ನಿವಾರಣಾ ಸಭೆಯ ಕಾರ್ಯದರ್ಶಿಯಾಗಿ ಕೆಲಸಮಾಡಿದ್ದರು. 1921ರ ಅಗಸ್ಟ್‌ನಿಂದ ಬಿಳಗಿಯಲ್ಲಿ ಪ್ರಾರಂಭಿಸಲಾದ ರಾಷ್ಟ್ರೀಯಶಾಲೆಗೆ ಸಹಾಯಕವಾದ ಮುಷ್ಠಿಫಂಡ್ ಸಂಗ್ರಹಕ್ಕೆ ಮುಖ್ಯಕಾರ್ಯದರ್ಶಿಯಾಗಿ ದುಡಿದರು. ಮನೆಮಾಳಿಗೆಯ ಮೇಲೆ ವಾಚನಾಲಯ ಪ್ರಾರಂಭಿಸಿ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದಂತೆ ಪ್ರಕಟವಾಗುತ್ತಿದ್ದ ಕರಪತ್ರ, ಲೇಖನಗಳು ಮತ್ತು ಬಾಲಗಂಗಾಧರ ತಿಲಕರ ಮರಾಠಿ ಕೇಸರಿ ಪತ್ರಿಕೆ, ಕನ್ನಡ ಧುರೀಣ, ಕಾನಡಾವೃತ್ತ ಪತ್ರಿಕೆ ತರಿಸಿ ಆಸಕ್ತರಿಗಾಗಿ ಓದಿಸುತ್ತಿದ್ದರು. ಶಿಷ್ಯಮಂಡಳಕ್ಕೆ ಸ್ವಯಂ ಪ್ರೇರಿತರಾಗಿ ದೇಣಿಗೆ ನೀಡಿದ, ವಂತಿಗೆ ಪಡೆದ ಖರ್ಚು-ವೆಚ್ಚ ಲೆಕ್ಕ ಇಡುತ್ತಿದ್ದರು. 1922ನೇ ಏಪ್ರಿಲ್ 6 ರಂದು ಬಿಳಗಿಯಲ್ಲಿ ನಡೆದ ಹಿಂದು-ಮುಸ್ಲಿಂ ಐಕ್ಯತಾ ದಿನಾಚರಣೆ ವ್ಯವಸ್ಥೆ ಮಾಡಿದರು. ಅವರು ಅದೇ ವರ್ಷ ಅತಿಮಳೆಯಿಂದ ಕೊಳೆರೋಗ ಕಾರಣ ಅಡಿಕೆ ಬೆಳೆ ಪೂರ್ಣನಾಶವಾಗಿದ್ದರಿಂದ ರೈತರ ತೀರ್ವೆ ಮಾಫ ಮಾಡಬೇಕೆಂಬ ಬೇಡಿಕೆಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದರು.

ವೃತ್ತಿಯಲ್ಲಿ ಅಂಚೆ ಕಛೇರಿಯ ಪೋಸ್ಟ್‌ಮಾಸ್ತರ್ ಆಗಿದ್ದರಿಂದ ಸ್ವಾತಂತ್ರ್ಯ ಹೋರಾಟಗಳ ಕರಪತ್ರಗಳನ್ನು ಹೋರಾಟಗಾರರಿಗೆ ತಲುಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. 1932 ಸಪ್ಟೆಂಬರ 22 ರಂದು ಭುವನಗಿರಿಯಲ್ಲಿ ನಡೆದ ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿ 9 ತಿಂಗಳು ಜೈಲು ವಾಸ ಅನುಭವಿಸಿದ್ದರು ಮತ್ತು ಅದಕ್ಕೂ ಮೊದಲೇ ಪೋಸ್ಟಮಾಸ್ತರ್ ಹುದ್ದೆಗೆ ರಾಜೀನಾಮೆ ನೀಡಿದ್ದರು. ಜೈಲಿನಿಂದ ಹಿಂತಿರುಗಿದ ನಂತರ ಪುನಃ ಪೋಸ್ಟಮಾಸ್ತರರಾಗಿ ಚಳುವಳಿಕಾರರಿಗೆ ಸಹಾಯಕರಾಗಿದ್ದರು.

ಭಾರತ ಸ್ವಾತಂತ್ರ್ಯವಾದ ನಂತರ ಜನಪರ ಕಾರ್ಯಗಳಲ್ಲಿ ನಿರತರಾದರು. 1948ರಲ್ಲಿ ಬಿಳಗಿ ಮಡಿವಾಳಕೇರಿಯ ಜನರಿಗೆ, ಕುಡಿಯುವ ನೀರಿನ ವ್ಯವಸ್ಥೆಗಾಗಿ ತೆರೆದ ಬಾವಿ ತೋಡುವ ಜವಾಬ್ದಾರಿ ಹೊತ್ತು ಸ್ವಯಂ ಸೇವಕರಾಗಿ ಕೆಲಸ ಮಾಡುವಾಗ ಬಾವಿಗೆ ಬಿದ್ದು ಕೈಕಾಲು ಸಂದಿ ಎಲುಬು ಚಿಪ್ಪು ಒಡೆದು ಹೋಗಿ 6 ತಿಂಗಳು ಶಿವಮೊಗ್ಗಾದ ಆಸ್ಪತ್ರೆಯಲ್ಲಿ ಆರೈಕೆ ಪಡೆದು ಊರಿಗೆ ಹಿಂತಿರುಗಿದ್ದರು. ನಂತರ ನೆಲದ ಮೇಲೆ ಕುಳಿತು ಕೊಳ್ಳಲಾಗದೆ, ನಡೆದಾಡಲು ಸಾಧ್ಯವಾಗದೆ ಜೀವನ ಪೂರ್ತಿ ಯಾತನೆ ಅನುಭವಿಸಿದರು. ಊರ ಉತ್ಸವಗಳಾದ ವನಭೋಜನ, ರಾಮನವಮಿ ರಥೋತ್ಸವ, ಗ್ರಾಮ ದೇವಿ ಜಾತ್ರೆ ಉತ್ಸವಗಳ ವ್ಯವಸ್ಥೆಗಳಿಗೆ ಪ್ರಮುಖರಾಗಿ ದುಡಿದರು. ವೈದ್ಯಕೀಯ ಹಾಗೂ ಶಿಕ್ಷಣದ ಸಲುವಾಗಿ ಪುಂಡಲೀಕ್ ಮಡಗಾಂವಕರ ಒಡನಾಡಿಯಾಗಿ ಬಿಳಗಿಯಲ್ಲಿ 1948ರಲ್ಲಿ ಸರಕಾರಿ ಆಸ್ಪತ್ರೆ ಹಾಗೂ 1967ರಲ್ಲಿ ಪ್ರೌಢಶಾಲೆ ಸ್ಥಾಪಿಸಿ ಕಟ್ಟಡಗಳನ್ನು ಕಟ್ಟಿಸಿದರು. ಪ್ರಾಥಮಿಕ ಶಾಲೆಯ ಶತಮಾನೋತ್ಸವ 1965ರಲ್ಲಿ ಆಚರಿಸಿ ಶಾಲೆಗೆ ಕೊಠಡಿಗಳನ್ನು ಕಟ್ಟಿಸಿದರು. ಕೇಂದ್ರ ಸರಕಾರದಿಂದ ಪ್ರತಿತಿಂಗಳು ದೊರೆಯುತ್ತಿದ್ದ ಸ್ವಾತಂತ್ರ್ಯ ಯೋಧರ ಗೌರವಧನವನ್ನು ಪ್ರೌಢಶಾಲೆಗೇ ನೀಡುತ್ತಿದ್ದರು.

ಮುಂದುವರೆಯುವುದು...

ಕವಿಗಳ ಕಣ್ಣಲ್ಲಿ ಮಹಾತ್ಮ ಗಾಂಧಿ

ಇವನೇನು ಪೈಲ್ವಾನನಲ್ಲ ಗಾಂಧೀಜಿ
ಆದರೆಂತಹ ಪೇಚು ಹಾಕಿ ತೋರಿಸಿದ
ಬಡಕಲಾಗಿಹ ದೇಹದಲಿ ಕೂಡ
ಜಗವ ನಡುಗಿಪ ಶಕ್ತಿ ಇರುವದೆಂದ
ಸತ್ಯದಲಿ ದೇವನನು ಇವನು ಕಂಡ
ನುಡಿದಂತೆ ನಡೆದ, ನಡೆದಂತೆ ನುಡಿದ

– ಜೀವಿ ಕುಲಕರ್ಣಿ

ಲಾವಣಿ

ಕಣ್ಣ ತೆರೆದು ನೋಡಿರಣ್ಣ ಚಿನ್ನದಂಥಾ ಹಿಂದುಸ್ಥಾನ
ಮಣ್ಣಗೂಡಿ ಆಗಿಹೋಯಿತಪ್ಪಾ ಮಸಣ
ಋಣ ಒಂಬತ್ನೂರ ಕೋಟಿ ರೂಪಾಯಿಯಿಂದ ಜೇರ್ಣಾ
ಬಣ್ಣವಿದು ಬಯಲಾಗಿ, ಸಂಪನ್ನನಾಗುವಂಥ ಯೋಚನಾ
ಅದಕ್ಕೆ ಹುಟ್ಟಬಂದಿದಾನ ಮಹಾತ್ಮಾಗಾಂಧಿ ಮೋಹನಾ

– ಓ.ವಿ. ಮೂಲಿಮನಿ

ಗಾಂಧಿ ಶರದ್ಗೀತ

ಮಣ್ಣ ಹಣತೆಯಲಿ ಬೆಳಕಿನ ಕುಡಿಗಳೂ
ಮಿಡಿದಿವೆ ಬಾನಿಗೆ ಕೈ ಮುಗಿದು
ಲಕ್ಷ ಕೋಟಿ ನಕ್ಷತ್ರದ ಗುಡಿಯಲಿ
ಗಾಂಧಿ ಚಿತ್ತವಿದೆ ಕಣ್ತೆರೆದು
ತಿಳಿ ಬೆಳದಿಂಗಳ ಶಾಲನು ಹೊದಿಸಿದೆ
ಗಾಂಧೀ ಹುಣ್ಣಿಮೆ ಜನಪದಕೆ
ಸೀಗೆ-ಗೌರಿ, ಸೇವಂತಿಗೆ ದಂಡೆಯು
ಆರತಿ ಬೆಳಗಿವೆ ಪ್ರತಿಪದಕೆ

– ನಾಡೋಜ ಚನ್ನವೀರ ಕಣವಿ

ವಿನೋಬಾ ಉವಾಚ : ಉಣಿಸಿ ಉಣುವುದೇ ಮಾನವೀಯತೆ

11.09.1895 – 15.11.1982


– ವೇಮಗಲ್ ಸೋಮಶೇಖರ್.

ವಿನೋಬಾಜಿ ಅವರ ತತ್ತ್ವ ಸಿದ್ಧಾಂತ ಆದರ್ಶಗಳ ಸಂಕ್ಷಿಪ್ತ ಪರಿಚಯ ಇಲ್ಲಿ ನೀಡಲಾಗಿದೆ.

ಲಕ್ಷಾಧಿಪತಿ, ಕೋಟ್ಯಾಧಿಪತಿಯತ್ತ ನೋಡಿದಾಗ ದುಃಖಿತನಾಗುತ್ತಾನೆ. "ನನ್ನ ಬಳಿ ಲಕ್ಷ ರೂಪಾಯಿ ಮಾತ್ರ ಇದೆ. ಅವನಲ್ಲಿ ಕೋಟಿ ರೂಪಾಯಿ ಇದೆಯಲ್ಲಾ ಆತ ಎಷ್ಟು ಸುಖವಾಗಿದ್ದಾನೆ!" ಎಂದು ಯೋಚಿಸಿ, ತಾನು 'ನಿರ್ಬಲ'ನೆಂದುಕೊಳ್ಳುತ್ತಾನೆ. ಹೀಗೆ ಮನುಷ್ಯ ತನಗಿಂತ ಮೇಲಿನವರನ್ನು ನೋಡಿದಾಗ ಆತನ ಹೃದಯದಲ್ಲಿ ಅಸೂಯೆ, ಹೊಟ್ಟೆಕಿಚ್ಚು ಹುಟ್ಟುತ್ತದೆ. ಮನುಷ್ಯ ತನಗಿಂತ ಕೆಳಗಿನವರನ್ನು ನೋಡಿದಾಗ ಆತನಿಗೆ ದುಃಖಿತರ ಸಮೂಹ ಕಂಡು ಬರುತ್ತದೆ. ಜನ ಎಷ್ಟು ದುಃಖಿತರಾಗಿದ್ದಾರೆ; ಎಷ್ಟು ಕೀಳು ಸ್ಥಿತಿಯಲ್ಲಿದ್ದಾರೆ ಎಂಬುದು ಆತನಿಗೆ ಕಂಡುಬರುತ್ತದೆ. ಅವರ ಚಿಂತೆ ಮಾಡುವವರು ಯಾರೂ ಇಲ್ಲದುದನ್ನು ಕಂಡಾಗ, ಅವರಿಗಿಂತ ತಾನು ಎಷ್ಟು ಸುಖವಾಗಿದ್ದೇನೆ ಎಂದು ಅನಿಸುತ್ತದೆ. 'ನನಗೆ 50ರೂ. ಆದರೂ ಸಿಕ್ಕುತ್ತದೆ. ಏನೂ ಸಿಕ್ಕದೆ ಇರುವವರರು ಈ ಪ್ರಪಂಚದಲ್ಲಿ ಎಷ್ಟೋ ಮಂದಿ ಇದ್ದಾರೆ' ಎಂದುಕೊಂಡು, 50ರೂ.ಯಲ್ಲಿ 5ರೂ. ದಾನ ಮಾಡಲು ಆತ ಮುಂದೆ ಬರುತ್ತಾನೆ. ಹೀಗೆ ತನಗಿಂತ ಕೆಳಗಿರುವವರನ್ನು ನೋಡುವುದರಿಂದ 50ರೂ. ಸಂಪಾದಿಸುವವನ ಹೃದಯದಲ್ಲಿ ಸಹಾನುಭೂತಿ, ಕರುಣೆ ಹುಟ್ಟುತ್ತದೆ.

ಪರ್ವತದ ಮೇಲೆ ಬಿದ್ದ ನೀರು ಸದಾ ಕೆಳಕ್ಕೆ ಹರಿಯುವಂತೆ, ನಮ್ಮ ದೃಷ್ಟಿ ಸಮಾಜದಲ್ಲಿ ಎಲ್ಲರಿಗಿಂತ ಕೆಳಗಿರುವವರ, ದುಃಖಿತರ, ಬಡವರ ಕಡೆಗೆ ಹರಿಯಬೇಕು. ಅವರ ನೆರವಿಗಾಗಿ ಸಾಧಿಸಬೇಕು. ತನಗೆ ಎರಡು ರೊಟ್ಟಿ ತಿನ್ನುವಷ್ಟು ಹಸಿವಿದ್ದು ತನ್ನ ಬಳಿ ಒಂದೇ ರೊಟ್ಟಿಯಿದ್ದರೂ, ಅದರಲ್ಲಿ ಒಂದು ತುಂಡು ಬೇರೆಯವರಿಗೆ ಕೊಟ್ಟು ಉಳಿದುದನ್ನು ತಿನ್ನುವುದೇ ಮನುಷ್ಯನ ಕರ್ತವ್ಯ. ಅದರಲ್ಲೇ ಮಾನವೀಯತೆ ಇರುವುದು. ನಾವೂ ನಮಗಿಂತ ಮೇಲಿರುವವರನ್ನು ನೋಡುತ್ತಾ ಇನ್ನೂ ಅವಶ್ಯಕತೆಗಳನ್ನು ಹೆಚ್ಚಿಸಿಕೊಳ್ಳುತ್ತಾ ಹೋಗುತ್ತೇವೆ. ಅದು ಮನುಷ್ಯತ್ವವಲ್ಲ. ಅದು ಮನುಷ್ಯನಲ್ಲಿ ಅಡಗಿರುವ ಪಾಶವಿಕತೆ.

ಮನೆಯಲ್ಲಿ ಬೇಕಾದಷ್ಟು ಆಹಾರ ಸಂಗ್ರಹ ಇದ್ದರೂ ಉಪವಾಸ, ವ್ರತ ಮಾಡುವುದು ಮಾನವನ ಮಾನವೀಯತೆ. ಮನುಷ್ಯ ಇಂದ್ರಿಯಗಳ ಮೇಲೆ 'ಅಂಕುಶ' ಇಟ್ಟುಕೊಳ್ಳಬೇಕು. ತಾನು ದುಃಖಿತನಾಗಿದ್ದರೆ, ತನಗಿಂತ ದುಃಖಿತರಾಗಿರುವವರೂ ಇರುವರೆಂಬುದನ್ನು ಯೋಚಿಸಬೇಕು. ಅಂಥಹವರಿಗೆ ನೆರವು ನೀಡಬೇಕು. ಬೇರೆಯವರಿಗೆ ಉಣಿಸಿ ಉಣುವುದೇ ಮಾನವನ ಲಕ್ಷಣ, ಸೊಬಗು, ಶೋಭೆ!. ಕುಟುಂಬದಲ್ಲಿ ತಾಯಿಗೆ ಗೌರವ ಹೆಚ್ಚು. 'ಮಗೂ, ಹಾಲು ಸ್ವಲ್ಪವೇ ಇದೆ; ನೀನೇ ಕುಡಿದುಬಿಡಪ್ಪಾ' ಎನ್ನುತ್ತಾಳೆ ತಾಯಿ. ಆಕೆ ಮಕ್ಕಳೆಲ್ಲರಿಗೂ ಉಣಿಸಿ ತಾನು ಉಣುವಳು; ಎಲ್ಲರನ್ನೂ ಮಲಗಿಸಿ ತಾನು ಮಲಗುವಳು. ಪ್ರಪಂಚದಲ್ಲಿ ನಾನೇ ಎಲ್ಲರಿಗಿಂತ ಕಷ್ಟದಲ್ಲಿದ್ದೇನೆ' ಎಂದು ಯಾರೂ ಹೇಳಲಿಕ್ಕೆ ಬರುವುದಿಲ್ಲ. ಜನ ಒಬ್ಬರಿಗಿಂತ ಒಬ್ಬರು ಮೇಲೆ, ಒಬ್ಬರಿಗಿಂತ ಒಬ್ಬರು ಕೆಳಗೆ ಇರುವುದು ವಾಸ್ತವತೆ ಇದರಿಂದ ಕಷ್ಟ ಸ್ಥಿತಿಯಲ್ಲಿರುವವನಿಗೆ ಸಹಾಯ ಮಾಡಬೇಕೆಂಬ ಮನಸ್ಸು ಬರುತ್ತದೆ. ಈ ವಿಚಾರವೇ ನನಗೆ ಯಾತ್ರೆ ಮಾಡುವ ಶಕ್ತಿಯನ್ನು ನೀಡಿದೆ. "ಬಾಬ (ವಿನೋಬ) ಬಂದ ಮೇಲೆ ಕೊಡದೆ ಇರಲು ಆಗುವುದೇ?



ಎಂದು ಜನಕ್ಕೆ ಅನಿಸುತ್ತದೆ, ಜನಕ್ಕೆ ಹೀಗೇಕೆ ಅನಿಸುತ್ತದೆ? ನನ್ನಲ್ಲಿ ಅಂಥ ಅಧಿಕಾರವೇನಿದೆ? ನಾನು ಮನುಷ್ಯತ್ವದ ದಾರಿ ತೋರುತ್ತಿರುವುದೇ ಇದಕ್ಕೆ ಕಾರಣ."

ಪುನಃ ನೀರಿನ ಉದಾಹರಣೆಯನ್ನೇ ಕೊಡುವೆ; ಬಾವಿಯಿಂದ ಒಂದು ಬಕೆಟ್ ನೀರು ಸೇದಿದರೆ, ಬಾವಿಯಲ್ಲಿ ಬಕೆಟ್ ಆಕಾರದ ಹಳ್ಳ ಬೀಳುವುದಿಲ್ಲ. ನೀರಿನ ಹನಿಗಳಲ್ಲಿ ಸಹಾನುಭೂತಿ ಇರುವುದರಿಂದ, ಹಳ್ಳ ಬಿದ್ದ ಸ್ಥಳಕ್ಕೆ ಧಾವಿಸಿ ಅದನ್ನು ಮುಚ್ಚಿಬಿಡುತ್ತವೆ. ಆದರೆ, ಗೋದಿಯ ರಾಶಿಯಿಂದ ಒಂದು ಸೇರು ಗೋದಿ ತೆಗೆದರೆ ಅಲ್ಲಿ ಹಳ್ಳ ಕಂಡುಬರುತ್ತದೆ. ಗೋದಿಕಾಳುಗಳು ಸ್ವಾರ್ಥಿಗಳು. ಇದ್ದಲ್ಲಿಯೇ ಇದ್ದು ಬಿಡುತ್ತವೆ. ಹಳ್ಳ ಮುಚ್ಚಲು ಧಾವಿಸುವುದಿಲ್ಲ. ಹಲವು ಗೋದಿಕಾಳುಗಳು ಮಾತ್ರ ಹಳ್ಳದತ್ತ ಧಾವಿಸುವುದುಂಟು. ನೀರು ಹನಿಗಳಿಂದ ನಾವು ಪಾಠ ಕಲಿಯಬೇಕು. ಸುಖಿಗಳಾಗಿರಲಿ, ದುಃಖಿತರಾಗಿರಲಿ ಏನಾದರೂ ನೀಡುವುದು ಮಾನವನ ಕರ್ತವ್ಯ ಎಂದು ಭಾವಿಸಿ ನೀಡಬೇಕು. ಎಲ್ಲರೂ ಈ ಮಾತನ್ನು ಅರಿತುಕೊಳ್ಳಬೇಕು. ನಾವು ಎರಡು ಕೈಗಳಿಂದ ಕೊಟ್ಟರೆ, ಸಮಾಜ ನಮಗೆ ಸಹಸ್ರ ಕೈಗಳಿಂದ ಕೊಡುವುದು, ತುಂಬಿ ತುಂಬಿ ಕೊಡುವುದು. ಎಲ್ಲರ ಪ್ರೀತಿ ದೊರೆಯುವುದು. ರೈತನಿಗೆ ಈ ಮಾತು ಗೊತ್ತು. ಆತ ಭೂಮಿಗೆ ಒಂದು ಕಾಳು ಕೊಟ್ಟರೆ ಭೂಮಿತಾಯಿ ಒಂದಲ್ಲ, ನೂರು ಕಾಳು ನೀಡುತ್ತಾಳೆ ಇದು ದೇವರ ಯೋಜನೆ.

ಎಲ್ಲರೂ ನೀಡಬೇಕೆಂಬುದೇ ನನ್ನ ಬೇಡಿಕೆ. ಭೂಮಿ ಹೀನರಿಗೆ ತಮ್ಮದರಲ್ಲಿ ಸ್ವಲ್ಪ ಪಾಲು ಕೊಡಬೇಕು. ಅದರಿಂದ ಪರಸ್ಪರರಲ್ಲಿ ಪ್ರೇಮ ಬೆಳೆಯುವುದು. ಅನೇಕರು ನನ್ನಲ್ಲಿ ತಮ್ಮ ದುಃಖ ತೋಡಿಕೊಂಡಿದ್ದಾರೆ; ಭೂಮಿಯ ಬೇಡಿಕೆ ಮುಂದಿಟ್ಟಿದ್ದಾರೆ. ನಲವತ್ತು ಲಕ್ಷ ಎಕರೆ ಭೂಮಿಯ ಒಡೆಯ ನಾನು! ನನಗೆ ಸರಿಗಟ್ಟಬಲ್ಲ ಮಾಲೀಕ ಇಡೀ ಭಾರತದಲ್ಲಿ ಯಾರೂ ಇರಲಿಕ್ಕಿಲ್ಲ. ಆದರೂ ನನ್ನಲ್ಲಿರುವುದು ಒಂದು 'ಧೋತ್ರ' ಮಾತ್ರ! ಒಂದು ಕೈಯಿಂದ ತಕ್ಕೊಂಡು, ಇನ್ನೊಂದು ಕೈಗೆ ಕೊಡುವುದೇ ನನ್ನ ಕೆಲಸ. ಮಂದಿ ಜಮೀನು ಕೊಟ್ಟರೆ ಅದನ್ನು ಭೂಮಿ ಹೀನರಿಗೆ ಹಂಚುವೆನು. ಭೂಮಿ ಕೊಡದಿದ್ದರೆ, ನನ್ನಲ್ಲಿರುವ ವಿಚಾರ, ಸಹಾನುಭೂತಿ ಹಾಗೂ ಪ್ರೇಮವನ್ನೇ ನೀಡುತ್ತಾ ಹೋಗುವೆನು. ಎಂದು ಹೇಳಿದರು ವಿನೋಬಾಜೀ ಅವರು.

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು

– ಇಂದಿರಾ ಕೃಷ್ಣಪ್ಪ

ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ...

ಚೆನ್ನಮ್ಮ ಹಳ್ಳಿಕೇರಿ ಅವರೊಂದಿಗೆ ಸಂದರ್ಶನ

ಇಂದಿರಾ : "ನೀವು ಯಾವಾಗಲೂ ಹೊಸರಿತ್ತಿ ಬಗ್ಗೆ ಅಭಿಮಾನದಿಂದ ಮಾತಾಡ್ತಿರಲ್ಲ, ಅಷ್ಟೊಂದು ಪ್ರಭಾವ ಬೀರುವಂಥಹದ್ದೇನಿತ್ತು ಅಲ್ಲಿ?

ಚೆನ್ನಮ್ಮ : ನಾನಿನ್ನೂ ಸಣ್ಣಾಕಿ ಇದ್ದೆ. ನಮ್ಮಪ್ಪ, ನಮ್ಮಜ್ಜ, ನನ್ನನ್ನು ಎತ್‌ಕೊಂಡೇ, ಗಾಂಧಿ ಆಶ್ರಮಕ್ಕೆ ಹೋಗ್ತಾ ಇದ್ರು. ಆಗ ನಂಗೇನೂ ಅರ್ಥ ಆಗ್ತಾ ಇರಲಿಲ್ಲ. ಈಗ ಅಂದಿನ ಚಿತ್ರ ಎಲ್ಲಾ ಮನಸ್ಸಿನ ಮುಂದೆ ಬರ್ತಾವೆ. ಅಲ್ಲಿ ದೇಶದ ಸ್ವಾತಂತ್ರ್ಯ ಚಳುವಳಿಯಲ್ಲಿ ಹೇಗೆ ಭಾಗವಹಿಸಬೇಕು ಅಂತ ಯುವಕರಿಗೆ ತರಬೇತಿ ಕೊಡ್ತಾ ಇದ್ರು, ಅಲ್ಲೇ ಸತ್ಯಾಗ್ರಹಿಗಳು ಸಿದ್ಧ ಆಗ್ತಾ ಇದ್ರು, ಆಗಲೇ ನಂಗೆ ನಾನು ಅವರ ಜೊತೆ ಹೋಗಬೇಕು ಅಂತ ಅನಿಸ್ತಾ ಇತ್ತು.


ಇಂದಿರಾ : ಗಾಂಧಿ ಆಶ್ರಮದಲ್ಲಿದ್ದಾಗ ನೀವು ಅತಿ ಚಿಕ್ಕ ವಯಸ್ಸು ನಿಮ್ದು. ಆದ್ರೂ ಕೇಳ್ತೀನಿ ಅಲ್ಲಿಗೆ ಬಂದಿದ್ದ ಸ್ವಾತಂತ್ರ್ಯ ಹೋರಾಟಗಾರರ ನೆನಪಿದೆಯೇ?

ಚೆನ್ನಮ್ಮ : ಆಗ ನಂಗೆ ಜ್ಞಾಪಕ ಇಲ್ಲ. ಆದ್ರೆ ಅವರೆಲ್ಲ ನಾನು ದೊಡ್ಡಾಕಿ ಆದಾಗ, "ನಾವು ನಿನ್ನನ್ನೂ ಸಣ್ಣಾಕಿ ಇದ್ದಾಗಿಂದ ನೋಡಿದ್ವಿ ಅಂತ ಹೇಳ್ತಾ ಇದ್ರು"– ಗುದ್ಲೆಪ್ಪ ಹಳ್ಳಿಕೇರಿ, ವೆಂಕಟೇಶ ಮಾಗಡಿ, ಮೈಲಾರ ಮಹದೇವಪ್ಪ, ರಾಚನಾಯ್ಕರ, ಮನ್ನಂಗಿ, ಸವಣೂರ, ಮತ್ತೆ ಇನ್ನ್ಯಾರ್ಯಾರೋ ಬರ್ತಾ ಇದ್ರು, ನಂಗೆ ತಾತನಂತಿದ್ದ, ಮಾಗಡಿ ಅವ್ರು ನನ್ನನ್ನು ಭಾಳಾ ಪ್ರೀತಿ ಮಾಡ್ತಾ ಇದ್ರು, ನನ್ನನ್ನೂ ಆಶ್ರಮಕ್ಕೆ ಎತ್ತಿಕೊಂಡು ಹೋಗ್ತಾ ಇದ್ರು, ಪ್ರಾರ್ಥನೆ, ಸಾಮೂಹಿಕ ಊಟದ ವೇಳೆ ನಾನು ಅಲ್ಲಿರಲೇ ಬೇಕಿತ್ತು. ತಪ್ಪಿದ್ರೆ ಕೈಗೆ ಹಗ್ಗ ಕಟ್ಟಿ ನೇತುಹಾಕ್ತಾ ಇದ್ರು. ನಾನು "ತಪ್ಪಾಯ್ತು ಇನ್ನ ಮೇಲೆ ತಪ್ಪಿಸಲ್ಲ, ದಿನಾ ಪ್ರಾರ್ಥನೆಗೆ ಬರ್ತೀನಿ" ಎಂದು ಕ್ಷಮೆ ಕೇಳಿದ ಮೇಲೆ ಕೈಕಟ್ಟು ಬಿಚ್‌ತಿದ್ರು, ಆಗಲೇ ನನಗೆ ಸಮಯ ಪರಿಪಾಲನೆ, ಪ್ರಾರ್ಥನೆ, ಹಿರಿಯರಿಗೆ ಗೌರವ ಕೊಡುವುದು ರೂಢಿಯಾದವು.

ಇಂದಿರಾ : ಮೈಲಾರ ಮಹಾದೇವಪ್ಪ ಮತ್ತೆ ಅವರ ಸಂಗಾತಿಗಳು ಹುತಾತ್ಮರಾದದ್ದು ನಿಮಗೆ ಗೊತ್ತಾಗಿತ್ತೇ?

ಚೆನ್ನಮ್ಮ : ಹೌದೌದು; ನಂಗೆ ಚನ್ನಾಗಿ ನೆನಪಿದೆ. ಕೊರಡೂರು ಆಶ್ರಮ ಅವರು ಸ್ಥಾಪಿಸಿದ್ರು, ಅವರ ಪತ್ನಿ ಸಿದ್ಧಮ್ಮ ಮೈಲಾರ ಅವರು ಆಶ್ರಮದ ಎಲ್ಲಾ ಜವಾಬ್ದಾರಿ ಮಾಡ್ತಾ ಇದ್ರು. 1943ರಲ್ಲಿ ಅಂತ ಕಾಣುತ್ತೆ, ಆಗ ಆಂಗ್ಲರ ಸರ್ಕಾರ ಇತ್ತು. ಕೊರಡೂರು, ಹೊಸರಿತ್ತಿಯಲ್ಲೆಲ್ಲಾ, ಅದೇನೋ ಕರ್ಫ್ಯೂ ಅಂತಾರಲ್ಲ ಅದನ್ನು ಹಾಕಿದ್ರಂತೆ. ಆಗ ಒಂದು ಘಟನೆ ನಡೀತು ಕೇಳ್ರಿ ಇಂದ್ರಮ್ಮ; ನಂಗೆ 12 ವರ್ಷ ಇರಬೋದು. ಆಗ ವಿದ್ಯುತ್ ದೀಪ ಇರಲಿಲ್ಲ. ಚಿಮಣಿ ಎಣ್ಣೆ ಸಿಕ್ತಾ ಇರಲಿಲ್ಲ. ಜೌಡಲ ಎಣ್ಣೆ ದೀಪ ಮಾಡ್ತಾ ಇದ್ವಿ, ಒಂದು ದಿನ ರಾತ್ರಿ ಆ ದೀಪಾನೂ ನಂದಿಹೋಯ್ತು. ದೀಪ ಹಚ್ಚಲು ಕಡ್ಡಿ ಪೆಟ್ಟಿಗೆ ಇಲ್ಲ. ಅವ್ವ ಪೇಚಾಡ್ತ ಇದ್ರು. ಮುಂಭಾಗದ್ದೇ ಸಂಗನ ಬಸಪ್ಪ ಅಜ್ಜನ ಮನೆ, ನಾನೇನು ಮಾಡ್ದೆ, ಕತ್ತಲಲ್ಲೇ ಮನೆ ಬಾಗಿಲು ತೆಗೆದು ಹೊರಗಡೆ ಹೆಜ್ಜೆ ಇಟ್ಟೆ. ಹೊರಗೆ ಹಾಲಿನಂತ ಬೆಳದಿಂಗಳು; ಊರಿನಲ್ಲಿ ಕಾವಲು ಕಾಯ್ತ ಇದ್ದ ಪೋಲೀಸರು ಕಾಣಿಸಲಿಲ್ಲ. ಒಂದೇ ಓಟಕ್ಕೆ ಅಜ್ಜನ ಮನೆ ಕಟ್ಟೆ ತಲುಪಿದ್ದೆ. ಆದರೆ ಹಿಂದೇನೇ ಯಾರೋ ಬರ್ತಾ ಇದ್ದಾರೆ. ಅಂತ ಅನ್ನಿಸಿ, ಕಟ್ಟೆಯ ಪಕ್ಕದ ಕೆಮ್ಮಣ್ಣಿನ ಗೂಡಲ್ಲಿ ಬಚ್ಚಿಟ್ಟುಕೊಂಡೆ. ಭಯ ಶುರುವಾಗಿ, ಗಡಗಡ ನಡುಕ ಆಯ್ತು. ಪೋಲೀಸರು, ಅಜ್ಜನ ಹೆಸರಿಡಿದು ಕರೆಯುತ್ತಾ, "ಬಾಗಿಲು ತೆಗೀರಿ; ಯಾರೋ ಓಡಿ ಬಂದಂಗೆ ಇದ್ಯಲ್ಲ?" ಅಂದ್ರು, ಅಜ್ಜ ಬಾಗಿಲು ತೆಗೆದ್ರು, ಅಜ್ಜನು ಬಂದಿದ್ದೆ ನಂಗೆ ಧೈರ್ಯ ಬಂದು, "ಅಜ್ಜಾ ನಾನಿಲ್ಲಿ ಇದ್ದೇನೆ, ಮನೇಲಿ ದೀಪ ಆರಿತು, ಕಡ್ಡಿಪೆಟ್ಟಿಗೆಗಾಗಿ ಬಂದೆ" ಎಂದೆ. ಅಜ್ಜ ಕಡ್ಡಿಪೊಟ್ಟಣ ತಂದುಕೊಟ್ಟರು. ಪೋಲೀಸೋರು ನಮ್ಮ ಮನೆ ಬಾಗಿಲವರೆಗೆ ಬಂದು ಬಿಟ್ಟರು. ಹಾಗೇನೇ "ಇನ್ನು ಮೇಲೆ ಹೀಗೆ ಮಾಡಿದ್ರೆ ನಿನ್ನನ್ನು ಜೈಲಿಗೆ ಹಾಕುತ್ತೇವೆ" ಅಂದ್ರು. ಆವ ಹೆದರಿಗೆ ಇಲ್ಲದೆ, ನಾನು, "ಮಗುವಾಗಿದ್ದಾಗಲೇ ಜೈಲಿಗೆ ಹೋಗಿ ಬಂದಿದ್ದೀನಿ. ದೇಶಕ್ಕಾಗಿ ಎಷ್ಟು ಸಾರಿ ಬೇಕಾದ್ರೂ ಜೈಲಿಗೆ ಹೋಗಲು ನಾನು ಸಿದ್ಧ; ಈಗ್ಲೇ ಹಾಕಿ ಬೇಕಾದ್ರೆ" ಎಂದೆ. ಮಾತು ಕೇಳಿಸಿದ ನಮ್ಮ ತಂದೆ ಹೊರಬಂದಿದ್ರು, ಪೋಲೀಸರು ಸಿಟ್ಟಿನಿಂದ "ನಿಮ್ಮ ಮಗಳನ್ನು ಕರೆದು ಕೊಳ್ರಿ; ಕರ್ಫ್ಯೂ ಇದೆ ಗೊತ್ತಿಲ್ವ ನಿಮಗೆ" ಎಂದ್ರು, "ಅಯ್ಯೋ ಸ್ವಾಮಿ ಇವಳು. 'ಹೋಗಿದ್ದೇ ಗೊತ್ತಿಲ್ಲ' ಎಂದರು. ತಾಯಿ ಬಂದು ಅಪ್ಪಿಕೊಂಡಳು. ನಂತರ ಸಮಾಧಾನದಿಂದ ಕಡ್ಡಿಪೆಟ್ಟಿಗೆಯಿಂದ ದೀಪಹಚ್ಚಿ ನಂತರ ಊಟ ಮಾಡಿದ್ವಿ.

ಮುಂದುವರಿಯುವುದು...



ಸಂಗಪ್ಪ ಹಳ್ಳಿಕೇರಿ ಅಜ್ಜನ ಮನೆ, ಹೊಸರಿತ್ತಿ

ಹೊಸರಿತ್ತಿ ಚಲೇಜಾವ್ ಚಳುವಳಿಯಲ್ಲಿ, 1943ರ ಏಪ್ರಿಲ್ ತಿಂಗಳಿನಲ್ಲಿ ಕರ್ಫ್ಯೂ ಇದ್ದಾಗ, ಪೋಲೀಸರಿಂದ ತಪ್ಪಿಸಿಕೊಳ್ಳಲು ಚೆನ್ನಮ್ಮ ಅವರು ಅಡಗಿ ಕುಳಿತ ಕೆಮ್ಮಣ್ಣು ಗೂಡು.

ಕನ್ನಡ... ಕನ್ನಡಿಗ... ಕರ್ನಾಟಕ : ಫ.ಗು. ಹಳಕಟ್ಟಿ
(02.07.1880 – 29.06.1964)


– ಡಾ. ನಿಕೇತನ

ಕರ್ನಾಟಕದ ಏಕೀಕರಣ ಹೋರಾಟವು ಕಹಿ-ಸಿಹಿ ಘಟನೆಗಳ ಸ್ಮರಣಲೋಕವನ್ನೇ ತೆರೆದಿಡುತ್ತವೆ. ಈ ಸ್ತರದಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ಸಾಹಿತ್ಯ, ಸಂಸ್ಕೃತಿ, ಸಮಾಜ, ಶಿಕ್ಷಣ, ರಾಜಕಾರಣದ ಮೂಲಕ ಕನ್ನಡ ನಾಡು ನುಡಿ ಕಟ್ಟಿದ ಮಹಾನ್ ಚೇತನಗಳನ್ನು ಗಾಂಧಿ ಭವನ ಸ್ಮರಿಸುತ್ತದೆ.

ಧಾರವಾಡದ ಗುರುಬಸಪ್ಪ ಹಳಕಟ್ಟಿ ಮತ್ತು ದಾನಾದೇವಿ ದಂಪತಿಗಳಿಗೆ ಫಕೀರಪ್ಪ ಗುರುಬಸಪ್ಪ ಹಳಕಟ್ಟಿ ಅವರು ಮಗನಾಗಿ ಜುಲೈ 1880ರಲ್ಲಿ ಜನಿಸಿದರು. ಗುರುಬಸಪ್ಪ ಅವರು ವೃತ್ತಿಯಲ್ಲಿ ಶಿಕ್ಷಕರಾಗಿದ್ದರೂ ಪ್ರವೃತ್ತಿಯಲ್ಲಿ ಸಾಹಿತಿಗಳಾಗಿದ್ದರು. ಪ್ರಮುಖ ಪತ್ರಿಕೆಯಾದ "ವಾಗ್ಭೂಷಣ"ದಲ್ಲಿ ಲೇಖನಗಳನ್ನು ಬರೆದು ನಾಡಿನ ಗಮನ ಸೆಳೆದಿದ್ದರು. ಹೀಗಾಗಿ ಹಳಕಟ್ಟಿಯವರಿಗೆ ಸಾಹಿತ್ಯವೆಂಬುದು ರಕ್ತಗತವಾಗಿ ಹರಿದು ಬಂದಿತ್ತು.

ಹಳಕಟ್ಟಿ ಅವರು ಧಾರವಾಡದಲ್ಲಿ ಮೆಟ್ರಿಕ್ ನಂತರ ಉನ್ನತ ಶಿಕ್ಷಣಕ್ಕಾಗಿ ಮುಂಬಯಿನ ಅಲ್ಲಿನ ಸೇಂಟ್ ಝೇವಿಯರ್ ಕಾಲೇಜು ಸೇರಿದರು. ಅಲ್ಲಿ ಕನ್ನಡ ಪುರೋಹಿತ ಆಲೂರು ವೆಂಕಟರಾಯರು ಇವರ ಸಹಪಾಠಿಗಳಾಗಿದ್ದರು. ಆ ಸಂದರ್ಭದಲ್ಲಿ ಕನ್ನಡದವರಲ್ಲಿ ತಮ್ಮ ಭಾಷೆಯ ಬಗ್ಗೆ ಇದ್ದ ನಿರಭಿಮಾನ ಇವರ ಮನಸ್ಸಿನಲ್ಲಿ ನೋವುಂಟುಮಾಡಿತು. ಕನ್ನಡಿಗರು ಎಚ್ಚರಗೊಳ್ಳದಿದ್ದರೆ ಕನ್ನಡ ಉದ್ಧಾರವಾಗದೆಂದು, ಆ ಕ್ಷಣವೇ ಕನ್ನಡ ನಾಡು, ನುಡಿ, ನೆಲ, ಜಲ, ಸಾಹಿತ್ಯ, ಸಂಸ್ಕೃತಿಗಾಗಿ ದುಡಿಯಲು ದೃಢಸಂಕಲ್ಪ ಮಾಡಿದರು. ಕರ್ನಾಟಕ ಏಕೀಕರಣಕ್ಕಾಗಿ ಹೋರಾಟದಲ್ಲಿ ನಿರತರಾಗಿದ್ದ ಆಲೂರರು ಇವರಿಗೆ ಸ್ಫೂರ್ತಿಯಾದರು.

ಕಾನೂನು ಪದವೀಧರರಾಗಿ ಬೆಳಗಾವಿಯಲ್ಲಿ ವಕೀಲಿವೃತ್ತಿ ಪ್ರಾರಂಭಿಸಿ ವಿಜಯಪುರವನ್ನು ಕಾರ್ಯಕ್ಷೇತ್ರ ಮಾಡಿಕೊಂಡರು. ಶರಣರ ವಿಶ್ವಮಾನ್ಯವಾದ ಸಾಹಿತ್ಯವು ವಚನಶಾಸ್ತ್ರ ಪಿತಾಮಹ ಫ.ಗು. ಹಳಕಟ್ಟಿ ಅವರಿಲ್ಲದಿದ್ದರೆ ಅದೊಂದು ಕಟ್ಟುಕತೆಯಾಗಿ ಪರಿಣಮಿಸುತ್ತಿತ್ತೆಂದರೆ ಅತಿಶಯೋಕ್ತಿಯಲ್ಲ. 1920ರ ವೇಳೆಗೆ ಸಾವಿರ ಕಟ್ಟು ತಾಳೆಯೋಲೆಗಳ ವಚನ ಸಾಹಿತ್ಯವನ್ನು ಸಂಗ್ರಹ ಮಾಡಿದ್ದರು. ಫಕ್ಕೀರಪ್ಪನವರ ನಿರಂತರ ಸಂಶೋಧನೆ ವಚನಶಾಸ್ತ್ರ ಪ್ರಸಾರಗ್ರಂಥಕ್ಕೆ ಬುನಾದಿಯಾಯಿತು. ಇದನ್ನು ಹೇಗಾದರೂ ಮಾಡಿ ಹೊರತರಬೇಕೆಂಬ ಸಂಕಲ್ಪದೊಂದಿಗೆ ಮಂಗಳೂರಿನ ಬಾಶೆಲ್‌ಮಿಶನ್ ಪ್ರೆಸ್ಸಿಗೆ 500 ರೂಗಳೊಂದಿಗೆ ಹಸ್ತಪ್ರತಿ ಕಳಿಸಿದ್ದರು. 1925ರಲ್ಲಿ ಸ್ವಂತಮನೆ ಮಾರಿ "ಹಿತಚಿಂತಕ ಮುದ್ರಣಾಲಯ"ವನ್ನು ಪ್ರಾರಂಭಿಸಿದರು. ಹಳಕಟ್ಟಿಯವರು ತಾಳೆಯೋಲೆಗಳಲ್ಲಿ ಕೇವಲ 50 ವಚನಕಾರರನ್ನು ಮಾತ್ರ ಗುರುತಿಸಿದ್ದರು. ಸಂಶೋಧನೆಯ ಮೂಲಕ 250ಕ್ಕೂ ಹೆಚ್ಚು ವಚನಕಾರರನ್ನು ಬೆಳಕಿಗೆ ತಂದರು. ಜೊತೆಗೆ ಹರಿಹರನ 46 ರಗಳೆಗಳನ್ನು ಗುರುತಿಸಿ ಪ್ರಕಟಿಸಿದ ಸಾಧನೆ ಹಳಕಟ್ಟಿಯವರಿಗೆ ಸಲ್ಲುತ್ತದೆ. ಇವರಂತೆ ಸಂಶೋಧನೆಗಳನ್ನು ಪ್ರಕಟಿಸಲು 'ಹಿತಚಿಂತಕ' ಮುದ್ರಣಾಲಯ ಸ್ಥಾಪಿಸಿದ ಉದಾಹರಣೆ ಕರ್ನಾಟಕದ ಇತಿಹಾಸದಲ್ಲಿಯೇ ಇಲ್ಲ. ಅಂತಹ ಮುಂದಾಲೋಚನೆ, ತೀಕ್ಷ್ಣಬುದ್ಧಿ, ಹಳಕಟ್ಟಿಯವರದಾಗಿತ್ತು. ನಂತರ ಏಕಕಾಲಕ್ಕೆ ಎರಡು ಪತ್ರಿಕೆ ಸಂಪಾದಿಸಿ, ಜನಸಮೂಹಕ್ಕೆ ಜವಾಬ್ದಾರಿ ತಿಳಿಸುವ ಕಾರ್ಯಕ್ಕೆ ಕೈ ಹಾಕಿದರು. 1926ರಲ್ಲಿ ಆರಂಭಿಸಿದ 'ಶಿವಾನುಭವ' ಮಾಸಿಕ ಪತ್ರಿಕೆ 35 ವರ್ಷ ನಿರಂತರ ನಡೆಸಿದ ಕನ್ನಡ ಪತ್ರಿಕೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. 1927ರಲ್ಲಿ ನವಕರ್ನಾಟಕ ಎಂಬ ವಾರಪತ್ರಿಕೆ ಆರಂಭಿಸಿದ್ದರು.



ಹಳಕಟ್ಟಿ ಅವರು ಸಂಪಾದಿಸಿ ಪ್ರಕಟಿಸಿದ "ವಚನ ಸಾಹಿತ್ಯ ಸಾರ"ವಂತೂ ಅಪೂರ್ವ ವಚನಗಳುಳ್ಳ ಅನನ್ಯ ಕೃತಿಯಾಗಿದೆ. ಶೂನ್ಯ ಸಂಪಾದನೆ, ಶಿವಾನುಭವ, ಕೃಷಿವಿಜ್ಞಾನ, ಪ್ರಭುದೇವರ ವಚನಗಳು, ಹರಿಹರನ ರಗಳೆ, ಪ್ರದೀಪಿಕೆ, ಶಬ್ದಕೋಶ, ಆದಿಶೆಟ್ಟಿ ಪುರಾಣ ಮುಂತಾದವುಗಳು ಇವರ ಪ್ರಮುಖ ಕೃತಿಗಳು. ಹಳಕಟ್ಟಿಯವರು ಬಸವಣ್ಣನವರ ವಚನಗಳನ್ನು ಇಂಗ್ಲೀಷಿಗೆ ಅನುವಾದಿಸಿ ಇಂಡಿಯನ್ ಆಂಟಿಕ್ವರಿಯಲ್ಲಿ ಪ್ರಕಟಗೊಳಿಸಿದರು. ವಚನ ಸಾಹಿತ್ಯದ ಪ್ರಸಾರ ಕಾರ್ಯವನ್ನು ಕೈಗೊಂಡ ಇವರನ್ನು "ವಚನ ಪಿತಾಮಹ" ಎಂದು ಶ್ಲಾಘಿಸಲಾಗಿದೆ.

ದೂರದೃಷ್ಟಿತ್ವದ ಹಳಕಟ್ಟಿ ಅವರು ಸಾಹಿತ್ಯ ಮತ್ತು ಪತ್ರಿಕೋದ್ಯಮದ ಜೊತೆ ಜೊತೆಗೆ ಸಂಘಟನೆ, ಬ್ಯಾಂಕಿಂಗ್, ಕೃಷಿ, ನೇಕಾರಿಕೆ, ಸಹಕಾರಿ ಹೀಗೆ ಎಲ್ಲದರಲ್ಲೂ ತೊಡಗಿಸಿಕೊಂಡಿದ್ದರು. ಇವರು ವಿಜಯಪುರ ವಿದ್ಯಾವರ್ಧಕ ಸಂಘ ಮತ್ತು ಶ್ರೀ ಸಿದ್ಧೇಶ್ವರ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್, ಗ್ರಾಮೀಣಾಭಿವೃದ್ಧಿ ಸಂಘ, ಒಕ್ಕಲುತನ ಸಹಕಾರಿ ಸಂಘ, ನೇಕಾರರ ಸಂಘ, ಹತ್ತಿ ಮಾರಾಟ ಸಂಘಗಳು ಸೇರಿದಂತೆ ಸಹಕಾರಿ ಸಂಘಗಳನ್ನು ಸಂಸ್ಥಾಪಿಸಿ ಸಮಾಜಾಭಿವೃದ್ಧಿಗೆ ಶ್ರಮಿಸಿದ ಅಪರೂಪದ ವ್ಯಕ್ತಿ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆಯಲ್ಲಿಯೂ ಇವರು ಮಹತ್ವದ ಪಾತ್ರ ವಹಿಸಿದ್ದರು.

ಇವರ ಸಾಹಿತ್ಯ, ಸಾಮಾಜಿಕ, ಶೈಕ್ಷಣಿಕ ಸೇವೆಗಾಗಿ ವಿಧಾನ ಪರಿಷತ್ತಿನ ಸದಸ್ಯತ್ವ, ಕರ್ನಾಟಕ ಏಕೀಕರಣ ಪರಿಷತ್ತಿನ ಅಧ್ಯಕ್ಷತೆ, ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿಷ್ಠಿತ ಗೌರವ ಡಾಕ್ಟರೇಟ್ ಮುಂತಾದ ಗೌರವ ಪುರಸ್ಕಾರಗಳು ಪ್ರಧಾನವಾಗಿವೆ. ಬಳ್ಳಾರಿಯಲ್ಲಿ ನಡೆದ 12ನೇ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷತೆ, ಭಾರತ ಸರಕಾರದಿಂದ ರಾವ್ ಬಹಾದ್ದೂರ ಪದವಿಗಳಿಗೆ ಭಾಜನರಾಗಿದ್ದಾರೆ.

ಹೆಮ್ಮೆಯ ಕನ್ನಡಿಗ : ಜಯಚಾಮರಾಜೇಂದ್ರ ಒಡೆಯರ್
(18.07.1919 – 23.09.1974)

– ಡಾ. ಸತ್ಯಮಂಗಲ ಮಹಾದೇವ

ಕನ್ನಡ ನಾಡು ನುಡಿಯನ್ನು ವಿಶ್ವವಿಖ್ಯಾತಗೊಳಿಸಿದ ದಿಗ್ಗಜರುಗಳ ಕಿರು ಪರಿಚಯವೇ ಈ ಅಂಕಣ

ಮೈಸೂರು ಸಂಸ್ಥಾನದ 25ನೇ ಹಾಗು ಕೊನೆಯ ಮಹಾರಾಜರೇ ಜಯಚಾಮರಾಜೇಂದ್ರ ಒಡೆಯರ್ ಅವರಾಗಿದ್ದಾರೆ. ಇವರು ಕಂಠೀರವ ನರಸಿಂಹರಾಜ ಒಡೆಯರು ಮತ್ತು ಕೆಂಪು ಚಲುವಾಜಮ್ಮಣ್ಣಿ ದಂಪತಿಗಳಿಗೆ ಮಗನಾಗಿ ಜನಿಸಿದ್ದರು. ಇವರ ದೊಡ್ಡಪ್ಪ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಾಗಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದಿಂದ ಬಿ.ಎ. ಪದವಿಯಲ್ಲಿ ಕನ್ನಡ–ಇಂಗ್ಲಿಷ್ ಭಾಷೆಗಳ ಜೊತೆಗೆ ರಾಜನೀತಿ ಮತ್ತು ಅರ್ಥಶಾಸ್ತ್ರಗಳನ್ನು ಅಭ್ಯಸಿಸಿದ್ದರು. ಉತ್ತಮ ಪಾಂಡಿತ್ಯಕ್ಕೆ ಮೀಸಲಾದ ಐದು ಬಹುಮಾನಗಳು ಮತ್ತು ಸುವರ್ಣಪದಕಗಳು ಇವರಿಗೆ ಲಭಿಸಿದ್ದವು. ಇವರು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಹಿಸ್ಟಾರಿಕಲ್ ಅಸೋಸಿಯೇಷನ್ನಿನ ಗೌರವಾಧ್ಯಕ್ಷರೂ ಆಗಿದ್ದರು.

ಇವರು ಒಳ್ಳೆಯ ಕುದುರೆ ಸವಾರರು, ಟೆನಿಸ್ ಕ್ರೀಡೆಯಲ್ಲಿ ನಿಪುಣರೂ, ಬೇಟೆಯ ಹವ್ಯಾಸ ಬೆಳೆಸಿಕೊಂಡಿದ್ದರು. ಓದಿನಂತೆ ಸಂಗೀತದಲ್ಲೂ ಇವರಿಗೆ ಅಮಿತ ಆಸಕ್ತಿ ಇದ್ದುದರಿಂದ ಪಿಯಾನೋದಲ್ಲಿ ಪರಿಣತಿ ಪಡೆದಿದ್ದರು. ಸಂಗೀತ ಕುರಿತಂತೆ ಭಾರತದಲ್ಲೇ ಅತಿ ದೊಡ್ಡದೆನಿಸುವ ಗ್ರಂಥ ಭಂಡಾರವನ್ನು ಅರಮನೆಯಲ್ಲಿ ಸ್ಥಾಪಿಸಿದ್ದರು. ವಿಶ್ವದ ಹೆಸರಾಂತ ಸಂಗೀತಗಾರರೊಂದಿಗೆ ಇವರಿಗೆ ಸಂಪರ್ಕವಿತ್ತು. ಜರ್ಮನಿಯ ರಿಚರ್ಡ್ ವ್ಯಾಗ್ನರ್, ಲಡ್ವಿಗ್‌ಫಾನ್ ಬೇತೋವನ್, ಬಾಕ್ ಮನೆತನದ ಸಂಗೀತ ವಿದ್ವಾಂಸರು ಮುಂತಾದವರು ಇವರ ಮೆಚ್ಚಿನ ಸಂಗೀತಗಾರರಾಗಿದ್ದರು. ಭಾರತೀಯ ಸಂಸ್ಕೃತಿ ಮತ್ತು ತತ್ತ್ವಶಾಸ್ತ್ರದ ರಾಯಭಾರಿಯಾಗಿ ಇವರು ಅನೇಕ ಸಲ ವಿದೇಶಗಳ ಪ್ರವಾಸ ಕೈಗೊಂಡಿದ್ದರು. ಆಗ ಇವರು ಮಾಡಿದ ಭಾಷಣಗಳು ವಿಚಾರಪೂರಿತವಾಗಿವೆ.

ವನ್ಯಮೃಗಗಳ ಬಗ್ಗೆ ಹೊಂದಿದ್ದ ಕಾಳಜಿಯಿಂದಾಗಿ ಮೈಸೂರು ನಗರದ ಸ್ವಂತ ಮೃಗಾಲಯವನ್ನು ಸರ್ಕಾರಕ್ಕೆ ವಹಿಸಿಕೊಟ್ಟು ಅದರ ಅಭಿವೃದ್ದಿಗೆ ಕಾರಣರಾದರು. ಇವರು ಮೈಸೂರು ನಗರದ ಶ್ರೀ ಜಯ ಚಾಮರಾಜೇಂದ್ರ ಚಿತ್ರಶಾಲೆಗೆ ಅಮೂಲ್ಯ ವಸ್ತುಗಳನ್ನು ಸಂಗ್ರಹಿಸಿಕೊಟ್ಟರು. ಜಯಚಾಮರಾಜರು 1940ರ ಸೆಪ್ಟೆಂಬರ್ 8ರಂದು ಸಂಸ್ಥಾನದ ಅರಸರಾಗಿ ಪಟ್ಟವನ್ನೇರಿದ್ದರು. ಇವರು ಮೈಸೂರು ಸಂಸ್ಥಾನದ ಅರಸರಾಗಿದ್ದುದು 1940ರಿಂದ 1947ರ ವರೆಗೆ ಮಾತ್ರ. ನಂತರ ಮೈಸೂರು, ವಿಶಾಲ ಕರ್ನಾಟಕವಾಗಬೇಕೆಂಬ "ಕನ್ನಡಿಗರ ಕನಸನ್ನು ನನಸಾಗಿಸುವಲ್ಲಿ ರಾಜತ್ವವನ್ನು ತ್ಯಜಿಸಲೂ ಸಿದ್ಧ"ವೆಂದು ಹೇಳಿದ್ದರು.

ಇವರು ಮೈಸೂರು ಸಂಸ್ಥಾನದ ಅರಸರಾಗಿದ್ದಾಗ ಲಲಿತಕಲೆಗಳಿಗೆ ನೀಡಿದ ಪ್ರೋತ್ಸಾಹ ಸ್ಮರಣೀಯ. ಇವರ ಆಡಳಿತಾವಧಿಯಲ್ಲಿ ಜಯಚಾಮರಾಜ ಗ್ರಂಥಮಾಲಾ ಯೋಜನೆಯಡಿಯಲ್ಲಿ ವೇದಶಾಸ್ತ್ರ, ಪುರಾಣ ಮುಂತಾದ ಉದ್ಗ್ರಂಥಗಳು ಪ್ರಸಿದ್ದ ಪಂಡಿತರಿಂದ ಕನ್ನಡಕ್ಕೆ ಅನುವಾದಗೊಂಡವು. ಸ್ವಾತಂತ್ರ್ಯದ ನಂತರ ಭಾರತ ಒಕ್ಕೂಟದಲ್ಲಿ ಸಂಸ್ಥಾನವನ್ನು ವಿಲೀನಗೊಳಿಸಲು ಮುಂದಾದವರಲ್ಲಿ ಇವರೇ ಮೊದಲಿಗರು. ಭಾರತ ಗಣರಾಜ್ಯವಾದಾಗ ವಿಶಾಲ ಮೈಸೂರಿನ (ಇಂದಿನ ಕರ್ನಾಟಕ) ಪ್ರಥಮ ರಾಜ್ಯಪಾಲರಾದರು. ಮೈಸೂರು ನಗರದ ವಿಶ್ವವಿಖ್ಯಾತ ವೈಭವೋಪೇತ ದಸರಾ ಉತ್ಸವಕ್ಕೆ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಖ್ಯಾತಿಗೆ ಇವರೂ ಕಾರಣಕರ್ತರಾಗಿದ್ದಾರೆ.



ಅರಮನೆಯ ನುರಿತ ಪಂಡಿತರಿಂದ ಇವರು ಸಂಸ್ಕೃತ ಭಾಷೆಯನ್ನೂ ತತ್ತ್ವ ಗ್ರಂಥಗಳನ್ನೂ ಆಳವಾಗಿ ಅಭ್ಯಾಸ ಮಾಡಿದ್ದರು. ಇವರು ಅನೇಕ ಸಂಸ್ಕೃತ ಗ್ರಂಥಗಳನ್ನು ಭಾಷಾಂತರಿಸಿದ್ದಾರೆ. ಅಲ್ಲದೇ ಇವರು ರಚಿಸಿದ ಕೃತಿಗಳಲ್ಲಿ ದತ್ತಾತ್ರೇಯ–ದಿ ವೇ ಅಂಡ್ ದಿ ಗೋಲ್, ದಿ ಗೀತಾ ಅಂಡ್ ಇಂಡಿಯನ್ ಕಲ್ಚರ್, ಭಾರತೀಯ ಸೌಂದರ್ಯಶಾಸ್ತ್ರದ ಹಲವು ಮುಖಗಳು, ದಿ ರಿಲಿಜನ್ ಅಂಡ್ ದಿ ಮ್ಯಾನ್, ಆತ್ಮ ಮತ್ತು ಬ್ರಹ್ಮ. ಇವರ ಆಳವಾದ ತತ್ತ್ವಶಾಸ್ತ್ರಧ್ಯಯನದ ಫಲವೇ ಆಂಗ್ಲ ಭಾಷೆಯಲ್ಲಿ ರಚಿತವಾಗಿರುವ ದತ್ತಾತ್ರೇಯ–ದಿ ವೇ ಅಂಡ್ ದಿ ಗೋಲ್. ಇದರ ಮುನ್ನುಡಿಯನ್ನು ಭಾರತದ ರಾಷ್ಟ್ರಪತಿಗಳಾಗಿದ್ದ ಎಸ್. ರಾಧಾಕೃಷ್ಣನ್ ಅವರು ಬರೆದಿದ್ದಾರೆ. ಇದು ಇವರ ಮೇರುಗ್ರಂಥವಾಗಿದೆ. ಸಂಸ್ಕೃತದಲ್ಲಿ ಇವರು ರಚಿಸಿರುವ ಸಂಗೀತ ಕೃತಿಗಳು ಸುಮಾರು 94 ಎನ್ನಲಾಗಿದೆ.

ಇವರು ಗೌರವ ಡಾಕ್ಟರ್ ಆಫ್ ಲಾಸ್, ಅಣ್ಣಾಮಲೈ ಯೂನಿವರ್ಸಿಟಿಯ ಡಿ.ಲಿಟ್, ಲಂಡನಿನ ಟ್ರಿನಿಟಿ ಸಂಗೀತ ಕಾಲೇಜಿನ ಗೌರವ ಫೆಲೊಷಿಪ್ ಮತ್ತು ಆಸ್ಟ್ರೇಲಿಯದ ಕ್ವೀನ್ಸ್‌ಲ್ಯಾಂಡ್ ವಿಶ್ವವಿದ್ಯಾಲಯದ ಡಿ.ಲಿಟ್, ಪದವಿಗೆ ಭಾಜನರಾಗಿದ್ದರು. ಬ್ರಿಟಿಷ್ ಸರ್ಕಾರ ಇವರಿಗೆ 1945ರಲ್ಲಿ (Knight Grand Commander of the Star of India) ಜಿ.ಸಿ.ಎಸ್.ಐ.ಬಿರುದನ್ನೂ, 1946ರಲ್ಲಿ ಜಿ.ಸಿ.ಬಿ. (Knight/Dame Grand Cross) ಬಿರುದನ್ನೂ ನೀಡಿತು.

"May those in distress become happy, May the sins of animate and inanimate beings disappear, may the evils of the universe be destroyed."

— Jayachamarajendra Wadiyar

BIOGRAPHY OF MOTHER KASTURBA GANDHI (11.04.1869 - 22.02.1944)

Collection by : V.N. Tippanagouda)


May, 1898 : *Kasturba gave birth to their fourth child, Ramdas. In the absence of an Indian nurse, Mohandas had assisted the doctor. As Kasturba was bed- ridden with anaemia, he attended on the mother and the new born as well as the older boys. Mohandas's legal practice was flourishing, but he was undergoing inner transformation. He was obsessed with simplifying living and spending more for public service.*

23.5.1900 : *Kasturba gave birth to their fifth child, Devdas. Child birth was difficult and Mohandas delivered the baby safely by himself. Her health was fragile. Mohandas had started thinking about Brahmacharya so that he could devote himself more to public service. He suggested that they sleep separately and she agreed.*

Oct. 1901 : *Mohandas decided to return to India. The grateful Indian community showered them with costly presents. Mohandas wanted all presents to go to the Natal Indian Congress for the benefit of Indians in South Africa. Kasturba resisted as she thought that he could do public service due to her toilng. She wanted to keep these for future daughters-in-law. But finally, Mohandas had his way.*

Dec. 1901 : *Mohandas, Kasturba and boys returned to India.*

Aug. 1902 : *G.K.Gokhale wanted Mohandas to set up practice in Bombay and thus help in the work of the Congress. Gandhiji enrolled Harilal in Gondal and Gokaldas in Benaras for education. Mohandas lived in a small bungalow in Girgaum. Manilal suddenly had typhoid and pneumonia. The doctor advised eggs and chicken soup. Kasturba and Mohandas would not agree. With her consent Mohandas tried hydropathic treatment and desperate naturopathic treatment. Manilal recovered. Mohandas moved the family to a more sunny and airy bungalow in Santa Cruz.*



Nov. 1902 : *Mohandas had to leave suddenly being recalled by the Indian community in South Africa. Kasturba protested against again upsetting the home. So he left them behind in Bombay, arranging with his nephew Chaganlal, with wife Kashiben and their child, to stay with Kasturba and promising to be back within a year.*

Jan. 1903 : *14 year old Harilal bethrothed with 11 year old Gulab. Mohandas was very averse to child marriage and gave consent on assuance that marriage would occur after many years.*

Early 1904 : *Kasturba with three younger sons joined Mohandas (Harilal remained in India for his studies) in Johannesburg (Transvaal) in South Africa, where Mohandas had now set up law practice. Kasturba was concerned about Ramdas who had fractured his arm on way from India. Gandhiji set it right with an earth poultice. Mohandas was approaching the most decisive period of his life and self-transformation. He had started the weekly 'Indian Opinion' on 4.6.1903 from Durban and sunk more and more of his money in it. He widened his range of public service.*

To be continued...

ವಿಧವೆಗೂ ಇರಲಿ ಮನ್ನಣೆ

ಸಂಗ್ರಹ : ಡಾ. ವಸುಂಧರಾ ಭೂಪತಿ




ಜಗತ್ತಿನಲ್ಲಿ ಮಾನವ ಸಂಬಂಧಗಳ ಮಹತ್ವವನ್ನು ಸಾರಲೆಂದೇ ಅಮ್ಮಂದಿರ ದಿನ, ಅಪ್ಪಂದಿರ ದಿನ, ಒಡಹುಟ್ಟಿದವರ ದಿನ ಹೀಗೆ ಹಲವಾರು ದಿನಗಳ ಆಚರಣೆಗಳಿವೆ. ಹಾಗೆಯೇ "ಅಂತರಾಷ್ಟ್ರೀಯ ವಿಧವೆಯರ ದಿನವೂ" ಒಂದು. ವಿಶ್ವಸಂಸ್ಥೆಯು 2011ರಲ್ಲಿ ಅಂತಾರಾಷ್ಟ್ರೀಯ ವಿಧವೆಯರ ದಿನವನ್ನು ಪರಿಚಯಿಸಿತು. ವಿಧವೆಯರ ಸಂಪೂರ್ಣ ಹಕ್ಕುಗಳು ಮತ್ತು ಮಾನ್ಯತೆಗಾಗಿ ಕ್ರಮ ಕೈಗೊಳ್ಳಲು ಈ ದಿನವನ್ನು ಆಚರಿಸಲಾಗುತ್ತದೆ. ಲೂಂಬಾ ಫೌಂಡೇಶನ್ 1954ರಲ್ಲಿ ಅಂತರರಾಷ್ಟ್ರೀಯ ವಿಧವೆಯರ ದಿನವನ್ನು ಗುರುತಿಸಲು ಜೂನ್ 23 ಅನ್ನು ಆಯ್ಕೆ ಮಾಡಿತು. ಇದೇ ದಿನದಂದು ಲೂಂಬಾ ಫೌಂಡೇಶನ್ ಸಂಸ್ಥಾಪಕರ ತಾಯಿ ವಿಧವೆಯಾಗಿದ್ದರಿಂದ ಅವರ ಸ್ಮರಣಾರ್ಥ ಆಚರಿಸಲಾಗುತ್ತಿದೆ. ವಿಧವೆಯರು ಎದುರಿಸುತ್ತಿರುವ ಕಷ್ಟಗಳ ಬಗ್ಗೆ ಅರಿವು ಮೂಡಿಸುವುದು ಮತ್ತು ಅವರಿಗೆ ಅನುಕೂಲಕರವಾದ ನೀತಿಗಳನ್ನು ಪ್ರಚಾರ ಮಾಡುವುದು ಪ್ರಮುಖ ಗುರಿಗಳಲ್ಲಿ ಒಂದಾಗಿದೆ. ವಿಶ್ವಸಂಸ್ಥೆಯು ವಿಧವೆಯರಿಗೆ ತಮ್ಮನ್ನು ಮತ್ತು ಅವರ ಕುಟುಂಬಗಳನ್ನು ಬೆಂಬಲಿಸಲು ಅಧಿಕಾರ ನೀಡುವುದು ಎಂದರೆ ಬಹಿಷ್ಕಾರ ಮತ್ತು ತಾರತಮ್ಯದ ಕಳಂಕಗಳನ್ನು ಪರಿಹರಿಸುವುದಾಗಿದೆ. ವಿಧವೆಯರನ್ನು ಎಲ್ಲಾ ರೀತಿಯ ಸುಖಗಳಿಂದ ಅಂದರೆ ಅಲಂಕಾರ, ಸಂಸಾರ ಸುಖ, ಧಾರ್ಮಿಕ ವಿಧಿ ವಿಧಾನಗಳಲ್ಲಿ ಪಾಲ್ಗೊಳ್ಳದಂತೆ ಮಾಡುವ ಸಂಪ್ರದಾಯಗಳು ನಮ್ಮಲ್ಲಿ ಈಗಲೂ ಚಾಲ್ತಿಯಲ್ಲಿವೆ. ವಿಧವೆಯಾದ ಬಳಿಕ ಮಹಿಳೆ ಸಮಾಜದಲ್ಲಿ ಒಮ್ಮೆಗೇ ಅಕ್ಷರಶಃ ಒಬ್ಬಂಟಿಯಾಗಿಬಿಡುತ್ತಾರೆ. ಎಲ್ಲರ ಅವಹೇಳನ, ಟೀಕೆಯನ್ನು ಎದುರಿಸಬೇಕಾಗುತ್ತದೆ. ಇಂಥಹ ಒಂಟಿಯಾದ ಮಹಿಳೆಯರಿಗೆ ಮತ್ತು ಅವರ ಮಕ್ಕಳಿಗೆ ಧೈರ್ಯ ತುಂಬಲೆಂದೇ ಅಂತರಾಷ್ಟ್ರೀಯ ವಿಧವೆಯರ ದಿನವನ್ನು ಪ್ರಪಂಚದಾದ್ಯಂತ ಆಚರಿಸಲಾಗುತ್ತದೆ. ವಿಶ್ವಸಂಸ್ಥೆಯ ಪ್ರಕಾರ, ಪ್ರಪಂಚದಾದ್ಯಂತ 258 ಮಿಲಿಯನ್ ವಿಧವೆಯರಿದ್ದಾರೆ ಎಂದು ತಿಳಿದುಬಂದಿದೆ. ಇತರ ಸಮಸ್ಯೆಗಳ ಜೊತೆಗೆ, ಅನೇಕ ಮಹಿಳೆಯರು ಗಂಡನ ಮರಣಾನಂತರ ಸಾಮಾಜಿಕ, ಆರ್ಥಿಕ ಸಂಕಷ್ಟವನ್ನು ಅನುಭವಿಸುತ್ತಾರೆ. ತಮ್ಮ ಸಂಗಾತಿಯನ್ನು ಕಳೆದುಕೊಂಡ ನಂತರ ಅವರ ದೈನಂದಿನ ಅಗತ್ಯಗಳನ್ನು ಮತ್ತು ಮೂಲಭೂತ ಆರೋಗ್ಯ ಸೌಲಭ್ಯಗಳನ್ನು ಪೂರೈಸಲು ಅವರಿಗೆ ಕಷ್ಟವಾಗುತ್ತದೆ. ಆದ್ದರಿಂದ, ಅವರ ಬೆಂಬಲಕ್ಕೆ ನಿಲ್ಲಲು ಮತ್ತು ಅವರ ಜೀವನ ಪರಿಸ್ಥಿತಿಗಳನ್ನು ಉತ್ತಮಗೊಳಿಸಲು ಅಂತಾರಾಷ್ಟ್ರೀಯ ವಿಧವೆಯರ ದಿನವನ್ನು ಆಚರಿಸಲಾಗುತ್ತದೆ.

ಸೌಜನ್ಯ : ಒನ್ ಇಂಡಿಯಾ

ಕಸ್ತೂರ್‌ಬಾ ಗಾಂಧಿ : (11.04.1869 - 22.02.1944)

- ಇಂದಿರಾ ಕೃಷ್ಣಪ್ಪ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)



ಕಸ್ತೂರ್‌ಬಾ ಗಾಂಧಿಯ ಸಮುದಾಯ ಮೋಧಬನಿಯಾದವರು.ಇವರು ಸಮುದ್ರದಾಚೆಗೆ ಓದಲಿಕ್ಕೆ ಮೋಹನದಾಸ ಗಾಂಧಿಯನ್ನು ಕಳುಹಿಸಲು ತಯಾರಿ ನಡೆಸಿದ ಪುತಲೀಬಾ ಅವರ ಮೇಲೆ ಸಿಟ್ಟಾಗಿದ್ದರು. ಆದರೆ ಮಗನ ಶಿಕ್ಷಣದ ಬಗ್ಗೆ ಅಚಲಳಾಗಿದ್ದ ತಾಯಿ ಆತನಿಂದ ಮಾಡಿಸಿಕೊಂಡ ಪ್ರಮಾಣ ಮದ್ಯ ಮಾಂಸ, ಮಾನಿನಿಯರಿಂದ ದೂರವಿರುವ ವಚನ ಪರಿಪಾಲನೆಯಲ್ಲಿ ಮಗನಲ್ಲಿ ಅಗಾಧ ವಿಶ್ವಾಸ ಹೊಂದಿದ್ದಳು. 'ಬಾ'ಳ ನಾದಿನಿ ನಂದಕುನ್‌ವರ್ ಕೂಡ ಗರ್ಭಿಣಿ ಇದ್ದಳು. ಆಕೆ 1888ರ ಚಳಿಗಾಲದ ಒಂದು ದಿನ, ಹೆಣ್ಣು ಮಗುವಿಗೆ ಜನ್ಮ ನೀಡಿದ್ದಳು. ಹೆಣ್ಣು ಮಗುವಿನ ಜನನವನ್ನು ಕುಟುಂಬದವರು ಹರ್ಷದಿಂದ ಆಹ್ವಾನಿಸಿರಲಿಲ್ಲ. ಇದರಿಂದ 'ಬಾ'ಳ ಮನಸ್ಸಿನಲ್ಲಿ, ಒಮ್ಮೊಮ್ಮೆ ಆತಂಕವೂ ಮೂಡುತ್ತಿತ್ತು. ಏಕೆಂದರೆ ಮನೆಯವರೆಲ್ಲರು, 'ಬಾ' ಒಬ್ಬ ಮಗನನ್ನು ಹೆತ್ತು ಕೊಡಬೇಕೆಂಬ ಆಸೆಯ ದೃಷ್ಟಿ ನೆಟ್ಟಿದ್ದರು. ಹಾಗೆಯೇ ಆಯಿತು. 1888ರಲ್ಲಿ 'ಬಾ'ಳಿಗೆ ಗಂಡು ಮಗುವೊಂದು ಜನಿಸಿದಾಕ್ಷಣ ಮನೆಯವರ ಸಂತೋಷಕ್ಕೆ ಪಾರವೇ ಇರಲಿಲ್ಲ. ಸೂರು ಹಾರುವ ಹಾಗೆ ಧ್ವನಿ ಎತ್ತಿ ಅತ್ತಿದ್ದ ಮಗುವಿನ ಅಳು ಕೇಳಿ, ಮನೆಯವರೆಲ್ಲ ಹರ್ಷಚಿತ್ತರಾದರು. ಮೋಹನ ವಿದೇಶಕ್ಕೆ ಹೊರಡುವ ಮೊದಲೇ ಮಗ ಜನಿಸಿದ್ದು 'ಬಾ'ಗೆ ಎಲ್ಲಿಲ್ಲದ ಸಂತೋಷ. ತಕ್ಷಣವೇ ಸಂಬಂಧಿಕರಿಗೆ, ತೌರುಮನೆಗೆ ಸುದ್ದಿ ಕಳುಹಿಸಿದ್ದರು. ಆರು ದಿನಗಳ ನಂತರ ತಾಯಿ ಮಗುವನ್ನು ರೂಢಿಗತ ಸಂಪ್ರದಾಯದಂತೆ ಮನೆಯೊಳಗೆ ಬರಮಾಡಿಕೊಂಡಿದ್ದರು. ಮಗುವಿನ ನಾಮಕರಣ ಸಮಾರಂಭವೂ, ಮದುವೆಯ ತರಹವೇ ಸಂಭ್ರಮದಿಂದಲೇ ಮಾಡಿದ್ದರು. ಮಗುವಿಗೆ "ಹರಿಲಾಲ" ಎಂದು ನಾಮಕರಣ ಮಾಡಿದರು. ಮಗನ ಅಗಲುವಿಕೆಯ ನೋವನ್ನು ತಣಿಸಲೆಂಬಂತೆ, ಮೊಮ್ಮಗುವಿನ ಜನನ, ಪುತಲೀಬಾಯಿ ಮತ್ತು 'ಬಾ'ಳಿಗೆ ತಾತ್ಕಾಲಿಕ ಸಂತಸ ತಂದಿತ್ತು.

ಮೋಹನದಾಸನಿಗೆ ವಿದೇಶ ಪ್ರಯಾಣಕ್ಕೆ ಬ್ರಿಟಿಷರ ರಾಜಕೀಯ ಸಲಹೆಗಾರ 'ಫ್ರೆಡರಿಕ್ ಲೇ' ಅವರಿಂದ ಸ್ಕಾಲರ್‌ಶಿಪ್‌ಗಳಿಗೆ ಪ್ರಯತ್ನಗಳು ನಡೆದವು. ಆತ, ಧನಸಹಾಯ ಮಾಡಲು ಇಚ್ಛೆಯಿಲ್ಲದೆ, ಬೇಡಿಕೆಯನ್ನು ತಿರಸ್ಕರಿಸಿದ್ದನು. ಬ್ಯಾರಿಸ್ಟರ್ ಪದವಿಗೆ, ಕಾಲೇಜು ಡಿಗ್ರಿ ಆಗಿರಲೇಬೇಕೆಂದು ತಗಾದೆ ತೆಗೆದನು. ನೆಂಟರಿಷ್ಟರು, ಬಂಧು ಬಳಗ, ಸ್ನೇಹಿತರು ಎಲ್ಲರೂ ಸೇರಿ ಹಣ ಹೊಂದಿಸಿದರು. 'ಬಾ'ಳ ಒಡವೆಗಳು ಮಾರಾಟ ಮಾಡಿದಾಗ ಒಂದಿಷ್ಟು ನೆರವೂ ಆಯಿತು.

ಹೊರಡುವ ದಿನ ಆಗಸ್ಟ್ 10, 1888 ಬಂದೇ ಬಿಟ್ಟಿತು. ತಾಯಿಯನ್ನು ಆಲಂಗಿಸಿ, ಪಾದಕ್ಕೆ ನಮಸ್ಕರಿಸಿದ ಮೋಹನ ಅಲ್ಲಿದ್ದ ಎಲ್ಲ ಹಿರಿಯರ ಪಾದಕ್ಕೆರಗಿ ಆಶೀರ್ವಾದ ಪಡೆದನು. ಕೊನೆಯದಾಗಿ "ಬಾಳ ಬಳಿ ಬಂದು" 'ಬಾ' ಬಾಣಂತಿತನದ ಈ ವೇಳೆಯಲ್ಲಿನಾನಿರಬೇಕಿತ್ತು. ನಿನ್ನನ್ನು, ಈ ಎಳೆ ಮಗುವನ್ನು ಬಿಟ್ಟು ಹೊರದೇಶಕ್ಕೆ ಹೋಗುವುದು ನನಗೆ ಬೇಸರ ತಂದಿದೆ. ನೀನೇ ಎಲ್ಲಾ ಭಾರವನ್ನು ಹೊರ ಬೇಕಾಯಿತಲ್ಲ" ಎಂದು ಅಳುತ್ತಾ ಪತ್ನಿ ಮತ್ತು ಮಗುವನ್ನು ಆಲಂಗಿಸಿ, ಮುತ್ತಿಟ್ಟು, ಮುಂದಡಿಯಿಟ್ಟಿದ್ದನು. ಈ ಅಗಲಿಕೆಯ ನೋವು ಸುಮಾರು ಮೂರು ವರ್ಷಗಳ ವರೆಗೆ ಪತಿ-ಪತ್ನಿಯರ ಬದುಕನ್ನು ಮಾನವೀಯಗೊಳಿಸಿತ್ತು.

ಮುಂದುವರಿಯುವುದು.



ದಕ್ಷಿಣ ಆಫ್ರಿಕಾದ ದರ್ಬಾನ್‌ನಲ್ಲಿ ಭಾರತೀಯರೊಂದಿಗೆ ಕಸ್ತೂರ್‌ಬಾ ಮತ್ತು ಬಾಪು



ಟಾಲ್‌ಸ್ಟಾಯ್ ಫಾರ್ಮ್‌ನಲ್ಲಿ ಮಹಾತ್ಮ ಗಾಂಧಿ

ಗಾಂಧಿ ಮತ್ತು ಆಧ್ಯಾತ್ಮಿಕ ಸುಸ್ಥಿರತೆ

– ಡಾ. ವೂಡೇ ಪಿ. ಕೃಷ್ಣ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಗಾಂಧಿ ಮತ್ತು ಆಧ್ಯಾತ್ಮಿಕ ಸುಸ್ಥಿರತೆ

ಪ್ರಕೃತಿಯೊಂದಿಗೆ ಮಾನವರು ಅರಿತು ಬೆರೆತು ನುರಿತು ಬೆಳೆದ ಚರಿತ್ರೆಯಿಂದ ಜಗತ್ತಿನಲ್ಲಿ ಮಾನವ ಇತಿಹಾಸದ ಪುಟಗಳು ಆರಂಭವಾಗುತ್ತವೆ. ಪ್ರಕೃತಿ ಜೀವಿಯಾಗಿದ್ದ ಮಾನವ ನಾಗರೀಕತೆ ಬೆಳೆಸಿಕೊಂಡಂತೆ "ನಿಸರ್ಗವು ತನಗಾಗಿಯೇ ಸೃಷ್ಟಿಯಾಗಿದೆ" ಎಂಬ ಭ್ರಮಾತ್ಮಕತೆಯಲ್ಲಿ ಸೃಷ್ಟಿಯ ಮೇಲೆ ಸವಾರಿಗೆ ಆರಂಭಿಸಿದಾಗಲೇ ಪ್ರಪಂಚದ ವಿನಾಶದ ಗತಿ ಪ್ರಾರಂಭವಾಗುತ್ತದೆ. ಭರತ ಭೂಮಿಯು ಆದಿ ಮಾನವರು, ಮೂಲನಿವಾಸಿಗಳು, ಋಷಿ–ಮುನಿಗಳು, ಸುಜ್ಞಾನಿಗಳು, ಗುರುಗಳು, ನೆಲೆಸಿದ ಸುಸಂಸ್ಕೃತಿ, ಸುಜ್ಞಾನ ಮತ್ತು ಸುಸ್ಥಿರ ಬದುಕಿನ ನೆಲವೀಡಾಗಿತ್ತು. ಮನುಷ್ಯನಿಗೆ ಅಗತ್ಯವಿರುವ ಗಾಳಿ, ನೀರು, ಆಹಾರ, ಆಶ್ರಯ, ಅರೋಗ್ಯ ಆನಂದವನ್ನು ದಯಪಾಲಿಸುವ ಪುರಾಣ–ಪುಣ್ಯಕಥೆ, ವೇದೋಪನಿಷತ್ತು, ಪವಿತ್ರ ಗ್ರಂಥಗಳ ಉಗಮಸ್ಥಾನವೂ ಆಗಿರುವ ದ್ರಾವಿಡ–ಆರ್ಯ ಸಂಸ್ಕೃತಿಗಳ ಮಡಿಲೇ ಆಗಿರುವ, ಪ್ರಕೃತಿಯೇ ಅಧ್ಯಾತ್ಮಿಕತೆಯ ಜೀವಕೋಶವಾಗಿದೆ. ಇಂಥಹ ಜೀವನ ವಿಧಾನವು, ಪೌರುಷತ್ವ ಮತ್ತು ಅಧಿಕಾರ ರಾಜಕಾರಣದಿಂದ ವಿನಾಶದೆಡೆಗೆ ಸಾಗಿದ ಮಾದರಿಯೊಂದನ್ನು ಇಲ್ಲಿ ಹೇಳ ಬಯಸುತ್ತೇನೆ.

ಅಮೇರಿಕಾದ ಸೈನ್ಯಾಧಿಕಾರಿ, 1854ರಲ್ಲಿ ವಾಶಿಂಗ್ಟನ್ನ ಸಿಯಾಟಲ್ ರಾಜ್ಯದ ಮುಖ್ಯಸ್ಥನಿಗೆ, ಅವರ ಬುಡಕಟ್ಟು ಜನಾಂಗದವರ ಜಮೀನನ್ನು ಮಾರಾಟ ಮಾಡಲು ಅಜ್ಞಾಪಿಸಿದನು. ಆಗ ಸಿಯಾಟಲ್ನ ಮುಖ್ಯಸ್ಥನ ಆತ್ಮವು ಅತೀವ ದುಃಖದಿಂದ ರೋಧಿಸುತ್ತದೆ: "ಈ ಭೂಮಿ ದಿಗ್ ದಿಗಂತ. ಆ ಭೂತಾಯಿಯ ಮಮತೆಯನ್ನು ಮಾರಾಟ ಮಾಡಲಾಗುವುದೇ? ಕೊಳ್ಳಲ್ಲುಂಟೇ? ಈ ಕಲ್ಪನೆಯೇ ನನಗೆ ವಿಚಿತ್ರವಾಗಿ ತೋರುತ್ತದೆ. ಪರಿಶುಭ್ರ ಗಾಳಿ ಚರಾಚರಗಳಿಗುಣಿಸುವ ಜೀವಜಲ ಹೇಗೆ ನಮ್ಮ ಸ್ವತ್ತಾಗುತ್ತದೆ? ಅಲ್ಲದೆ ಅದನ್ನು ಹೇಗೆ ಕೊಳ್ಳಲು ಸಾಧ್ಯ?"

"ನಮ್ಮ ಜನರಿಗೆ ಸೃಷ್ಟಿಯ ಕಣಕಣವೂ ಪವಿತ್ರವಾದದ್ದು. ಪ್ರತಿಯೊಂದು ವೃಕ್ಷ, ಮರದ ತೊಗಟೆ, ಪ್ರತಿ ಮರಳದಂಡೆ, ಮೋಡದ ಮಂಜಿನ ಹನಿ, ಭೂಮಿ ಮೇಲಿನ ಪರಿಶುಭ್ರ ಪ್ರದೇಶ ಮತ್ತು ಚಿಲಿಪಿಲಿಗುಟ್ಟುವ ಹಕ್ಕಿಪಕ್ಷಿಗಳ ಒಡನಾಟದಲ್ಲಿ ಮಾನವರು ಸೃಷ್ಟಿಯ ವೈಚಿತ್ರಗಳ ಅನುಭವದಿಂದ ಪ್ರಕೃತಿಯನ್ನು ಪವಿತ್ರವು ಮತ್ತು ರಕ್ಷಕನನ್ನಾಗಿ ಕಂಡುಕೊಂಡರು. ಈ ನೆಲದಲ್ಲಿ ಬೆಳೆದ ಪ್ರತಿ ಸಸ್ಯವೂ ಹೆಮ್ಮರವೂ ನಮ್ಮ ರೆಡ್ ಇಂಡಿಯನ್ನರನ್ನೇ ಉಸುರುತ್ತವೆ, ನಳನಳಿಸುತ್ತವೆ. ಪೃಥ್ವಿಗೆ ಒಳಿತಾಗಲೀ ಕೆಡುಕಾಗಲೀ, ಭೂಮಿ ಮೇಲೆ ಏನೇ ಸಂಭವಿಸಲಿ, ಅದು ನೇರವಾಗಿ ಭೂಮಿ ಪುತ್ರ ಮಾನವರ ಮೇಲೆ ಪರಿಣಾಮ ಬೀರುತ್ತವೆ. ಜೀವರಾಶಿಯ ಬೃಹತ್ ಜಾಲವನ್ನು ಮನುಷ್ಯ ನೇಯಲಿಲ್ಲ. ಆ ಜಾಲದಲ್ಲಿ ಮನುಷ್ಯ ಕೇವಲ ಒಂದು ಜೀವಿಯಷ್ಟೆ. ಸೃಷ್ಟಿಯ ಜೀವಜಾಲಕ್ಕೆ ಕೇಡು ಬಯಸಿದರೆ ಅದು ಮನುಷ್ಯ ತನಗೆ ತಾನೇ ಕೇಡು ಬಯಸಿಕೊಂಡಂತೆ."

ಎಲ್ಲಾ ಬುಡಕಟ್ಟು ಸಮುದಾಯ, ಭೂಮಿಯನ್ನು ಪವಿತ್ರವೆಂದು ಪರಿಭಾವಿಸಿದ್ದಾರೆ ಮತ್ತು ಮಾತೆಯೆಂದು ಆರಾಧಿಸಿದ್ದಾರೆ. ಹಾಗೆಯೇ ಹಿಂದುಗಳು, ಜೈನರು, ಬೌದ್ಧರು, ಇನ್ನೂ ಹಲವು ಧರ್ಮದವರೂ ಸಹ ಭೂಮಿಯನ್ನು ಜನ್ಮಭೂಮಿಯೆಂದು ಅತ್ಯಂತ ಘನತೆಯಿಂದ ಪಾವಿತ್ರ್ಯದಿಂದ ಕಂಡಿರುವರು. ಅವರು ನೈಸರ್ಗಿಕ ಸಂಪನ್ಮೂಲಗಳು ಮತ್ತು ಅವುಗಳ ಸುಸ್ಥಿರತೆಯ ಬಗ್ಗೆ ಕಾಳಜಿ ಮಾಡದೆ, ಪ್ರಕೃತಿಯನ್ನು ಬೆಳೆಸಿದರು. ಆದರೆ ಜೂಡೋ–ಕ್ರಿಶ್ಚಿಯನ್ ಧಾರ್ಮಿಕ ನಂಬಿಕೆಗಳನ್ನು ಆಧರಿಸಿದ ಬಿಳಿ ಮನುಷ್ಯರ ನಂಬಿಕೆಗಳು ವಿಭಿನ್ನವಾಗಿದ್ದವು. ಪ್ರಕೃತಿಯ ಮೇಲಿನ ಪ್ರಾಬಲ್ಯ ಮತ್ತು ನಿಯಂತ್ರಣಕ್ಕಾಗಿಯೇ ಮನುಷ್ಯನ ಸೃಷ್ಟಿಯಾಗಿದೆ ಎಂದು ನಂಬಿದ್ದರು. ಇದೇ ತತ್ವವನ್ನಾಧರಿಸಿಯೇ ಬಿಳಿ ಜನಾಂಗದವರು ಪ್ರಕೃತಿಯನ್ನು ನಿರಂತರವಾಗಿ ನಿಯಂತ್ರಿಸುತ್ತಾ ಹಾಗೂ ಇತರೆ ಜನಸಮುದಾಯದ ಮೇಲೆ ಪ್ರಭುತ್ವ ಸಾಧಿಸತೊಡಗಿದರು. ತಮ್ಮ ಸಾರ್ವಭೌಮತ್ವವನ್ನು ಪ್ರಪಂಚದಾದ್ಯಂತ ವಿಸ್ತರಿಸಲು ಇಚ್ಛಿಸುತ್ತಾ ಜಗತ್ತಿನ ಒಂದೊಂದೇ ಪ್ರದೇಶವನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಲಾರಂಬಿಸಿದರು. ವಿಶ್ವದ ಭೂಭಾಗದ 84.4%ರಷ್ಟು ಪ್ರದೇಶ 1914ರ ವೇಳೆಗೆ ಯುರೋಪಿಯನ್ನರ ವಸಾಹತು ಆಗಿ ಮಾರ್ಪಾಡಾಗಿತ್ತು. ವಸಾಹತೀಕರಣದೊಂದಿಗೆ ಅಭಿವೃದ್ಧಿಯ ಹೊಸ ವ್ಯಾಖ್ಯಾನ ಮಾಡಿದರು. ದಕ್ಷಿಣ ಆಫ್ರಿಕಾದಲ್ಲಿನ ರಾಜ್ಯ ರೊಡೇಶಿಯಾದ ಸಂಸ್ಥಾಪಕ ಸೆಸಿಲ್ ರೋಡ್ಸನ ಮಾತುಗಳಿಂದ ಅವರ ಮನಸ್ಥಿತಿಯು ನಮಗೆ ಅರಿವಾಗುವುದು. ಆತನ ಮಾತುಗಳು – "ನಾವು ಹೊಸ ಭೂಪ್ರದೇಶಗಳನ್ನು ಕಂಡುಹಿಡಿದು, ನಮ್ಮ ವಸಾಹತುಗಳನ್ನಾಗಿ ಮಾಡಿಕೊಳ್ಳಬೇಕು. ನಾವು ಅಲ್ಲಿಂದ ಸುಲಭವಾಗಿ ಕಚ್ಚಾ ವಸ್ತುಗಳನ್ನು ಪಡೆಯಬಹುದು. ಜೊತೆಗೆ ಅಲ್ಲಿನ ಮೂಲನಿವಾಸಿಗಳನ್ನು ಗುಲಾಮರನ್ನಾಗಿ, ಅಗ್ಗದ ಕಾರ್ಮಿಕರನ್ನಾಗಿ ಬಳಸಿಕೊಳ್ಳಬಹುದು. ನಮ್ಮ ಕಾರ್ಖಾನೆಗಳು ಉತ್ಪಾದಿಸುವ ಹೆಚ್ಚುವರಿ ಉತ್ಪನಗಳನ್ನು ವಸಾಹತುಗಳಲ್ಲಿ ಸಂಗ್ರಹಿಸಿಡಬಹುದು", ಎಂಬ ಮಾತುಗಳು ವಸಾಹತುಶಾಹಿ ಆಶಯಗಳನ್ನು ಪ್ರತಿಬಿಂಬಿಸುತ್ತವೆ. ಹೀಗಿದ್ದೂ ಇಂದಿಗೂ ಈ ಮಾದರಿಯ ಅಭಿವೃದ್ಧಿಯ ಪರಿಕಲ್ಪನೆಗಳು ಅಸ್ತಿತ್ವದಲ್ಲಿವೆ ಮತ್ತು ಹೊಸ ಆಯಾಮಗಳಲ್ಲಿ ಹೊರಹೊಮ್ಮುತ್ತಿವೆ. ಉದಾರೀಕರಣ ಹಾಗು ಜಾಗತೀಕರಣಕ್ಕೆ ತೆರೆದುಕೊಂಡಿರುವ ನಾವು ಪ್ರತಿನಿತ್ಯ ಇದನ್ನು ಸಾಕ್ಷೀಕರಿಸುತ್ತಿದ್ದೇವೆ. ಅಭಿವೃದ್ಧಿಗೆ ಸಂಬಂದಿಸಿದ ವಿಮರ್ಶೆಗೆ ಪ್ರಖ್ಯಾತರಾದ ಫ್ರಾನ್ಸ್‌ನ ಫ್ರಾಂಕೋಯಿಸ್ ಪಾರ್ಟಂಟ್ ಅವರು ಈ ವಿಷಯದಲ್ಲಿ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ "ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ, ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ನೆರವು ನೀಡುವ ಹೊಸ ವಿಧಾನವನ್ನು ಇಂದು ಅವಿಷ್ಕರಿಸಿವೆ. ನೆರವಿನ ಹೆಸರಿನಲ್ಲಿ ಅವು ಕೈಗೊಳ್ಳುತ್ತಿರುವ ಕಾರ್ಯಗಳು ಹಿಂದಿನ ಪಾಶ್ಚಿಮಾತ್ಯರ ವಸಾಹತು ನೀತಿಯನ್ನೇ ಹೋಲುತ್ತವೆ. ಪರೋಕ್ಷವಾಗಿ ಇದೂ ವಸಾಹತುಕರಣವೇ ಆಗಿದೆ" ಎಂದಿದ್ದಾನೆ.

ಮುಂದುವರಿಯುವುದು...

ವೈದ್ಯರ ರಾಷ್ಟ್ರೀಯ ದಿನಾಚರಣೆಯ ಶಿಲ್ಪಿ – ಬಿಧಾನ್ ಚಂದ್ರ ರಾಯ್

(01.07.1882 – 01.07.1962)

– ಡಾ. ರಾಮಲಿಂಗೇಶ್ವರ

ಬಿಧಾನ್ ಚಂದ್ರರಾಯ್ ಬಿಹಾರದ ಬಂಕಿಪುರದಲ್ಲಿ ಜನಿಸಿದರು. ಅವರ ತಂದೆಯವರಾದ ಪ್ರಕಾಶಚಂದ್ರ ಅವರು ಸುಂಕಾಧಿಕಾರಿಯಾಗಿದ್ದರು. ಬಿಧಾನ್ ಅವರು I.A.ಯನ್ನು ಕಲ್ಕತ್ತಾದ ಪ್ರೆಸಿಡೆನ್ಸಿ ಕಾಲೇಜಿನಲ್ಲಿ, ಬಿ.ಎ ಪದವಿಯನ್ನು ಪಾಟ್ನಾ ಕಾಲೇಜಿನಲ್ಲಿ ಗಣಿತದಲ್ಲಿ ಅಗ್ರಗಣ್ಯರಾಗಿ ಪೂರೈಸಿದರು. ನಂತರ ವೈದ್ಯಕೀಯ ಶಿಕ್ಷಣವನ್ನು ಸ್ಕಾಲರ್‌ಶಿಫ್‌ನೊಂದಿಗೆ 1901ರಲ್ಲಿ ಕಲ್ಕತ್ತಾದಲ್ಲಿ ಪಡೆದಿದ್ದರು.

ಬಿಧಾನ್ ಅವರು 1909ರಲ್ಲಿ ಸೆಂಟ್ ಬಾರ್ಥೊಲೊಮೆವ್ಸ್ ಆಸ್ಪತ್ರೆಗೆ ಮುಂದಿನ ಶಿಕ್ಷಣಕ್ಕಾಗಿ ಅರ್ಜಿ ಸಲ್ಲಿಸಿದ್ದರು. ಅಲ್ಲಿನ ಮುಖ್ಯಸ್ಥರು ಏಷ್ಯಾದ ಮೂಲದವರನ್ನು ವಿಧ್ಯಾರ್ಥಿಯಾಗಿ ಆಯ್ಕೆ ಮಾಡಲು ಇಚ್ಛಿಸದೆ ಅವರ ಅರ್ಜಿಯನ್ನು ತಿರಸ್ಕರಿಸಿದ್ದರು. ಧೃತಿಗೆಡದ ಡಾ.ರಾಯ್ ಅವರು ಮೂವತ್ತು ಬಾರಿ ಅರ್ಜಿಯನ್ನು ಸಲ್ಲಿಸಿ, ಅಲ್ಲಿಯೇ ಶಿಕ್ಷಣ ಪಡೆಯುವ ಅವಕಾಶ ಪಡೆದರು. ಕೇವಲ ಎರಡು ವರ್ಷ ಮೂರು ತಿಂಗಳ ಅವಧಿಯಲ್ಲಿ M.R.C.P. ಮತ್ತು F.R.C.S.ನ್ನು ಪೂರೈಸಿ ಇಂಗ್ಲೆಂಡ್‌ನಿಂದ 1911ರಲ್ಲಿ ಸ್ವದೇಶಕ್ಕೆ ವಾಪಸಾದರು. ವಾಪಸಾದ ನಂತರ ಕಲ್ಕತ್ತಾ ಮೆಡಿಕಲ್ ಕಾಲೇಜು, ಕ್ಯಾಂಪ್‌ಬೆಲ್, ಮೆಡಿಕಲ್ ಸ್ಕೂಲ್ ಮತ್ತು ಕಾರ್ಮಿಕಲ್ ಮೆಡಿಕಲ್ ಕಾಲೇಜಿನಲ್ಲಿ ವೃತ್ತಿಯನ್ನು ಪ್ರಾರಂಭಿಸಿದರು.

ಬಂಗಾಳ ವಿಭಜನೆಯ ವಿರುದ್ಧ ರಾಷ್ಟ್ರೀಯ ನಾಯಕರಾದ ಲಾಲಾ ಲಜಪತ್‌ರಾಯ್, ಅರವಿಂದ ಘೋಷ್, ತಿಲಕ ಮತ್ತು ಬಿಪಿನ್ ಚಂದ್ರಪಾಲ್ ಇವರ ಮುಂದಾಳತ್ವದಲ್ಲಿ ಹೋರಾಟಗಳು ಪ್ರಾರಂಭವಾದವು. ಬಿಧಾನ್ ಅವರಿಗೆ ಚಳುವಳಿಯಲ್ಲಿ ಭಾಗವಹಿಸಲು, ಮನಸ್ಸಿದ್ದರೂ, ವೈದ್ಯಕೀಯ ಸೇವೆಯ ಮೂಲಕ ದೇಶದ ಜನರಿಗೆ ಸೇವೆ ಮಾಡಲು ಮನಸ್ಸನ್ನು ಕೆಂದ್ರೀಕರಿಸಿದರು. ಡಾ. ರಾಯ್, ಸ್ವರಾಜ್ಯ ಕಲ್ಪನೆಯು ಸಾಕಾರವಾಗಲು ಪ್ರಜೆಗಳಲ್ಲಿ ಮಾನಸಿಕವಾದ ಮತ್ತು ದೈಹಿಕ ದೃಢತೆಯನ್ನು ತುಂಬುವುದರ ವಿನಹ ಸಾಧ್ಯವಾಗುವುದಿಲ್ಲ ಎಂದು ನಂಬಿದ್ದರು. ಈ ನಿಟ್ಟಿನಲ್ಲಿ ಜಾದವಪುರ ಟಿ.ಬಿ ಆಸ್ಪತ್ರೆ, ಚಿತ್ತರಂಜನ್ ಸೇವಾಸದನ್, ಆರ್.ಜಿ.ಕರ್ ವೈದ್ಯಕೀಯ ಕಾಲೇಜು. ಕಮಲಾ ನೆಹರು ಆಸ್ಪತ್ರೆ, ವಿಕ್ಟೋರಿಯಾ ಸಂಸ್ಥೆ, ಮತ್ತು ಚಿತ್ತರಂಜನ್ ಕ್ಯಾನ್ಸರ್ ಆಸ್ಪತ್ರೆಗಳನ್ನು ಕಟ್ಟಿಸಿದರು. ಚಿತ್ತರಂಜನ್ ಸೇವಾಸದನ್ ಮಹಿಳೆಯರು ಮತ್ತು ಮಕ್ಕಳಿಗಾಗಿ 1926ರಲ್ಲಿ ಪ್ರಾರಂಭವಾಯಿತು. ಡಾ. ರಾಯ್ ಅವರ ಪ್ರಯತ್ನದಿಂದ ಎಲ್ಲ ವರ್ಗಗಳ ಮತ್ತು ಸಮುದಾಯದ ಮಹಿಳೆಯರು ಆಸ್ಪತ್ರೆಗೆ ಬರತೊಡಗಿದರು. ಅವರು ಮಹಿಳೆಯರಿಗಾಗಿ ನರ್ಸಿಂಗ್ ಮತ್ತು ಸಾಮಾಜಿಕ ಸೇವೆಗಳಿಗಾಗಿ ಕೇಂದ್ರವನ್ನು ಸ್ಥಾಪಿಸಿದರು.

ಡಾ.ರಾಯ್ ಗಾಂಧೀಜಿ ಅವರ ಮಿತ್ರರೂ ಮತ್ತು ವೈದ್ಯರೂ ಆಗಿದ್ದರು. ಕ್ವಿಟ್ ಇಂಡಿಯಾ ಚಳುವಳಿಯ ಸಂದರ್ಭದಲ್ಲಿ ಗಾಂಧೀಜಿ ಅವರು ಪೂನಾದ ಪರ್ಣಕುಟಿನಲ್ಲಿ ಡಾ. ರಾಯ್ ಅವರೇ ಆರೈಕೆ ಮಾಡುತ್ತಿದ್ದರು. ಗಾಂಧೀಜಿ



ಅವರು "ಡಾ.ರಾಯ್ ಅವರೇ ನಾನೇಕೆ ನಿಮ್ಮ ಸೇವೆಯನ್ನು ಸ್ವೀಕರಿಸಬೇಕು? ನನ್ನ ದೇಶವಾಸಿಗಳಾದ ನಾಲ್ಕು ದಶಲಕ್ಷ ಜನರಿಗೆ ನಿಮ್ಮಿಂದ ಉಚಿತವಾಗಿ ಸೇವೆ ನೀಡಲು ಸಾಧ್ಯವೇ?" ಎಂದು ಕೇಳಿದರು. ಡಾ. ರಾಯ್ ಅವರು ಉತ್ತರಿಸುತ್ತಾ" ಇಲ್ಲ ಗಾಂಧೀಜಿ ಅವರೇ, ನಾನು ಮೋಹನದಾಸ ಕರಮಚಂದ ಗಾಂಧಿಯನ್ನು ಉಪಚರಿಸಲು ಬರಲಿಲ್ಲ. ನನ್ನಿಂದ ನಾಲ್ಕು ದಶಲಕ್ಷ ಜನರಿಗೆ ಉಚಿತವಾಗಿ ಚಿಕಿತ್ಸೆ ನೀಡಲು ಸಾಧ್ಯವೂ ಇಲ್ಲ. ಆದರೆ ನಾನು ಬಂದಿರುವುದು ನಾಲ್ಕು ದಶಲಕ್ಷ ಜನರ ಮುಖಂಡನನ್ನು ಉಪಚರಿಸಲು ಬಂದಿದ್ದೇನಷ್ಟೇ" ಎಂದು ನುಡಿದಿದ್ದರು.

ಡಾ.ರಾಯ್ ಅವರು ವಿಧಾನ ಸಭೆಗೆ ನಡೆದ ಚುನಾವಣೆಯಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಬಂಗಾಳದ ಅತ್ಯಂತ ಹಿರಿಯ "ಗ್ರ್ಯಾಂಡ್ ಓಲ್ಡ್ ಮ್ಯಾನ್ ಆಫ್ ಬೆಂಗಾಲ್," ಎಂಬ ಖ್ಯಾತಿಯ ಸುರೇಂದ್ರನಾಥ ಬ್ಯಾನರ್ಜಿ ಅವರನ್ನು ಸೋಲಿಸಿ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಗೆ 1928ರಲ್ಲಿ ಆಯ್ಕೆಯಾದರು. 1931ರ ದಂಡಿ ಸತ್ಯಾಗ್ರಹದಲ್ಲಿ ಕಲ್ಕತ್ತಾ ಸಂಘಟನೆಯ ಹಲವಾರು ಕಾರ್ಯಕರ್ತರು ಜೈಲು ಸೇರಿದ ಸಂದರ್ಭದಲ್ಲಿ ಕಾಂಗ್ರೆಸ್ ಡಾ. ರಾಯ್ ಅವರನ್ನು ಸಂಘದ ಕಾರ್ಯಗಳನ್ನು ನೋಡಿಕೊಳ್ಳುವಂತೆ ಸೂಚಿಸಿತು. ಉಚಿತ ಶಿಕ್ಷಣ, ಉಚಿತ ಆರೋಗ್ಯ ವ್ಯವಸ್ಥೆ, ಉತ್ತಮ ರಸ್ತೆ ಸೌಲಭ್ಯ, ವಿದ್ಯುತ್ ವ್ಯವಸ್ಥೆ ಮತ್ತು ನೀರು ಸರಬರಾಜುಗಳನ್ನು ಇವರ ಕಾರ್ಯಾವಧಿಯಲ್ಲಿ ನೆರವೇರಿದವು. ಕಾಂಗ್ರೆಸ್ ಡಾ.ರಾಯ್ ಅವರ ಹೆಸರನ್ನು ಬಂಗಾಳದ ಮುಖ್ಯಮಂತ್ರಿ ಹುದ್ದೆಗೆ ಶಿಫಾರಸ್ಸು ಮಾಡಿತ್ತು. ಡಾ.ರಾಯ್ ಅವರು ಗಾಂಧೀಜಿ ಅವರ ಸಲಹೆಯ ಮೇರೆಗೆ ಜನವರಿ 23, 1948ರಂದು ಅವರು ಬಂಗಾಳದ ಮುಖ್ಯಮಂತ್ರಿಯಾಗಿ ಹುದ್ದೆಯನ್ನಲಂಕರಿಸಿದರು. ಆ ಸಂದರ್ಭದಲ್ಲಾದ ಕೋಮುಗಲಭೆಗಳು, ಆಹಾರ ಕೊರತೆ, ನಿರುದ್ಯೋಗ, ಮತ್ತು ನಿರಾಶ್ರಿತರ ವಲಸೆ ಸಮಸ್ಯೆಗಳನ್ನು ಸಮರ್ಪಕವಾಗಿ ನಿಭಾಯಿಸಿದ್ದರು.

ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಇವರನ್ನು "ಪಶ್ಚಿಮ ಬಂಗಾಳದ ಶ್ರೇಷ್ಠ ಶಿಲ್ಪಿ"ಯೆಂದು ಕರೆಯಲಾಗುತ್ತದೆ. ಇವರು "ಕಲ್ಯಾಣಿ ಮತ್ತು ಬಿಧಾನ್" ಎಂಬ ಎರಡು ದೊಡ್ಡ ನಗರಗಳ ನಿರ್ಮಾತರಾಗಿದ್ದಾರೆ. ಭಾರತ ಸರ್ಕಾರವು ಭಾರತ ರತ್ನ ಪ್ರಶಸ್ತಿಯನ್ನು 4ನೇ ಫೆಬ್ರವರಿ 1961ರಲ್ಲಿ ಇವರಿಗೆ ಪ್ರಧಾನಿಸಿದೆ. ವೈದ್ಯಕೀಯ, ರಾಜಕೀಯ, ವಿಜ್ಞಾನ, ಮನಶಾಸ್ತ್ರ, ಸಾಹಿತ್ಯ, ಕಲೆಗಳಲ್ಲಿ ಸೇವೆ ಸಲ್ಲಿಸಿದವರಿಗೆ ಇವರ ಹೆಸರಲ್ಲಿ 'ಬಿ.ಸಿ.ರಾಯ್ ರಾಷ್ಟ್ರೀಯ ಪ್ರಶಸ್ತಿ'ಯನ್ನು ನೀಡಿ ಗೌರವಿಸಲಾಗುತ್ತದೆ. ಇಂಥಹ ಮಹಾನ್ ಸಮಾಜ ಸೇವಾಕರ್ತನ ಹೆಸರನ್ನು ಅಚಂದ್ರಾರ್ಕಗೊಳಿಸಲು ಇವರು ಜನಿಸಿದ ಹಾಗೂ ನಿಧನದ ದಿನ ಜುಲೈ 1 ರಂದು ವೈದ್ಯರ ರಾಷ್ಟ್ರೀಯ ದಿನಾಚರಣೆಯಾಗಿ ಆಚರಿಸಲಾಗುತ್ತಿದೆ.

ನಾಡು ಕಟ್ಟಿದ ನಾಡಪ್ರಭು

– ಇಂದಿರಾ ಕೃಷ್ಣಪ್ಪ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಬಿಳಿಬೆಟ್ಟದ ಕೋಟೆ : ಬಿಳಿಬೆಟ್ಟದ ಮೇಲೆ ನಿರ್ಮಿಸಲಾದ ಕೋಟೆ ಗೋಡೆಯು ಅನೇಕ ಚೌಕಾಕಾರದ ಹಾಗೂ ವರ್ತುಲಾಕಾರದ ಕೊತ್ತಲಗಳಿಂದ ಕೂಡಿದೆ. ಈ ಕೋಟೆಯ ಒಳ ಭಾಗದಲ್ಲಿ ಪ್ರಮುಖವಾಗಿ ಮದ್ದಿನ ಮನೆ, ಕಾವಲು ಮನೆ, ಸಭಾಂಗಣ ಬೆಟ್ಟದ ಮೇಲ್ಭಾಗದವರೆಗೆ ಎರಡು ಗೋಡೆಗಳು ಬಿಳಿಬೆಟ್ಟ ಮತ್ತು ಕರಿಬೆಟ್ಟಗಳ ನಡುವಿನ ಕಣಿವೆಯಂತಹ ಪ್ರದೇಶದ ಪ್ರವೇಶ ದ್ವಾರವನ್ನು ವ್ಯವಸ್ಥೆ ಮಾಡಲಾಗಿದೆ. ಈ ಪ್ರವೇಶ ದ್ವಾರಕ್ಕೆ ಅಡ್ಡಲಾಗಿ ತಡೆಗೋಡೆಗಳಿದ್ದು ವೈರಿಗಳು ಸುಲಭವಾಗಿ ಪ್ರವೇಶಿಸಲಾಗದಂತಿದೆ.

ಬಸವನದುರ್ಗದ ಕೋಟೆ : ಬಸವನದುರ್ಗದ ಕೋಟೆಯು ಸಾವನದುರ್ಗದ ದಕ್ಷಿಣ ಭಾಗದಲ್ಲಿದೆ. ಬಿಳಿಬೆಟ್ಟದಿಂದ ಮುಂಚಾಚಿರುವ ಬೆಟ್ಟವು ಸಮತಟ್ಟಾದ ಮೇಲ್ಮೈಯನ್ನು ಹೊಂದಿದ್ದು, ಸುತ್ತಲು ಎರಡು ಸುತ್ತಿನ ಕೋಟೆ, ಬಸವಣ್ಣನ ದೇವಾಲಯ ಕಾವಲು ಗೋಪುರಗಳು, ನೀರಿನ ದೋಣೆಗಳನ್ನೂ ಸಹ ನಿರ್ಮಿಸಲಾಗಿದೆ. ಈ ಕೋಟೆ ಗೋಡೆಯ ನಾಲ್ಕು ಮೂಲೆಗಳಲ್ಲಿ ಚೌಕಾಕಾರದ ಕೊತ್ತಲುಗಳನ್ನು, ಒಳ ಭಾಗದಲ್ಲಿ ವಿಶಾಲವಾದ ಅರಮನೆಯಿದ್ದು ಮೇಲ್ಛಾವಣಿ ಬಿದ್ದುಹೋಗಿದೆ.

ಹುತ್ರಿದುರ್ಗ ಕೋಟೆ : ಈ ಕೋಟೆ, ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕಿನ ಪಟ್ಟಣಕ್ಕೆ 14 ಕಿಲೋಮೀಟರ್ ದೂರದಲ್ಲಿದೆ. ಕೋಟೆ ಒಳಬಾಗದಲ್ಲಿ ವಿಭಿನ್ನ ಎತ್ತರದ ದೊಡ್ಡಬೆಟ್ಟ, ಬಸವನದುರ್ಗ ಬೆಟ್ಟ ಮತ್ತು ತಿರುಮಲ ಬೆಟ್ಟಗಳಿವೆ. ಈ ಮೂರು ಬೆಟ್ಟಗಳ ಮಧ್ಯದ ಮೈದಾನದಲ್ಲಿ ಹುತ್ತಿದುರ್ಗ ಗ್ರಾಮವನ್ನು ಕೋಟೆಯನ್ನು ನಿರ್ಮಿಸಲಾಗಿದೆ. "ಕ್ರಿಶ. 1534ರಲ್ಲಿ ಚೆನ್ನಮನಾಯಕಯ್ಯನು ಮುತ್ತನಾಯಕನ ಶಿಷ್ಯನಾಗಿದ್ದ ಜಂಗಮಯ್ಯನಿಂದ ನವಕಂಭಗಳಿಂದ ಕೂಡಿದ ಯಲೆಯೂರು ಬಾಗಿಲನ್ನು ಇಡಿಸಿದನು" ಎಂಬ ವಿಚಾರ ಬಾಗಿಲಿನ ತೊಲೆಯ ಮೇಲಿರುವ ಶಾಸನ (ಕುಣಿಗಲ್ ತಾಲ್ಲೂಕು ಶಾಸನ ಸಂಖ್ಯೆ-20) ದಿಂದ ತಿಳಿದು ಬರುತ್ತದೆ.

ಕೋಟೆಯ ಪಶ್ಚಿಮ ಭಾಗ ಇಳಿಜಾರಾಗಿದ್ದು, ಸಂಪರ್ಕಕ್ಕೆ ರಸ್ತೆಯನ್ನು ಮಾಡಲಾಗಿದೆ. ಕೋಟೆಯ ಅನತಿ ದೂರದಲ್ಲಿ, ಬೆಟ್ಟದ ಕೆಳಭಾಗದಲ್ಲಿ ಸಂತೆಪೇಟೆ ಎಂಬ ಗ್ರಾಮವು ಹುತ್ರಿದುರ್ಗ ಗ್ರಾಮದಿಂದ 90 ಮೀಟರ್ ಎತ್ತರದ ಬೆಟ್ಟದ ಮೇಲಿದೆ. ಅಲ್ಲಲ್ಲೇ ವರ್ತುಲಾಕಾರದ ಕೊತ್ತಲಗಳು ಬೆಟ್ಟದ ಕಣಿವೆ ಭಾಗದಲ್ಲಿ ಕೋಟೆಯ ಗೋಡೆ 3 ರಿಂದ 5 ಮೀಟರ್ ಎತ್ತರವಿದೆ. ಗೋಡೆಯ ದಪ್ಪ ಸುಮಾರು 2 ಮೀಟರಷ್ಟಿದೆ. ಆಯಕಟ್ಟಿನ ಸ್ಥಳಗಳಲ್ಲಿ ಚೌಕಾಕಾರದ ಕೊತ್ತಲಗಳನ್ನು ನಿರ್ಮಾಣ ಮಾಡಿದ್ದಾರೆ. ಅದರ ಮೇಲೆ ಪಿರಂಗಿ ಮತ್ತು ಬಂದೂಕುಗಳನ್ನು ಉಪಯೋಗಿಸುವ ವ್ಯವಸ್ಥೆಗಾಗಿ ಯಲಿಯೂರು ದ್ವಾರ, ಮಾಗಡಿ ದ್ವಾರ, ಜಾಲಿಕಟ್ಟೆ ದ್ವಾರ ಎಂಬ ಮೂರು ಮುಖ್ಯ ದ್ವಾರಗಳನ್ನು ನಿರ್ಮಿಸಲಾಗಿದೆ.


ಹುಲಿಯೂರುದುರ್ಗ ಕೋಟೆ : ಈ ಕೋಟೆ ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕಿನ ಹುಲಿಯೂರುದುರ್ಗ ಗ್ರಾಮದಲ್ಲಿದೆ. ಈ ಕೋಟೆ ನಿರ್ಮಾಣವಾಗಿರುವ ಬೆಟ್ಟವು ಏಕಶಿಲೆಯ ಬೆಟ್ಟವಾಗಿದ್ದು, ಸ್ಥಳೀಯವಾಗಿ ದೊರೆಯುವ ಗ್ರಾನೈಟ್ ಕಲ್ಲುಗಳನ್ನು ಉಪಯೋಗಿಸಿ ಕಟ್ಟಲಾಗಿದೆ. ಈ ಕೋಟೆಯನ್ನು ಪ್ರವೇಶಿಸಲು ನಾಲ್ಕು ದ್ವಾರಗಳನ್ನು ಮಾಡಲಾಗಿದೆ. ಪಶ್ಚಿಮ ಭಾಗದಲ್ಲಿರುವ ಕೋಟೆಯು ಶಿಥಿಲಾವಸ್ಥೆಯಲ್ಲಿದೆ. ಕೋಟೆಯ ಒಳಭಾಗದಲ್ಲಿ ವೇಣುಗೋಪಾಲಸ್ವಾಮಿ, ಗಣೇಶ ಮತ್ತು ಲಕ್ಷ್ಮೀ, ದೇವಾಲಯಗಳಿವೆ. ಬೆಟ್ಟದ ಮೇಲ್ಭಾಗದಲ್ಲಿ ಅರಮನೆಯ ಅವಶೇಷ, ಮದ್ದಿನಮನೆ, ಕಣಜ ಮತ್ತು ನೀರಿನ ದೋಣೆ, ಪಾರ್ಶ್ವದಲ್ಲಿ ವಾಸದ ಮನೆಗಳ ತಳಪಾಯ ಕಂಡುಬಂದಿವೆ. ಕೆಳಭಾಗದಲ್ಲಿದ್ದ ಪೂರ್ವ ಮತ್ತು ಉತ್ತರದ ಕೋಟೆಯ ಭಾಗವನ್ನು ಕ್ರಿಶ. 1791ರಲ್ಲಿ ಕಾರ್ನವಾಲೀಸನು ಕಿತ್ತುಹಾಕಿದನೆಂದು ಇತಿಹಾಸದ ಗ್ರಂಥಗಳಲ್ಲಿ ದಾಖಲಾಗಿದೆ



ರಾಮಗಿರಿದುರ್ಗ ಕೋಟೆ : ರಾಮಗಿರಿದುರ್ಗ ಕೋಟೆಯು ಸಾವನದುರ್ಗದ ದಕ್ಷಿಣಕ್ಕೆ ಅರ್ಕಾವತಿ ನದಿ ಪಕ್ಕದಲ್ಲಿದೆ. ಈ ಕೋಟೆಯಲ್ಲಿ ರಾಮಗಿರಿ ಮತ್ತು ಶಿವಗಿರಿ ಎರಡು ಪ್ರತ್ಯೇಕ ಬೆಟ್ಟಗಳಿದ್ದು ಕೋಟೆ ಕಟ್ಟಲಾಗಿದೆ. ಕ್ರಿಶ. 1800ರಲ್ಲಿ ಬ್ರಿಟಿಷ್ ಅಧಿಕಾರಿ ಫ್ರಾನ್ಸಿಸ್ ಬುಕಾನಿನ್ ವರದಿಯಲ್ಲಿ 'ಈ ಕೋಟೆಯನ್ನು ಬ್ರಿಟಿಷ್ ಸೈನ್ಯ ಕ್ರಿಶ. 1791ರಲ್ಲಿ ವಶಪಡಿಸಿಕೊಂಡಿತು. ಬಳಿಕ ಆಂಗ್ಲರಿಗೂ ಮತ್ತು ಟಿಪ್ಪುಸುಲ್ತಾನನಿಗೂ ಒಪ್ಪಂದವಾಗಿ ಈ ಕೋಟೆಯು ಪುನಃ ಟಿಪ್ಪು ಸುಲ್ತಾನನಿಗೆ ಒಳಪಟ್ಟಿತು'. ಬ್ರಿಟಿಷರು ಈ ದುರ್ಗವನ್ನು ಸೈನ್ಯದ ನೆಲೆ ಮಾಡಿಕೊಳ್ಳುವರೆಂಬ ಕಾರಣಕ್ಕೆ ಟಿಪ್ಪುಸುಲ್ತಾನನು ಈ ಕೋಟೆಯನ್ನು ಸಂಪೂರ್ಣವಾಗಿ ನಾಶಮಾಡಿದನು. ಯಲಹಂಕ ನಾಡಪ್ರಭುಗಳ ಶಾಸನ ಸಂಪುಟದಲ್ಲಿ ಪ್ರಕಟಗೊಂಡಿರುವ "ಕೆಂಪದೇವರಸರು ಕಟ್ಟಿಸಿದ ತ್ರಿಯಂಬಕರ ಮಟ" ಎಂಬ ಶಾಸನದಿಂದ ಕೆಂಪೇಗೌಡರು ಕಟ್ಟಿಸಿದ ಶೈವ ಮಠವೊಂದಿತ್ತೆಂದು ತಿಳಿದುಬರುತ್ತದೆ. ಇಲ್ಲಿ ಶ್ರೀರಾಮನ ದೇವಾಲಯ ಮತ್ತು ರಾಮಲಿಂಗೇಶ್ವರನ ದೇವಾಲಯಗಳಿವೆ.

ಮುಂದುವರಿಯುವುದು...

ಆಧಾರಿತ ಕೃತಿ : ಯಲಹಂಕ ನಾಡಪ್ರಭುಗಳು
ಲೇಖಕರು : ಎಚ್.ಎಂ. ಬೋರಯ್ಯ



ಹುತ್ರಿದುರ್ಗ ಕೋಟೆ

ಮಾದಕ ವಸ್ತುಗಳ ಮಾಯಾಜಾಲ

– ಡಾ. ಸಿ.ಆರ್. ಚಂದ್ರಶೇಖರ್

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಆಲ್ಕೋಹಾಲ್‌ನ ಆಕರ್ಷಣೆ – ಅಪಾಯ

ಆಲ್ಕೋಹಾಲ್ ಚಟ ಇದ್ದವರಲ್ಲಿ, ಅವರ ಮಿದುಳು ಆಲ್ಕೋಹಾಲ್‌ಗೆ ಹೊಂದಿಕೊಂಡು ಬಿಟ್ಟಿರುತ್ತೆ. ದೇಹದಲ್ಲಿ ಆಲ್ಕೋಹಾಲ್ ಇಲ್ಲದಿದ್ದಾಗ, ನರಕೋಶಗಳು ತೀವ್ರ ಪ್ರತಿಕ್ರಿಯೆಯನ್ನು ತೋರಿಸುತ್ತವೆ. ಇದರ ಪ್ರತಿಫಲವೇ ನಡುಕ ಸನ್ನಿ, ಆಗ ವ್ಯಕ್ತಿ ಭ್ರಮಾಧೀನನಾಗುತ್ತಾನೆ. ಅವನ ಕಣ್ಣಿಗೆ ಶೂನ್ಯದಲ್ಲಿ ಭಯಾನಕ ಆಕಾರಗಳು, ಹೆದರಿಸುವ ಜನಗಳು ಕಾಣಿಸಿಕೊಳ್ಳುತ್ತಾರೆ. ಕಿವಿಗೆ ಹಿಂಸೆ ಕೊಡುವ ಧ್ವನಿಗಳು ಕೇಳಿಸ ತೊಡಗುತ್ತವೆ. ಆತ ಸಂಶಯ ಪೀಡಿತನಾಗಿ, ತಾನು ಅಪಾಯದಲ್ಲಿದ್ದೇನೆ, ಯಾರೋ ತನ್ನನ್ನು ಕೊಲ್ಲಲಿದ್ದಾರೆ ಎಂದು ತಪ್ಪಾಗಿ ಆಲೋಚಿಸತೊಡಗುತ್ತಾನೆ. ಪರಿಸರದ ಪ್ರತಿಯೊಂದು ವಸ್ತುವನ್ನು, ಜನರನ್ನು ಮತ್ತು ಘಟನೆಗಳನ್ನು ಅಪಾಯಕಾರಿ, ಹಾನಿಕಾರಿ ಎಂದು ತಪ್ಪಾಗಿ ಅರ್ಥೈಸುತ್ತಾನೆ. ಸ್ವರಕ್ಷಣೆಗಾಗಿ ಓಡುತ್ತಾನೆ, ಚಡಪಡಿಸುತ್ತಾನೆ ಅಥವಾ ಇತರರ ಮೇಲೆ ಆಕ್ರಮಣ ಮಾಡುತ್ತಾನೆ. ಅಸಾಧ್ಯವಾದ ಮೈ ಕೈ ನೋವು, ವಿಪರೀತ ಬೆವರು, ಕಷ್ಟದ ಉಸಿರಾಟ, ವೇಗದ ಹೃದಯ ಬಡಿತದಿಂದ ತಾನು ಸತ್ತು ಹೋಗಲಿದ್ದೇನೆ ಎಂದು ಭ್ರಮಿಸಿ ಕಂಗಾಲಾಗುತ್ತಾನೆ, ಸನ್ನಿಹಿಡಿದವರಂತೆ ಆಡುತ್ತಾನೆ.

ಇದರ ಜೊತೆಗೆ ದೀರ್ಘಕಾಲದ ಆಲ್ಕೋಹಾಲ್ ಸೇವನೆಯಿಂದ ಕೆಲವಾರು ನರಕೋಶಗಳು ಹಾಳಾಗಿರುವುದರಿಂದ ಆತನ ನೆನಪಿನ ಶಕ್ತಿ ಕುಂದಿರುತ್ತದೆ. ಕೈಕಾಲುಗಳ ನರಗಳೂ ಸವೆದಿರುತ್ತವೆ. ನಡುಕ ಸನ್ನಿಗೆ ಸೂಕ್ತ ಪ್ರಮಾಣದ ಶಮನಕಾರಿ ಔಷಧಗಳನ್ನು ಕೊಡುತ್ತೇವೆ. ನರಗಳ ಸವೆಯುವಿಕೆಯನ್ನು ತಡೆಗಟ್ಟಲು ವಿಟಮಿನ್ 'ಬಿ' ಅನ್ನು ಕೊಡುತ್ತೇವೆ. ಚಿಂತಿಸಬೇಡಿ, ಜಗದೀಶನ ಪ್ರಾಣಕ್ಕೆ ಅಪಾಯವಿಲ್ಲ. ಗುಣಮುಖನಾದ ಮೇಲೆ ಆಲ್ಕೋಹಾಲ್ ಸೇವನೆಯನ್ನು ಬಿಡಲು ಆತನ ಮನೋಭಾವ ಮುಖ್ಯ. ಆತ ತನ್ನ ಚಟವನ್ನು ಬಿಡಲು, ನಿರ್ದಿಷ್ಟ ಚಿಕಿತ್ಸಾ ವಿಧಾನಗಳಿವೆ. ನಿಮ್ಮ ಸಹಕಾರವೂ ಮುಖ್ಯ" ಎಂದರು. ಮನೋವೈದ್ಯರು. 'ಡಾಕ್ಟರೆ, ನೀವು ಹೇಳಿದಂತೆ ಕೇಳಲು, ನಡೆದುಕೊಳ್ಳಲು ನಾವು ಸಿದ್ಧವಾಗಿದ್ದೇವೆ. ಜಗದೀಶ ಗುಣಮುಖನಾದರೆ ಸಾಕು, ಕಣ್ಣೊರೆಸಿಕೊಂಡರು ಶ್ರೀಪತಯ್ಯ.

ಜಗದೀಶನಂತಹವರು ನಮ್ಮ ರಾಜ್ಯದಲ್ಲಿ ಸಾವಿರಾರು ಜನರಿದ್ದಾರೆ, ಅವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿರುವುದು ಆತಂಕಕ್ಕೆ ಎಡೆಮಾಡಿಕೊಟ್ಟಿದೆ. ಅಧ್ಯಯನಗಳ ಪ್ರಕಾರ ಜನಸಂಖ್ಯೆಯ ಶೇಕಡ 20ರಿಂದ 30ರಷ್ಟು ಮಂದಿ, ಅವಧಿಗೊಂದಾವರ್ತಿ ಮದ್ಯಪಾನ ಮಾಡುತ್ತಾರೆಂದು ತಿಳಿದುಬರುತ್ತದೆ. ಕಾಲೇಜು ವಿದ್ಯಾರ್ಥಿಗಳಲ್ಲಿ, ಕಾರ್ಮಿಕರಲ್ಲಿ ಇದು ಶೇಕಡ 50ರಿಂದ 60ಕ್ಕೆ ಏರುತ್ತದೆ. ಆಲ್ಕೋಹಾಲ್ ಸೇವನೆ ಕಾಡಿಚ್ಚಿನಂತೆ ಹಳ್ಳಿ ಪಟ್ಟಣ ಎನ್ನದೆ ಎಲ್ಲದ ಹರಡುತ್ತಿದೆ. ಯಾವುದೇ ಹಳ್ಳಿಗೆ ಹೋಗಿ, ನಿಮಗೆ ತಿಂಡಿ ತಿನ್ನಲು ಒಂದು ಫಲಹಾರ ಮಂದಿರ ಇಲ್ಲದಿರಬಹುದು. ಆದರೆ ಸಾರಾಯಿ ಅಂಗಡಿ ಇರುತ್ತದೆ. ಕುಡಿಯಲು ಸ್ವಚ್ಛ ನೀರು ಸಿಗದೇ ಇರಬಹುದು. ಆದರೆ ಅಮಲು ತರಿಸುವ ಸಾರಾಯಿ ಧಾರಾಳವಾಗಿ ಸಿಗುತ್ತದೆ. ಪಟ್ಟಣದಲ್ಲಿ ಬೀದಿಗೊಂದು ಎರಡರಂತೆ ವೈನ್ ಶಾಪ್‌ಗಳು, ಬಾರ್‌ಗಳು ಇದ್ದಾವೆ. ಬಹುತೇಕ ಮೋಜಿನ ಪಾರ್ಟಿಗಳಲ್ಲಿ ಆಲ್ಕೋಹಾಲ್ ಪೇಯಗಳು ಸರಬರಾಜುಗುತ್ತವೆ. ಯಾವುದೇ ರಾಜ್ಯ ಸರಕಾರಕ್ಕೆ ಆಲ್ಕೋಹಾಲ್ ಮೂಲದಿಂದ ಬರುವ ವರಮಾನ ವರ್ಷದಿಂದ ವರ್ಷಕ್ಕೆ ಏರುತ್ತಿದೆ. ಆಲ್ಕೋಹಾಲ್‌ನಲ್ಲಿರುವ ಅಂತಹ ಆಕರ್ಷಣೆಯಾದರೂ ಏನು ?

ಮುಂದುವರಿಯುವುದು...

ವೆರಿಕೋಸ್ ವೇನ್ಸ್ (ಉಬ್ಬಿದ ರಕ್ತನಾಳಗಳು)

– ಡಾ. ವಸುಂಧರಾ ಭೂಪತಿ

ಉಬ್ಬಿದ ರಕ್ತನಾಳಗಳೆಂದರೆ ಸಾಮಾನ್ಯವಾಗಿ ವಯಸ್ಕರಲ್ಲಿ ಕಂಡು ಬರುವ ರಕ್ತ ನಾಳಗಳಿಗೆ ಸಂಬಂಧಿಸಿದ ರೋಗ. ಇದು ದೀರ್ಘಕಾಲಿಕವಾಗಿ ಇರಬಹುದು. ಆದರೆ ಮಾರಣಾಂತಿಕವಲ್ಲ. ಇದನ್ನು ಇಂಗ್ಲೀಷಿನಲ್ಲಿ 'ವೆರಿಕೋಸ್ ವೇನ್ಸ್' ಎಂದು ಕರೆಯುತ್ತಾರೆ.

ಉಬ್ಬಿರುವ, ನೀಲಿಗಟ್ಟಿರುವ ಮತ್ತು ತಿರುಚಿದಂತಿರುವ ವೆರಿಕೋಸ್ ರಕ್ತನಾಳಗಳು ಸಾಮಾನ್ಯವಾಗಿ ಕಾಲುಗಳಲ್ಲಿ ರಕ್ತನಾಳಗಳ ಮೇಲೆ ಪರಿಣಾಮ ಬೀರುತ್ತವೆ. ಏಕೆಂದರೆ ನಿಂತಾಗ ಹಾಗೂ ನಡೆಯುವಾಗ ದೇಹದ ಕೆಳಭಾಗದ ರಕ್ತನಾಳಗಳ ಮೇಲೆ ಒತ್ತಡವನ್ನು ಹೆಚ್ಚಿಸುತ್ತವೆ. ಆಗ ತುಂಬಾ ಎಚ್ಚರಿಕೆಯಿಂದ ಇರಬೇಕು ಇಲ್ಲವಾದಲ್ಲಿ ನೋವು ಹೆಚ್ಚಾಗಬಹುದು. ಇದು ಗರ್ಭಿಣಿಯರಲ್ಲಿ, ಮಧ್ಯವಯಸ್ಸಿನ ನಂತರ ಮತ್ತು ನಿಂತುಕೊಂಡು ಕೆಲಸ ಮಾಡುವ ಗಾರ್ಮೆಂಟ್ ಕೆಲಸಗಾರರಲ್ಲಿ, ಟೈಲರುಗಳಲ್ಲಿ ಮತ್ತು ಶಿಕ್ಷಕರಲ್ಲಿ ಕಾಣಿಸಿಕೊಳ್ಳುತ್ತದೆ.

ರಕ್ತನಾಳಗಳು ಹಿಗ್ಗಿದಾಗ ಮತ್ತು ಹೆಚ್ಚು ರಕ್ತದಿಂದ ತುಂಬಿಕೊಂಡಾಗ ವೆರಿಕೋಸ್ ವೇನ್ಸ್ ಕಾಣಿಸಿಕೊಳ್ಳುತ್ತವೆ. ರಕ್ತದ ಹರಿವಿಗೆ ಅಡಚಣೆಯಾದಾಗ ಮತ್ತು ರಕ್ತವು ಸೂಕ್ತ ರೀತಿಯಲ್ಲಿ ಹರಿಯಲು ಸಾಧ್ಯವಾಗದಾಗ ಹೀಗಾಗುತ್ತದೆ. ಇದರ ಪರಿಣಾಮವಾಗಿ, ರಕ್ತನಾಳಗಳು ತುಂಬಾ ದೊಡ್ಡದಾಗುತ್ತವೆ, ಊದಿಕೊಳ್ಳುತ್ತವೆ ಮತ್ತು ತಿರುಚಿಕೊಳ್ಳುತ್ತವೆ. ಆದರೆ ಸಾಮಾನ್ಯವಾಗಿ ಇವು ಅಪಾಯಕಾರಿ ಅಲ್ಲ ಆದರೂ ಅವುಗಳಿಂದ ನೋವು ಉಂಟಾಗುತ್ತದೆ ಮತ್ತು ಅವು ವಿಕಾರವಾಗಿ ಕಾಣುತ್ತವೆ. ರಕ್ತನಾಳಗಳ ಸುತ್ತಮುತ್ತಲಿನ ಚರ್ಮದ ಬಣ್ಣದಲ್ಲಿ ಬದಲಾವಣೆ ಆಗುವುದು, ತುರಿಕೆ, ದೀರ್ಘಕಾಲ ಕುಳಿತಾಗ ನಿಂತಾಗ ನೋವುಂಟಾಗುವುದು, ಕಾಲುಗಳು ಭಾರವೆನಿಸುವುದು ಮತ್ತು ಕೆಳಕಾಲುಗಳ ಊತ ಇದರ ಲಕ್ಷಣಗಳು. ಯಾವುದೇ ಸೂಕ್ತ ಚಿಕಿತ್ಸೆ ಪಡೆಯದೆ ಇದ್ದಲ್ಲಿ ಕೊನೆಯ ಹಂತದಲ್ಲಿ ಕಾಲುಗಳ ಚರ್ಮದಲ್ಲಿ ಗಾಯ ಆಗಿ ಮಾಯದ ಹುಣ್ಣು ಆಗುವುದು.

ವೆರಿಕೋಸ್ ವೇನ್ಸ್ ಸಮಸ್ಯೆಗೆ ಹಲವು ಪರಿಹಾರ ಕ್ರಮಗಳಿವೆ. ಮೊದಲಿಗೆ ಉಬ್ಬಿರುವ ರಕ್ತನಾಳಗಳಿಗೆ ಚುಚ್ಚುಮದ್ದು ನೀಡಿ ಅವುಗಳು ಕುಗ್ಗಿ ಹೋಗುವಂತೆ ಮಾಡಲಾಗುತ್ತದೆ. ಆರಂಭಿಕ ಹಂತದಲ್ಲಿ ತುರಿಕೆ ಇದ್ದಾಗ ಔಷಧ ನೀಡಿ ತುರಿಕೆ ನಿಯಂತ್ರಿಸಬಹುದು. ಹುಣ್ಣು ಆಗಿ ಗಾಯ ಉಲ್ಬಣವಾದ ಬಳಿಕ ಶಸ್ತ್ರ ಚಿಕಿತ್ಸೆ ಅನಿವಾರ್ಯವಾಗುತ್ತದೆ. ಶಸ್ತ್ರ ಚಿಕಿತ್ಸೆ ಜತೆಗೆ ಜೀವನ ಶೈಲಿ ಬದಲಾವಣೆ, ಆಹಾರ ಪದ್ಧತಿ ಬದಲಾವಣೆ ಮತ್ತು ಬೊಜ್ಜು ಕರಗಿಸುವಿಕೆ ಅತೀ ಅನಿವಾರ್ಯ ಎಂಬುದನ್ನು ರೋಗಿಗಳು ಮೊದಲು ತಿಳಿದುಕೊಂಡಲ್ಲಿ ಚಿಕಿತ್ಸೆ ಹೆಚ್ಚು ಪರಿಣಾಮಕಾರಿ.

ಮುಂದುವರಿಯುವುದು...

ನೈಸರ್ಗಿಕ ಸೌಂದರ್ಯ ಚಿಕಿತ್ಸೆ (ಬ್ಯೂಟಿ ಥೆರಪಿ)

– ಡಾ. ಸಂದೀಪ್ : 'ಆರೋಗ್ಯ ಧಾಮ" ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕೇಂದ್ರಗಳು

ಮಹಿಳೆಯರಾಗಲಿ ಪುರುಷರಾಗಲಿ ಸುಂದರವಾಗಿ ಕಾಣಬೇಕು, ಮುಖ ಕಾಂತಿಯುತವಾಗಿ ಕಾಣಬೇಕು. ಎಂಬುದು ಎಲ್ಲರ ಸಹಜ ಅಪೇಕ್ಷೆ, ವಿಶೇಷವಾಗಿ ಮಹಿಳೆಯರೂ ಈ ಬಗ್ಗೆ ಹೆಚ್ಚಿನ ಕಾಳಜಿ ಮತ್ತು ಮುತುವರ್ಜಿ ವಹಿಸುತ್ತಾರೆ. ಇದಕ್ಕಾಗಿ ಸಿಗುವ ಎಲ್ಲಾ ತರಹದ ಕಾಸ್ಮೆಟಿಕ್ಸ್, ಕ್ರೀಮ್ಸ್, ಜೆಲ್‌ಗಳನ್ನು ಹಚ್ಚಿಕೊಳ್ಳುತ್ತಾರೆ. ಇನ್ನೂ ಕೆಲವರು ತಮ್ಮದೇ ಆದ ಹಲವಾರು ವಿಧಾನಗಳನ್ನು ಅನುಸರಿಸುತ್ತಾರೆ.ಆದರೆ ಸೌಂದರ್ಯ ಎಂಬುದು ಹಚ್ಚುವ ಕ್ರೀಮ್‌ಗಳಿಂದ ಬರುವಂತದ್ದಲ್ಲ– ಬದಲಾಗಿ ವ್ಯಕ್ತಿಯು ಪಾಲಿಸುವ ದಿನಚರಿ, ಆಹಾರ–ವಿಹಾರ, ಆಚಾರ–ವಿಚಾರ, ವ್ಯಾಯಾಮ, ಯೋಗ, ಪ್ರಾಣಾಯಾಮಗಳು ಹೀಗೆ ಹಲವು ವಿಧಾನಗಳ ಮೇಲೆ ಅವಲಂಬಿತವಾಗಿದೆ. ಹಾಗಾದರೆ ಸಹಜ ಸೌಂದರ್ಯ ವರ್ಧಕ ಗಳಿಗೆ ಟಿಪ್ಸ್ ಗಳೇನು ಎಂಬುದನ್ನು ಇಲ್ಲಿ ಅವಲೋಕಿಸೋಣ.

- ಆಹಾರದಲ್ಲಿ ಉಪ್ಪು, ಎಣ್ಣೆ ಖಾರ ಜಾಸ್ತಿಯಾದಷ್ಟು ಜೀರ್ಣಕ್ರಿಯೆ ತೊಂದರೆಯಾಗಿ ಚರ್ಮದ ಶುದ್ಧೀಕರಣವಾಗದೆ ಚರ್ಮದ ಕಾಂತಿ ಕುಂದುತ್ತದೆ.
- ದಿನನಿತ್ಯ 3–4 ಲೀಟರ್ ನಷ್ಟು ನೀರು ಕುಡಿಯುವುದರಿಂದ ರಕ್ತ ಶುದ್ಧಿ ಮತ್ತು ಚರ್ಮ ಶುದ್ದಿಗೆ ಸಹಾಯವಾಗುತ್ತದೆ.
- ಹಣ್ಣುಗಳ ರಸ, ಎಳನೀರು, ಕಬ್ಬಿನಹಾಲು, ಹಾಲು, ಮಜ್ಜಿಗೆ ಸೇವನೆಯಿಂದ ಚರ್ಮದ ಅಂದ ವೃದ್ಧಿಸುತ್ತದೆ.
- ತರಕಾರಿ, ಮೊಳಕೆ ಬರಿಸಿದ ಕಾಳುಗಳು, ಹಣ್ಣು ಮಿಶ್ರಿತ ಸಲಾಡ್‌ಗಳನ್ನು ಆಹಾರದ ಜೊತೆಗೆ ಸೇವಿಸಿ ಅಥವಾ ಇವನ್ನೇ ಪೂರ್ಣ ಪ್ರಮಾಣ ಆಹಾರವಾಗಿ ಸೇವಿಸಿರಿ.
- ವಾರಕ್ಕೊಮ್ಮೆ ಪೂರ್ಣ ಮಣ್ಣಿನ ಸ್ನಾನ ಒಳ್ಳೆಯದು. ಮೂರು ದಿನಕ್ಕೊಮ್ಮೆ ಮುಖಕ್ಕೆ ಮಣ್ಣಿನಲ್ಲಿ/ಮುಲ್ತಾನಿ ಮಿಟ್ಟಿ ಲೇಪನ ಮಾಡಿಕೊಂಡು ಮುಖ ತೊಳೆದುಕೊಳ್ಳುವುದು.
- ವಾರಕ್ಕೊಮ್ಮೆ ಮೈಗೆ ಎಣ್ಣೆಹಚ್ಚಿ ಸ್ಟೀಮ್ ಬಾತ್ ಮಾಡುವುದು ಒಳ್ಳೆಯದು. ವಾರದಲ್ಲಿ 1–2 ಬಾರಿ ಮುಖಕ್ಕೆ ಸ್ಟೀಮ್ ತೆಗೆದುಕೊಳ್ಳುವುದು.
- ಮುಖಕ್ಕೆ ದಿನ ಬಿಟ್ಟು ದಿನ ಹಾಲಿನ ಕೆನೆ ಲೇಪಿಸಿ ಕೊಳ್ಳುವುದು.
- ಅಲೋವೆರಾ (ಲೋಳೆರಸ) ದ ತಿರುಳು (ಜೆಲ್) ಮುಖಕ್ಕೆ ಹಚ್ಚಿ 30 ನಿಮಿಷ ಬಿಟ್ಟು ತೊಳೆದು ಕೊಳ್ಳುವುದು.
- ಸೌತೆಕಾಯಿಯ–ಪಪ್ಪಾಯಿ ತಿರುಳನ್ನು ಮುಖಕ್ಕೆ ಲೇಪನ ಮಾಡಿ 30 ನಿಮಿಷದ ನಂತರ ತೊಳೆದುಕೊಳ್ಳುವುದು.
- ಸೋಪಿಗಿಂತ ಸೀಗೆಪುಡಿ ಮತ್ತು ಕಡ್ಲೆ ಹಿಟ್ಟು ಎರಡನ್ನು ಸೇರಿಸಿ ಅದರ ಮಿಶ್ರಣದಿಂದ ಸ್ನಾನ ಮಾಡುವುದು.
- ಬಿಸಿಲಿಗೆ ಮೈಯೊಡ್ಡುವುದು ಚರ್ಮದ ಕಾಂತಿಗೆ ಸಹಾಯಕ.
- ವಾರಕ್ಕೆ ಎರಡು ಬಾರಿ ಇಪ್ಪತ್ತು ನಿಮಿಷದ ತಣ್ಣೀರಿನ ಕಟಿಸ್ನಾನ ಮಾಡುವುದು.
- ಅತಿಯಾದ ಬಿಸಿನೀರನ್ನು ಬಳಸುವುದು ಒಳ್ಳೆಯದಲ್ಲ.
- ಮನಸ್ಸನ್ನು ಆದಷ್ಟು ಅಹ್ಲಾದಕರವಾಗಿ– ಸಂತೋಷವಾಗಿ ಇಟ್ಟುಕೊಳ್ಳುವುದು ಸೌಂದರ್ಯಕ್ಕೆ ಪೂರಕವಾಗಿರುತ್ತದೆ.
- ಮಹಿಳೆಯರಲ್ಲಿ ಹಾರ್ಮೋನಲ್ ಗ್ರಂಥಿಗಳಲ್ಲಿ ಸಮನಾದ ಸ್ಥಿರವಾದ ಸ್ವಾಸ್ತ್ಯ ಇರಬೇಕು. ಸಮತೋಲನ ತಪ್ಪಿದರೆ ಮುಟ್ಟಿನ ದೋಷವುಂಟಾಗಿ ಸೌಂದರ್ಯ ಕೆಡುತ್ತದೆ. ಮೊಡವೆ, ಅರೆತಲೆನೋವು ಇತ್ಯಾದಿಗಳು ಕಾಣಲಾರಂಭಿಸುತ್ತವೆ.

ರಾಸಾಯನಿಕ ಪದಾರ್ಥಗಳಿಗೆ ಬದಲಾಗಿ ನಿಸರ್ಗದತ್ತವಾದ ಆರೋಗ್ಯಕ್ರಮ, ಒಳ್ಳೆಯ ಜೀವನ ಶೈಲಿಯ ಜೊತೆಗೆ ಮೇಲೆ ಕಾಣಿಸಿದ ಟಿಪ್ಸ್‌ಗಳನ್ನು ಪಾಲಿಸಿದಲ್ಲಿ ಪ್ರತಿಯೊಬ್ಬರು ಸೌಂದರ್ಯವಾಗಿ, ಆರೋಗ್ಯವಾಗಿ ಇರಬಹುದು.

ನಮ್ಮ ಓದಿಗೆ

	ಶೀರ್ಷಿಕೆ	ಪ್ರಕಾಶಕರು	ಲೇಖಕರು
1.	ಮತ್ತೊಂದು ರಾತ್ರಿ	ಅಭಿರುಚಿ ಪ್ರಕಾಶನ	ಅನು : ಕೆ. ನಲ್ಲತಂಬಿ
2.	ಬಾಪೂ ಹೆಜ್ಜೆಗಳಲ್ಲಿ	ಪಲ್ಲವ ಪ್ರಕಾಶನ	ಅನು : ನಲ್ಲತಂಬಿ
3.	ಗುಡಿಗಂಟೆ – ಇತರೆ ಕಥೆಗಳು	ಲಡಾಯಿ ಪ್ರಕಾಶನ	ಅನು : ನಲ್ಲತಂಬಿ
4.	ಅಪ್ಪ	ಒಪೋಸ್ ಕಲೋಸಿಯಂ	ಶಿವಾನಂದ ವಿಶ್ವನಾಥ ಕಾಂಬ್ಳೆ
5.	ಯಶೋಮನ ಗಮಕಿ ಗಂಗೆ	ನೋಷನ್ ಪ್ರೆಸ್	ಡಾ. ಚಂದ್ರಮೌಳಿ ಎಂ.ಎಸ್.
6.	ಸ್ಫೂರ್ತಿ ಸಂಪದ	ಸಂಪದ ಪಬ್ಲಿಕೇಷನ್ಸ್	ಅನು : ಉಷಾ ವಾಸು
7.	ಪಶ್ಚಿಮ ಘಟ್ಟದ ತಪ್ಪಲಿನಲ್ಲಿ	ಗಿರಿಮನೆ ಪ್ರಕಾಶನ	ಗಿರಿಮನೆ ಶ್ಯಾಮರವ್
8.	ಕೂರ್ಗ್ ರೆಜಿಮೆಂಟ್	ಮೈತ್ರಿ ಪ್ರಕಾಶನ	ಮೇಜರ್ ಡಾ. ಕುಶ್ವಂತ್ ಕೋಳಿಬೈಲು
9.	ಚನ್ನಬೈರಾದೇವಿ	ಅಂಕಿತ ಪ್ರಕಾಶನ	ಡಾ. ಗಜಾನನ ಶರ್ಮ
10.	ಸ್ವತಂತ್ರ ಭಾರತದಲ್ಲಿ ಅತಂತ್ರ ಕರ್ನಾಟಕ	ಬನವಾಸಿ ಬಳಗ ಪ್ರಕಾಶನ	ಆನಂದ ಜಿ.
11.	ಅಪ್ಪ ಅಂದ್ರೆ ಆಕಾಶ	ನೀಲಿಮಾ ಪ್ರಕಾಶನ	ಎ.ಆರ್. ಮಣಿಕಾಂತ್

ಸಂಗ್ರಹ : ಮಹೇಶ್

ಇತಿಹಾಸದ ಪುಟಗಳು – ರಾಯದುರ್ಗದ ಸುತ್ತಿನ ಗಡಿನಾಡಿನ ಶಾಸನಗಳು

– ಡಾ. ಬಿ. ರಾಜಶೇಖರಪ್ಪ

ರಾಯದುರ್ಗದಲ್ಲಿ ನಡೆದ ಆಂಧ್ರ ಗಡಿನಾಡ ನಾಲ್ಕನೆಯ ಕನ್ನಡ ಸಾಹಿತ್ಯ ಸಮ್ಮೇಳನ ಸಂಚಿಕ ರಾಯದುರ್ಗ ನುಂಕೆಮಲೆ ಸ್ಮರಣ ಸಂಚಿಕೆಯಲ್ಲಿ ಪ್ರಕಟವಾದ ಆಯ್ದ ಲೇಖನಗಳನ್ನು ಇಲ್ಲಿ ಪ್ರಕಟಿಸಲಾಗುತ್ತಿದೆ.

ಸೌಜನ್ಯ : ಕನ್ನಡ ಸಾಹಿತ್ಯ ಪರಿಷತ್ತು, ಆಂಧ್ರ ಗಡಿನಾಡು ಘಟಕ, ಗಡಿನಾಡು ಸಮ್ಮೇಳನಾಧ್ಯಕ್ಷರು : ಡಾ. ವೂಡೇ ಪಿ. ಕೃಷ್ಣ
ಪ್ರಧಾನ ಸಂಪಾದಕರು : ಪ್ರೊ. ಎ. ಅಗ್ರಹಾರಂ ಎಚ್.ಬಿ. ಶಿವಕುಮಾರ್, ಸಂಪಾದಕರು : ಡಾ. ಕೆ.ವಿ. ಮುದ್ದವೀರಪ್ಪ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಸದಾಶಿವರಾಯನು ವಿಜಯನಗರವನ್ನು ಆಳುತ್ತಿದ್ದ ಕಾಲದಲ್ಲಿ ರಾಮರಾಜಯ್ಯನು ತ(ತಿ)ಮ್ಮೋಜ, ಕೊಂಡೋಜ ಇವರ ಬಿನ್ನಹದಂತೆ ನಾಯಿಂದರ ಮೇಲಿನ ತೆರಿಗೆಯನ್ನು ಮನ್ನಾ ಮಾಡಿದನು. ಕೋನರಾಜಯ್ಯ ಅರಸನು ಈ ಶಾಸನವನ್ನು ಹಾಕಿಸಿದನೆಂದು ನಾಗಸಮುದ್ರದ ಶಾಸನ ಹೇಳುತ್ತದೆ (ಮೊಳ–43), ಈ ದೊರೆಯ ಕಾಲದಲ್ಲಿ ಕನ್ನಡ ನಾಡು ಮತ್ತು ಆಂಧ್ರಪ್ರದೇಶದ ಅನೇಕ ಕಡೆಗಳಲ್ಲಿ ನಾಯಿಂದರಿಗೆ ತೆರಿಗೆ ವಿನಾಯಿತಿಯ ಅನೇಕ ಶಾಸನಗಳು ದೊರೆಯುತ್ತವೆ.


ಮುರಡಿ ಗ್ರಾಮದ 1556ರ ಶಾಸನವೊಂದು(ಮೊಳ–4) ವಿಜಯನಗರವನ್ನು ವಿದ್ಯಾನಗರ ಎಂದು ಕರೆದಿದೆ. ಸದಾಶಿವರಾಯನ ಕಾಲದಲ್ಲಿ ರಾಮರಾಜು, ವಿಠಲರಾಜು, ತಿರುಮಲಯ್ಯ ಇವರು ರಾಯದುರ್ಗ ಸೀಮೆಯ ಮುರುವಡಿ ಗ್ರಾಮವನ್ನು ಬುಕ್ಕರಾಯಪುರ ಎಂದು ಹೆಸರು ಬದಲಾಯಿಸಿ ಅಗ್ರಹಾರವನ್ನಾಗಿ ಮಾಡಿ ಬ್ರಾಹ್ಮಣ ವಿದ್ವಜ್ಜನರಿಗೆ ನೀಡಿದ್ದನ್ನು ತಿಳಿಸುತ್ತದೆ. ಇದೇ ರೀತಿ ರಾಯದುರ್ಗದ ಕರಡಿಪಲ್ಲೆ ಎಂಬ ಗ್ರಾಮವನ್ನು ಹರಿಹರರಾಯಪುರ ಎಂದು ಹೆಸರು ಬದಲಿಸಿ, ಅಗ್ರಹಾರವಾಗಿ ಬ್ರಾಹ್ಮಣರಿಗೆ ನೀಡಿದರೆಂದು ಇನ್ನೊಂದು ಶಾಸನ (ಮೊಳ–5) ತಿಳಿಸುತ್ತದೆ. ಈ ಶಾಸನಗಳಿಂದ ವಿಜಯನಗರ ಸಾಮ್ರಾಜ್ಯ ಸ್ಥಾಪಕರಾದ ಹರಿಹರ ಮತ್ತು ಬುಕ್ಕ ಇವರ ತರುವಾಯ ಅವರ ಹೆಸರಿನ ಅಗ್ರಹಾರಗಳನ್ನು ಮಾಡುವುದರ ಮೂಲಕ ಅವರಿಗೆ ಗೌರವ ಅಭಿವ್ಯಕ್ತ ಮಾಡಲಾಗಿದೆ.

1557 ಸದಾಶಿವರಾಯನ ಕಾಲದ ದೇವಸಮುದ್ರ ಗ್ರಾಮದ ಶಾಸನವೊಂದು (ಮೊಳ–1) ಮಹಾಮಂಡಲೇಶ್ವರನ ಅಳಿಯ 1519ರಲ್ಲಿ ದೊರೆ ರಾಯದುರ್ಗ ಸೀಮೆಗೆ ರಾಮರಾಜಯ್ಯನು ಕೃಷ್ಣದೇವರಾಯನು ರಾಯದುರ್ಗ ಸೀಮೆಗೆ ಸೇರಿದ ದೇವಸಮುದ್ರ ಗ್ರಾಮವನ್ನು ಬೀರೇಶ್ವರ ದೇವರ ಸೇವೆಗಾಗಿ ಸಲ್ಲಿಸಿದ್ದನ್ನು ಪುನರ್‌ನವೀಕರಿಸಿದನು. ಆ ಗ್ರಾಮದ ಜೊತೆಗೆ ಮುರವಡಿ, ದಾಕವಾಡಿ, ದಡುಗೂರು, ಜಂಬುಲಮಲಿಕೆ, ಪಕ್ಕುಲಿಕೆ ಮುಂತಾದ ಸ್ಥಳಗಳಿಂದ ಹೇರುಗಳ ಸಾಗಾಣಿಕೆಯಾಗುವಾಗ ಸುಂಕ, ಅಂಗಡಿ ಸುಂಕ, ಮಗ್ಗ, ನಾಡ ತಳವಾರಿಕೆ, ಗಾಣ, ಹುಲ್ಲುಬನ್ನಿ ಮುಂತಾದ ತೆರಿಗೆ ಸುಂಕಗಳನ್ನು ಪಿಂಜಣಿಗರು, ಅಗಸರು ಮುಂತಾದವರು ಸಲ್ಲಿಸಬೇಕೆಂದೂ ಬಣಜಿಗರ ಎತ್ತಿನ ಹೇರು, ಉಪ್ಪಿನ ಮೋಳೆ ಇವುಗಳಿಗೆ ಸಲ್ಲಿಸಬೇಕಾದ ಸುಂಕವನ್ನು ಸಂಬಂಧಿಸಿದವರು ಬೀರೇಶ್ವರ ದೇವರ ಸೇವೆಗಾಗಿ ಸಲ್ಲಿಸಬೇಕೆಂದೂ ಆದೇಶಿಸಿರುವುದನ್ನು ಈ ಶಾಸನ ತಿಳಿಸುತ್ತದೆ.

ಮೊಳಕಾಲ್ಮುರು ಬೆಟ್ಟದ ಮೇಲೆ ಇರುವ ಕೆರೆಯನ್ನು ಸುಮಾರು 1620ರಲ್ಲಿ ಶ್ರೀಮನ್ ಮಹಾನಾಯಕಾಚಾರ್ಯ ಕಸ್ತೂರಿಮಲ್ಲಪ್ಪನಾಯಕನು ತಾಯಿ ಲಕ್ಷ್ಮಮ್ಮನಾಗತಿಯ ಹೆಸರಿನಲ್ಲಿ ಕಟ್ಟಿಸಿದ್ದನ್ನು ಒಂದು ಶಾಸನದಲ್ಲಿ (ಮೊಳ–37) ಹೇಳಿದೆ. ಈ ಕಸ್ತೂರಿಮಲ್ಲಪ್ಪನಾಯಕನು ಹಟ್ಟಿ (ಅಂದರೆ ನಾಯಕನಹಟ್ಟಿ) ಯನ್ನು ಆಳಿದ ಪಾಳೆಯಗಾರರಲ್ಲಿ ಒಬ್ಬನೆಂದು ತಿಳಿಯುತ್ತದೆ.

ಸಂತೇಗೋವಿ ಗ್ರಾಮದಲ್ಲಿ ದೊರೆತ 1665ರ ತಾಮ್ರಶಾಸನವೊಂದು (ಮೊಳ–25) ನ್ಯಾಯವಿಧಾನವನ್ನು ಹೇಳುತ್ತದೆ. ಸೊಂಡೂರು, ಗುಡೇಕೋಟೆ ಬಾಣರಾವಿ, ಪಾಳೆಯಪಟ್ಟನ್ನು ಬೋರಿನಾಯಕನೆಂಬ ಪಾಳೆಯಗಾರ ಆಳುತ್ತಿದ್ದ. ಆಗ ವಿಠಲಾಪುರದ ಅಕ್ಕಸಾಲಿ ಸತ್ಯಪ್ಪ ಎಂಬುವನು ಮೂವತ್ತು ಹಳ್ಳಿಗಳ ಮೊತ್ತದಾರಿಕೆ ಸುಂಕವನ್ನು ವಸೂಲಿ ಮಾಡುತ್ತ ಸಂಜೆಗೆ ಕೆಂಬಾವಿ ಎಂಬ ಗ್ರಾಮವನ್ನು ತಲುಪಿ, ಅವನ ಜಾತಿಯವರ ಮನೆಯಲ್ಲಿ ತಂಗಿದನು. ಆಗ ಅವನ ಸುಂಕದ ಚೀಲ ಕಳುವಾಯಿತು. ಅದಕ್ಕೆ ಅವನು ತಂಗಿದ ಮನೆಯ ಯಜಮಾನನ ಮೇಲೆ ಬೋರಿನಾಯಕ ದಂಡವಿಧಿಸಿದನು. ಈ ಬಗ್ಗೆ ಸತ್ಯ ಪತ್ತೆ ಮಾಡಲು ಇಬ್ಬರು ಸಮರ್ಥರನ್ನು ನೇಮಿಸಿ ಅದನ್ನು ಪತ್ತೆಹಚ್ಚಿದನು. ಸತ್ಯಪ್ಪನ ಮಗನೇ ಕಳ್ಳನೆಂದು ತಿಳಿದುಬಂತು. ದೊರೆ ಸತ್ಯಪ್ಪನಿಗಿದ್ದ ಮೂವತ್ತು ಹಳ್ಳಿಗಳ ರುಸುಮು ವಸೂಲಿ ಹಕ್ಕನ್ನು ತಪ್ಪಿಸಿ ಅದನ್ನು ಕೆಂಬಾವಿ ಈರಪ್ಪ ಅಪ್ಪಣ್ಣ ಅವರಿಗೆ ಕೊಟ್ಟನು. ಪಾಳೆಯಗಾರರ ಕಾಲದ ನ್ಯಾಯವಿಧಾನದ ಅಪರೂಪದ ನಿದರ್ಶನ ಈ ಶಾಸನದಿಂದ ವ್ಯಕ್ತಪಡುತ್ತದೆ.

ಮುಂದುವರಿಯುವುದು...



South Zone Gandhi Smaraka Nidhi Conference Osmania University Campus, Hyderabad : 25-26 June 2022

A report by Dr. H.S. Suresh, Secretary, Karnataka Sarvodaya Mandal

The Central Gandhi Smarak Nidhi, New Delhi and Gandhi Smaraka Nidhi Telangana jointly organised this conference at Hyderabad. Around sixty Gandhians representing various Gandhi organisations in five southern states took part in this Conference. Shri A Annamalai, Vice -chairman Gandhi Smaraka Nidhi New Delhi, in his opening note, explained the purpose of the conference and the areas of concerns to be looked into. Working in isolation and frittering away our energies would not help in building up a synergy needed to face the prevalent social tensions, he opined.

He also expressed the readiness of the Central Gandhi Smaraka Nidhi to act as an umbrella organisation to work in unison with other Gandhian institutions in the country. Prof Seetharama Rao in his inaugural address recalled the days of involvement of his father in the freedom movement. He also stressed upon the need to contextualise Gandhi and his preaching and practices in the contemporary society. There are many Study Centres, Research Institutes in all Universities and Higher Education Institutions, scarcely creating any impact on students or society. Theory should lead to practice and practice should enrich the theory,but there is a bicotomy between the two, he lamented. Even in the spiritual life, we must refer to Gandhi as he is an all time conscience keeper of the nation . Our campaign against seven social sins identified by Gandhiji, should continue, he said.

Sri Ramachandra Rahi, Chairman,Central Gandhi Smarak Nidhi, New Delhi, in his presidential remarks recollected his prison days during the national emergency and expressed his anguish whether the country is inching towards the same way, where voices are suppressed. As a Gandhians our commitment is ultimately to the truth and people. Those who have gathered here from all the five states from the South will work for this cause, he said.

Dr. Wooday. P. Krishna, President, Gandhi Smaraka Nidhi Karnataka impressed upon the need to be youth oriented in our ideas, action and the organisational structure. He explained the success stories of youth engagements in the state in co ordination with National Service Scheme and Nehru Yuva Kendra. He appreciated the initiatives taken by the Central Gandhi Smaraka Nidhi in organising this much needed interactions. He said that the Gandhi Smaraka Nidhi has a great legacy and hoped that the deliberations would lead to mobilise popular support to our cause and concerns.


The practice and approach adopted by the Gandhi Smaraka Nidhi Karnataka was applauded by all the delegates. Prof. Radhakrishnan representing Kerala said that in the current scenario, re-inventing and re- visiting Gandhi would be useful in relating him to the new generation.His teachings transcend all cult, faith and borders, he observed. Mr. Senthil from Tamilnadu expressed the need to create a legal cell in Central Gandhi Smaraka Nidhi. Dr. H S Suresh Secretary Karnataka Sarvodaya Mandal presented a paper on 'Smear Campaigns in social media' and sought the Gandhi Smaraka Nidhi to create a Social Media Cell to prevent the mis-information attempts on Gandhi and his preachings. Prof .G.B. Shivaraju Vice President Gandhi Smaraka Nidhi Bengaluru explained, how the residential camps help youth in internalising , if not all, at least a few of the Gandhian values. He further disclosed the plan of organising three National level youth camps for sensitising them on social values in Karnataka this year. Dr. Abida Begum, Convener Gandhi Study Centre Govt. First Grade College and Member Gandhi Smaraka Nidhi. Prof. Prasanna Kumar, NSS Programme Officer GFG College, Mysore shared their experience and experiments with youth on their developmental needs and how they organised group activities result in developing positive values and attitudes. Sri .N R Vishukumar, V.P. Gandhi Smaraka Nidhi and former Director, Dept. of Information & Public Relations explained how the governmental net work could be utilised in promoting Gandhian values.

The President of Gandhi Smaraka Nidhi Andhra Pradesh said that our own life matters in bringing up the image of Gandhi.How truthful and transparent are we in our daily life matters much to the people .We would not make India a home for our children with all our fad for development while falling in our Human Development Index. We must go to people,spend time with them as Gandhi did. Sri Nagasiri Venugopal Rao former Station Director AIR said most of the eighteen constructive programmes followed by Gandhi only need change of atitude and not a big budget. it's tough to run any organisation. Whenever we make a statement, it is viewed in different angles. We are working on eradication of leprosy ,an area identified by Gandhiji, he said. The other veteran Gandhians who spoke on this occassion were Dr.K.V.Ramana,Advisor to Govt. Of Telangana, Dr.K.P.C. Gandhi, Chairman, A.P. Gandhi Smaraka Nidhi Dr.G.V. Bhoodaan Subba Rao Vice President, Telangana Gandhi Smaraka Nidhi and K.Chandrashekara Kalkura,Gandhian,Karnool. Sri Sanjoy Singha ,Secretary CGandhi Smaraka Nidhi New Delhi presented the progress report and the forthcoming activities of Gandhi Smaraka Nidhi and thanked the delegates and the organisers in making the conference a success. The delegation from Karnataka was led by Dr. Woody. P. Krishna with the following members. N R Vishukumar, Prof.G B Shivaraju, Dr.H S Suresh, Dr. Abida Begum, Dr. Prasanna Kumar, M C Narendra, Sri Hariprasad, Dr.V.Prashanta, Dr. Satyamagala Mahadeva.

ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿ

ಸಂಗ್ರಹ : ಕೃಷ್ಣ ಹಾನ್‌ಬಾಳ್


ಹುಬ್ಬಳ್ಳಿಯಲ್ಲಿ ಕಿಚ್ಚು ಹಚ್ಚಿದ್ದ ಕ್ವಿಟ್ ಇಂಡಿಯಾ



ಗಾಂಧೀಜಿ 'ಕ್ವಿಟ್ ಇಂಡಿಯಾ' ಚಳವಳಿಗೆ ಕರೆ ಕೊಟ್ಟಮೊದಲ ದಿನದಿಂದಲೇ ಹುಬ್ಬಳ್ಳಿಯಲ್ಲಿ ಸಂಘರ್ಷ ಹೊತ್ತಿಕೊಂಡಿತ್ತು. 1942ರ ಆಗಸ್ಟ್ 8 ರಂದು ಹೋರಾಟಗಾರರು ಹುಬ್ಬಳ್ಳಿ-ನವಲಗುಂದ ನಡುವಿನ ಟೆಲಿಗ್ರಾಂ, ದೂರವಾಣಿ ತಂತಿ, ಕಂಬವನ್ನು ಸಂಪೂರ್ಣವಾಗಿ ಕಿತ್ತೊಗೆದಿದ್ದರು. ಹೋರಾಟದಲ್ಲಿ ಭಾಗವಹಿಸಿದ್ದವರನ್ನು ಬಂಧಿಸಲಾಯಿತು. ದುರ್ಗದ ಬೈಲಿನಲ್ಲಿದ್ದ ಪ್ರತಿಭಟನೆಗೆ ಬಾಲಕ ನಾರಾಯಣ ಡೋಣಿ ತೆರಳಿದ್ದ. ಧ್ವಜ ಹಿಡಿದು ಓಡಾಡುತ್ತಿದ್ದ ಚೂಟಿ ಹುಡುಗನನ್ನು ಮುಖಂಡರು ಮುಂಚೂಣಿಗೆ ಕರೆತಂದಿದ್ದರು. ಮೊದಲಿಗೆ ಬ್ರಿಟಿಷರ ಲಾಠಿ ಏಟು ಹೋರಾಟಗಾರರ ಸ್ವಾಗತಿಸಿತ್ತು. ನಡುವೆ ತೂರಿ ಬಂದ ಕಾಡತೂಸು ನಾರಾಯಣನಿಗೆ ತಗುಲಿತ್ತು. ಗುಂಡೇಟಿಗೆ ಗಂಭೀರ ಗಾಯಗೊಂಡಿದ್ದ ವೀರ ಬಾಲಕ ರಾತ್ರಿ ಚಿಟಗುಪ್ಪಿ ಆಸ್ಪತ್ರೆಯಲ್ಲಿ ಮಡಿದನು. ಆಗಸ್ಟ್ 9ರಂದು ಇದಕ್ಕೆ ಪ್ರತಿಯಾಗಿ ಹುಬ್ಬಳ್ಳಿಯಲ್ಲಿ ನಡೆದ ಪ್ರತಿಭಟನೆಯ ಪರಿಣಾಮ ಮಾತ್ರ ಘೋರವಾಗಿತ್ತು. ಅಂದು ನಾರಾಯಣನ ಸಾವು ಹೋರಾಟದ ಬೆಂಕಿಗೆ ತುಪ್ಪ ಸುರಿದಿತ್ತು. ದಕ್ಷಿಣ ಮರಾಠಾ ರೈಲ್ವೆ (ಈಗಿನ ನೈರುತ್ಯ ರೈಲ್ವೆ) ಧಗಧಗಿಸಿತು. ಸೆಪ್ಟಂಬರ್ 18ರ ತಡರಾತ್ರಿ ಹೋರಾಟಗಾರರು ಸೇರಿ ಹುಬ್ಬಳ್ಳಿ ಬಳಿಯ ಅಳ್ನಾವರ, ದೇಸೂರು ಬಳಿ ರೈಲ್ವೆ ಹಳಿ ಕಿತ್ತೆಸೆದಿದ್ದರು. ಅಮರಗೋಳ, ಹೆಬಸೂರು, ಕುಸುಗಲ್, ಬ್ಯಾಡಗಿಯಲ್ಲೂ ಹಳಿ ತಪ್ಪಿಸಲಾಗಿತ್ತು. ಹತ್ತು ದಿನಗಳ ಕಾಲ ಹುಬ್ಬಳ್ಳಿ-ಪುಣೆ ರೈಲು ರದ್ದಾಗಿತ್ತು. ಮೂರು ವಾರಗಳ ಕಾಲ ಹುಬ್ಬಳ್ಳಿ-ಹರಿಹರ-ಬೆಂಗಳೂರು-ಗುಂತಕಲ್ ರೈಲು ಸಂಚಾರ ನಿಂತಿತ್ತು. ಹೋರಾಟವನ್ನು ತಡೆಯಲು ಪೊಲೀಸರು ರೈಲ್ವೆ ನಿಲ್ದಾಣ ಮತ್ತು ಹಳಿಗಳ ಬಳಿ ಶಸ್ತ್ರಸಜ್ಜಿತರಾಗಿ ನಿಂತಿದ್ದರು. ಅಷ್ಟಾದರೂ ಸೆ. 15ರ ರಾತ್ರಿ ಕುಸುಗಲ, ಹೆಬಸೂರು, ಅಮರಗೋಳ ರೈಲ್ವೆ ನಿಲ್ದಾಣವನ್ನು ಸುಡಲಾಗಿತ್ತು. ರೈಲ್ವೆ ವರ್ಕ್‌ಶಾಪ್‌ನ 2500 ಕಾರ್ಮಿಕರು ಒಂದು ದಿನದ ಹರತಾಳ ನಡೆಸಿದ್ದರು. ಶಿರೂರು, ಬ್ಯಾಹಟ್ಟಿಯ ಗ್ರಾಮ ಚಾವಡಿ ಸುಡಲಾಗಿತ್ತು. ಇದರಿಂದ ಕಂಗೆಟ್ಟ ಕಲೆಕ್ಟರ್, ಬೆಳಗಾವಿಯಿಂದ ಬೆಟಾಲಿಯನ್ನೊಂದನ್ನು ಹುಬ್ಬಳ್ಳಿಗೆ ಕರೆಸಿದ್ದನು. 'ಕ್ವಿಟ್ ಇಂಡಿಯಾ' ಚಳವಳಿಯಲ್ಲಿ ಹುತಾತ್ಮನಾದ ಬಾಲಕ ನಾರಾಯಣ ಡೋಣಿಯ ಪುತ್ಥಳಿ ಇಲ್ಲಿ ಈಗ ವಿರಾಜಮಾನವಾಗಿದೆ.

ಸೌಜನ್ಯ : ಸುವರ್ಣ ನ್ಯೂಸ್

ವಿಜಯಪುರದ ಕೋಟ್ನಾಳದಲ್ಲಿ ಕಟ್ಟಲಾಗಿತ್ತು ಬ್ರಿಟಿಷರ ವಿರುದ್ಧ ಸೈನ್ಯ



ವಿಜಯಪುರ ಜಿಲ್ಲೆಯ ಕೋಟ್ನಾಳ ಎಂಬ ಪುಟ್ಟಗ್ರಾಮ ಬ್ರಿಟಿಷರಿಗೆ ಸೆಡ್ಡು ಹೊಡೆದು ನಿಂತ ನೆಲ. ಬಸವಲಿಂಗಪ್ಪ ದೇಶಮುಖ ಅವರ ಕುಟುಂಬ ದೇಶಕ್ಕಾಗಿ ಪ್ರಾಣವನ್ನೇ ಅರ್ಪಿಸಿತು. ಬ್ರಿಟಿಷರಿಗೆ ಪಾಲಿಗೆ ಸಿಂಹಸ್ವಪ್ನವಾಗಿದ್ದ ಈ ಕುಟುಂಬ ಸಾವೇ ಎದುರಿಗೆ ನಿಂತಿದ್ದರೂ ಹೋರಾಡುವುದನ್ನು ಮಾತ್ರ ಬಿಟ್ಟಿರಲಿಲ್ಲ. ವೀರ ಸೇನಾನಿ ಬಸಲಿಂಗಪ್ಪ ದೇಶಮುಖ ಅವರು ವೆಂಕಟಪ್ಪ ನಾಯಕನ ಜೊತೆಗೂಡಿ ಬ್ರಿಟಿಷರ ವಿರುದ್ಧ ಹೋರಾಡಲು ಅಣಿಯಾಗಿದ್ದರು. ಆ ಕಾರಣಕ್ಕಾಗಿಯೇ ಅವರು ಕೋಟ್ನಾಳ, ಜಂಬಗಿ ಗ್ರಾಮಗಳಲ್ಲಿ ಸುಮಾರು 5 ಸಾವಿರ ಸೈನಿಕರನ್ನು ಒಳಗೊಂಡಿದ್ದ ದೊಡ್ಡ ಸೈನ್ಯ ಕಟ್ಟಿದ್ದರು. ಮಾತ್ರವಲ್ಲದೆ ಅವರಿಗೆ ಯುದ್ಧದ ರಣತಂತ್ರಗಳನ್ನು ಹೇಳಿಕೊಡಲು ಇಲ್ಲಿನ ಕೋಟೆಯಲ್ಲಿ ಯುದ್ಧ ತರಬೇತಿ ಶಾಲೆಗಳನ್ನು ತೆರೆದಿದ್ದರು. ಈ ಕೋಟೆಯ ಹತ್ತಿರದ ನಗಾರಿ ಬುರುಜಿನಿಂದ ಶತ್ರುಸೈನ್ಯ ದೂರದಿಂದ ಬರುತ್ತಿರುವಾಗಲೇ ವೀಕ್ಷಿಸಲು ಸಾಧ್ಯವಿತ್ತು. ಕೋಟೆಯಲ್ಲಿ ಕುದುರೆ ಲಾಯಗಳ ದೊಡ್ಡ ವೀಕ್ಷಣಾ ಗೋಪುರವೂ ಇದೆ. ಕೋಟ್ನಾಳದಲ್ಲಿ ಮದ್ದುಗುಂಡು, ತುಪಾಕಿಗಳು, ಶಸ್ತ್ರಾಸ್ತ್ರಗಳನ್ನು ತಯಾರಿಸಿ ಸುರಪುರಕ್ಕೆ ಕಳುಹಿಸುವ ವೇಳೆ ಬ್ರಿಟಿಷರು ವಶಪಡಿಸಿಕೊಂಡರು. ಕೋಟೆಗಳನ್ನು ಭಗ್ನಗೊಳಿಸಿದರು. ಆದರೂ ಎದೆಗುಂದದೆ ಬಸಲಿಂಗಪ್ಪ ಅವರು ಜನರಲ್ಲಿ ಸ್ವಾತಂತ್ರ್ಯದ ಕಿಚ್ಚು ಹೊತ್ತಿಸುತ್ತಿದ್ದರು. ಬ್ರಿಟಿಷರ ವಿರುದ್ಧ ಹೋರಾಡಲು ಕೋಟ್ನಾಳದಲ್ಲಿಯೇ ಮದ್ದು ಗುಂಡು, ಹತಾರೆ, ಖಡ್ಗ ಮುಂತಾದ ಯುದ್ಧ ಸಾಮಗ್ರಿಗಳನ್ನು ತಯಾರಿಸಿ ಸಂಗ್ರಹಿಸುತ್ತಿದ್ದರು. ಮದ್ದು ಗುಂಡುಗಳನ್ನು ರಕ್ಷಿಸಲು ಗುಹೆ ಮಾಡಿಕೊಂಡಿದ್ದರು. ನೆಲಮನೆಯಲ್ಲಿ ಮದ್ದು ಗುಂಡುಗಳನ್ನು ಬ್ರಿಟಿಷರ ಕೈಗೆ ಸಿಗದಂತೆ ಜಾಗರೂಕತೆ ವಹಿಸಿದ್ದರು. ಸಮಯ ಸಾಧಿಸಿ ಬ್ರಿಟಿಷ್ ಸೈನ್ಯದ ಮೇಲೆ ದಾಳಿ ನಡೆಸಿ ಬ್ರಿಟಿಷರನ್ನು ಹಿಮ್ಮೆಟ್ಟಿಸುತ್ತಿದ್ದರು. 1857ರ ಮೊದಲ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಬ್ರಿಟಿಷರು ಬಸಲಿಂಗಪ್ಪ ಹಾಗೂ ಅವರ ತಂದೆ ವೀರಸಂಗಪ್ಪ ಅವರನ್ನು ಬಂಧಿಸಿ ಸೊಲ್ಲಾಪುರದ ಕಾರಾಗೃಹದಲ್ಲಿ ಎರಡು ವರ್ಷ ಚಿತ್ರಹಿಂಸೆ ನೀಡಿದ್ದರು. ಎಷ್ಟೇ ಚಿತ್ರಹಿಂಸೆ ನೀಡಿದರೂ ಬಸಲಿಂಗಪ್ಪ ಹಾಗೂ ವೀರಸಂಗಪ್ಪ ಅವರು ತಮ್ಮ ಗುಟ್ಟು ಮಾತ್ರ ಬಿಟ್ಟುಕೊಟ್ಟಿರಲಿಲ್ಲ. ನಂತರ ಸೊಲ್ಲಾಪುರದ ಕಲೆಕ್ಟರ್ ಕಚೇರಿ ಎದುರು ತಂದೆ ಮಗನನ್ನು ಗಲ್ಲುಗಂಬಕ್ಕೇರಿಸಿದರು. ಇವರ ಸ್ಮರಣಾರ್ಥವಾಗಿ ವಿಜಯಪುರ ನಗರದ ಮಧ್ಯಭಾಗದಲ್ಲಿಯೇ ಸ್ಮಾರಕವನ್ನು ಸ್ಥಾಪಿಸಲಾಗಿದೆ.

ಸಂಗ್ರಹ : ಡಾ. ವಿ. ಪ್ರಶಾಂತ, ಸೌಜನ್ಯ : ಸುವರ್ಣ ನ್ಯೂಸ್

How to See yourself

by Dalai Lama, Translated by Jeffrey Hopkins

Buddhist notion that love and insight work cooperatively to bring about enlightenment, like the two wings of a bird. The overarching theme is that self-knowledge is the key to personal development and positive relationships. Dalai Lama shows us how, in the absence of true self-knowledge, we hurt ourselves through misguided, exaggerated notions of self, others, external events, and physical things. Even our senses deceive us, drawing us into attachment and negative actions that can only come back to haunt us in the future.

Meditative Reflection : Hence, as long as there is attraction to self, So long do you revolve in cyclic existence. It is crucial to identify and recognize different thought processes. Some thoughts merely make us aware of an object, such as seeing a watch as just a watch without any afflictive emotions like lust. Other thoughts determine correctly that an object is good or bad but still do not introduce any afflictive emotions; these thoughts just recognize good as good and bad as bad. However, when the idea that objects inherently exist takes hold, fundamental ignorance has been introduced. As the mistaken assumption of inherent existence becomes stronger, lust or hatred become involved. The turning point from mere awareness to misconception comes when ignorance exaggerates the status of the goodness or badness of the object so that it comes to be seen as inherently good or bad, inherently attractive or unattractive, inherently beautiful or ugly. Ignorantly misjudging this false appearance to be fact opens the way for lust, hatred, and myriad other counterproductive emotions. These destructive emotions, in turn, lead to actions based on lust and hatred. These actions establish karmic predispositions in the mind that drive the process of cyclic existence from life to life.

The Root of Cyclic Existence : The process I just described is how we are ruined by our own ignorance and fixed to this round of suffering in life after life that we call "cyclic existence"; some levels of mind which we normally identify as correct are actually exaggerations of the status of persons and things that create trouble for ourselves and others. Ignorance keeps us from seeing the truth, the fact that people and other phenomena are subject to the laws of cause and effect but do not have essential being that is independent in and of themselves. You need to identify this process as well as you can, gradually developing greater and greater understanding of the sequence of events beginning with dispassionate observation and culminating in counterproductive emotions and actions. Without ignorance, counterproductive emotions are impossible; they cannot occur. Ignorance is their support. This is why Nagarjuna's student the Indian scholar-yogi Aryadeva says:


> Just as the capacity to feel is present throughout the body.
>
> Ignorance dwells in all afflictive emotions.
>
> Therefore all afflictive emotions are overcome
>
> Through overcoming ignorance.

To be Continued...

Courtacy : Atria Books

ಕೊಡಗಿನಲ್ಲೊಂದು ಗಾಂಧಿ ಗದ್ದೆ

ಸಂಗ್ರಹ : ಅಖಿಲಾ ವಿದ್ಯಾಸಂದ್ರ



ದೇಶದಾದ್ಯಂತ ಸ್ವಾತಂತ್ರ ಚಳವಳಿ ತೀವ್ರಗೊಂಡಿದ್ದ ಸಂದರ್ಭದಲ್ಲಿ ಫೆಬ್ರುವರಿ 22, 1934ರಂದು ಮಹಾತ್ಮ ಗಾಂಧೀಜಿಯವರು ಕೇರಳ ಮಾರ್ಗವಾಗಿ ಕೊಡಗಿನ ಪೊನ್ನಂಪೇಟೆಗೆ ಆಗಮಿಸಿದ್ದರು. ಇಲ್ಲಿನ ರಾಮಕೃಷ್ಣ ಆಶ್ರಮದಲ್ಲಿ ಒಂದು ರಾತ್ರಿ ತಂಗಿದ್ದರು. ಅವರಿಗೆ ಸ್ಥಳೀಯವಾಗಿ ಪುತ್ತಾಮನೆ ಪೊನ್ನಮ್ಮ ಅವರು ಸತ್ಕಾರ ನೀಡಿದ್ದರು. ಮರು ದಿವಸ ಬಾಪೂ ಕೊಡಗಿನ ಜನರನ್ನು ಉದ್ದೇಶಿಸಿ ಗದ್ದೆ ಬಯಲಿನಲ್ಲಿ ಸ್ವಾತಂತ್ರ್ಯ ಚಳವಳಿಯ ಕುರಿತು ಭಾಷಣ ಮಾಡಿದ್ದರು. ಆ ಗದ್ದೆ ಈಗ ಚೆಪ್ಪುಡೀರ ಪೊನ್ನಪ್ಪ ಅವರ ವಶದಲ್ಲಿದ್ದು 'ಗಾಂಧಿ ಗದ್ದೆ' ಎಂದೇ ಪ್ರಸಿದ್ಧಿ ಪಡೆದಿದೆ. ಪೊನ್ನಂಪೇಟೆ ಬಸ್ ನಿಲ್ದಾಣದಿಂದ ಹುದಿಕೇರಿ ಮಾರ್ಗದಲ್ಲಿ 1 ಕಿ.ಮೀ. ದೂರದಲ್ಲಿದ್ದು, ಪೊನ್ನಪ್ಪ ಅವರು ಈ ಗದ್ದೆಗೆ ಪ್ರತಿವರ್ಷ ಭತ್ತದ ಕೃಷಿ ಮಾಡುತ್ತಿದ್ದಾರೆ. ಗಾಂಧೀಜಿ ಅವರು ಬಂದ ನೆನಪಿಗಾಗಿ ಪಟ್ಟಣದ ಹಿರಿಯರು ಅಲ್ಲಿ ಗಾಂಧಿ ಪ್ರತಿಮೆಯನ್ನು ಸ್ಥಾಪನೆ ಮಾಡಿದ್ದಾರೆ. ಆದರೆ, ಪಟ್ಟಣದಿಂದ ದೂರವಿದ್ದುದರಿಂದ ಸಂರಕ್ಷಣೆ ಕಷ್ಟವೆಂದು 20 ವರ್ಷಗಳ ಹಿಂದೆ ಪತ್ರಿಮೆಯನ್ನು ಸ್ಥಳೀಯ ಗ್ರಾಮ ಪಂಚಾಯಿತಿಯ ಆವರಣಕ್ಕೆ ಸ್ಥಳಾಂತರಿಸಲಾಗಿದೆ. ಈ ಪ್ರತಿಮೆ ಎದುರಿನಲ್ಲಿ ಪ್ರತಿವರ್ಷ ರಾಷ್ಟ್ರೀಯ ಹಬ್ಬಗಳನ್ನು ಶ್ರದ್ಧಾಭಕ್ತಿಯಿಂದ ಆಚರಿಸಲಾಗುತ್ತಿದೆ. ಪೊನ್ನಂಪೇಟೆಗೆ ಬಾಪೂ ಬಂದ ಸುದ್ದಿಯನ್ನು ತಿಳಿದ ಮೈಸೂರು, ಹಾಸನ ಹಾಗೂ ಕೊಡಗಿನ ಜನರು ಎತ್ತಿನ ಗಾಡಿ ಮೂಲಕ ಸಾಗರೋಪಾದಿಯಲ್ಲಿ ಬಂದು ಗಾಂಧೀಜಿ ಅವರ ದರುಶನ ಪಡೆದು ಭಾಷಣ ಕೇಳಿದ್ದರು. ಬಳಿಕ ಗಾಂಧಿ ಪೊನ್ನಂಪೇಟೆಯಿಂದ ಗೋಣಿಕೊಪ್ಪಲು ಮಾರ್ಗವಾಗಿ ಕೈಕೇರಿಗೆ ತೆರಳಿ ಅಲ್ಲಿನ ಹರಿಜನ ವೃದ್ಧೆಯೊಬ್ಬರ ಕಷ್ಟಸುಖ ವಿಚಾರಿಸಿದ್ದರು. ಕೊಡಗಿನ ಕ್ರೀಡಾ ಮತ್ತು ಸಾಂಸ್ಕೃತಿಕ ಕೇಂದ್ರವಾಗಿರುವ ಪೊನ್ನಂಪೇಟೆ 'ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಮೆಟ್ಟಿದ ನಾಡು' ಎಂಬ ಹೆಮ್ಮೆಗೂ ಪಾತ್ರವಾಗಿದೆ.

ಸೌಜನ್ಯ : ಸುವರ್ಣನ್ಯೂಸ್

ಡಾ|| ಹೊ. ಶ್ರೀನಿವಾಸಯ್ಯ ಅವರ ಅನುಭವ ಕಥನ – ನಾ ಕಂಡ ಜಗತ್ತು


ಸಂಗ್ರಹ : ನಾಡೋಜ ಡಾ. ವೂಡೇ ಪಿ. ಕೃಷ್ಣ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಸ್ಕಾಲರ್‌ಷಿಪ್ ಹಣವಿಲ್ಲದೆ ಓದುವುದು ಹೇಗೆ? ಬಟ್ಟೆ ಬರೆಗೆ ದುಡ್ಡು ಬೇಡವೆ? ಆಗಲೂ ನೆರವಾದದ್ದು ತಿಮ್ಮಯ್ಯನೇ ಕುಲಪತಿಗಳ ಮನೆಗೆ ಹೋದೆ. ಅವರಿವರನ್ನು ಕಂಡು ಮಾತನಾಡಿದೆ. ಕಡೆಗೂ ಸ್ಕಾಲರ್‌ಷಿಪ್ ಸಿಕ್ಕಿತು. ಇಂಟರ್ ಮೀಡಿಯೇಟ್ ಕಾಲೇಜು ಆದಮೇಲೆ ಬೇಸಿಗೆ ರಜೆಯಲ್ಲಿ ಕಾಲ ವ್ಯರ್ಥವಾಗಿ ಕಳೆಯಬಾರದೆಂದು ವ್ಯವಸಾಯ ಇಲಾಖೆಯಲ್ಲಿ ತಿಂಗಳಿಗೆ 25 ರೂಪಾಯಿಗೆ ಕ್ಲಾರ್ಕ್ ಕೆಲಸ ಮಾಡುತ್ತಿದ್ದೆ. ಅಂಕಿಅಂಶದ ಕೆಲಸವನ್ನು ಕೆಲವು ತಿಂಗಳು ಮಾಡಿದೆ. ಸೀನಿಯರ್ ಇಂಟರ್‌ನಲ್ಲಿ ಸಂಸ್ಕೃತದಲ್ಲಿ ತೇರ್ಗಡೆಯಾಗಲಿಲ್ಲ. ಒಂದು ವರುಷ ನಷ್ಟವಾಯಿತು. ಆಗಲೂ ಕೆಲಸಕ್ಕೆ ಸೇರಿದ್ದೆ. ಇಂಜಿನೀರಿಂಗ್ ಓದುತ್ತಿರಬೇಕಾದರೆ ತಿಂಗಳಿಗೆ ಹದಿನೆಂಟು ರೂಪಾಯಿ ಫೀಜು ಕೊಡಬೇಕಾಗಿತ್ತು. ಅದನ್ನು ಕೊಡುತ್ತಿದ್ದವರು ಅಂಟಪ್ಪ. ವೆಂಕಟೇಶ್ವರ ಸ್ಟೋರ್ಸ್ ಪತ್ರಿಕೆ ಅಂಗಡಿ ಮಾಲೀಕರು, ಸ್ಕಾಲರ್ ಷಿಪ್ ಹಣ ಕೊಟ್ಟಾಗ ಅವರ ಹಣ ಹಿಂದಿರುಗಿಸುತ್ತಿದ್ದೆ.

ಇಂಜಿನೀರಿಂಗ್‌ನಲ್ಲಿ ಮೂರನೆ ವರ್ಷಕ್ಕೆ ಬಂದಾಗ ದಕ್ಷಿಣ ಭಾರತ ಪ್ರವಾಸ ಕೈಗೊಳ್ಳಬೇಕಾಯಿತು. ನಾಲ್ಕನೆ ವರ್ಷ ಉತ್ತರ ಭಾರತ ಪ್ರವಾಸ ಮಾಡಬೇಕಾಯಿತು. ಹಣದ ಕೊರತೆಯಿಂದ ಪ್ರವಾಸ ನಿರಾಕರಿಸಿದೆ. ಆಗ ನೆರವಿಗೆ ಬಂದವರು ಮೈಸೂರಿನ ಸುಬ್ಬರಾಮು, ಹಿಂದೂಸ್ಥಾನ ವಿಮಾನ ಕಾರ್ಖಾನೆ ಕೆಲಸಕ್ಕೆ ಸೇರಿದ ಮೇಲೆ ಕಂತಿನಲ್ಲಿ ಅವರ ಹಣ ವಾಪಸ್ಸು ಮಾಡಿದೆ.

ಆಸ್ತಿ ಪಾಸ್ತಿ : ಹಳ್ಳಿಯಲ್ಲಿ ನಮ್ಮ ತಂದೆಯವರ ಕುಟುಂಬದ ಹೆಸರಿನಲ್ಲಿ ಸ್ವಲ್ಪ ಜಮೀನಿತ್ತು. ನಾವು ಬೆಂಗಳೂರಿನಲ್ಲಿದ್ದುದರಿಂದ ಜಮೀನು ನೋಡಿಕೊಳ್ಳಲು ಆಗುತ್ತಿರಲಿಲ್ಲ. ನಮ್ಮ ಬಂಧುಗಳೇ ಆಗಿದ್ದ ತಿಮ್ಮಯ್ಯ ಎಂಬಾತನಿಗೆ ಜಮೀನನ್ನು ನೋಡಿಕೊಳ್ಳಲು ಬಿಟ್ಟರು, ನಮ್ಮ ತಾಯಿ. ತಿಮ್ಮಯ್ಯ ಜಮೀನಿನ ಇಳುವರಿಯ ಲಾಭವನ್ನು ತಾನೇ ಪಡೆದ. ನಮ್ಮ ತಾಯಿ, ಧವಸವನ್ನಾದರೂ ಕೊಡು ಎಂದರೆ ಜಗಳಕ್ಕೆ ಬರುತ್ತಿದ್ದ. ಇಬ್ಬರಲ್ಲೂ ಮನಸ್ತಾಪ ಉಂಟಾಯಿತು. ಕೊನೆಗೆ ನಮ್ಮ ತಾಯಿ ಎಷ್ಟೋ ಬಾರಿ ಕೇಳಿ ನೋಡಿದರೂ, ಪಂಚಾಯಿತಿ ಕೂಡಿಸಿದರೂ ತಿಮ್ಮಯ್ಯ ಕೇಳಲಿಲ್ಲ. ಕೊನೆಗೆ ಗದ್ದೆಯನ್ನು ಮಾರಲು ನಿಶ್ಚಯಿಸಿದರು ನಮ್ಮ ತಾಯಿ. ಆದರೆ ತಿಮ್ಮಯ್ಯನಿಗೆ ಹೆದರಿಕೊಂಡು ಯಾರೂ ಗದ್ದೆ ಕೊಳ್ಳಲು ಬರಲಿಲ್ಲ. ನಾನು "ಜಮೀನಿನ ವ್ಯವಹಾರ ಬೇಡ ಅವನೇ ನೋಡಿ ಕೊಳ್ಳಲಿ" ಎಂದೆ. ಆದರೆ ಹಿರೀಕರ ಆಸ್ತಿ, 'ತಾಯಿ ಒಪ್ಪಲಿಲ್ಲ. ಒಬ್ಬರ ಸಹಾಯದಿಂದ ಆ ಜಮೀನನ್ನು ತಿಮ್ಮಯ್ಯ ಹಾಗೂ ಇನ್ನೊಬ್ಬ ಬಂಧು ಮರಿಯಣ್ಣ ಕೊಂಡು ಕೊಳ್ಳುವಂತೆ ಆಯಿತು. ಆದರೆ ಕಾಲಕ್ರಮೇಣ ಅವರಿಬ್ಬರಲ್ಲಿ ಜಗಳ ಉಂಟಾಯಿತು. ಕೊನೆಗೆ ಜಮೀನು ಪಾಲು ಮಾಡಿದರು. ನನಗೂ ಒಂದು ಪಾಲು ಬಂತು. ಅದನ್ನು ಮರಿಯಣ್ಣನಿಗೆ ಕೊಟ್ಟೆ. ಜಮೀನು ಇದ್ದರೇನು? ಆದಾಯ ಇಲ್ಲ. ಕಂದಾಯ ಮಾತ್ರ ಕಟ್ಟುವುದಾಗಿತ್ತು.



ನಮ್ಮ ತಂದೆ ಊರಿನಲ್ಲಿ ರಾಮ ಮಂದಿರ ಕಟ್ಟಿಸಬೇಕು ಅಂತ ಹಣ ವಸೂಲಿ ಮಾಡಿ ಹಳ್ಳಿಯವರ ಬಳಿ ಕೊಟ್ಟಿದ್ದರು. ಹಳ್ಳಿಯಲ್ಲಿ ನನ್ನದೊಂದು ಸ್ವಲ್ಪ ಜಾಗವಿತ್ತು. ಅಲ್ಲೊಂದು ಮನೆ ಕಟ್ಟಿ, ಬಂದು ಹೋಗುವವರಿಗೆ ಅನುಕೂಲ ಮಾಡಿಕೊಡೋಣ ಎಂದು ಕೊಂಡೆ. ಅದು ಸರಿಬೀಳಲಿಲ್ಲ, ಕೊನೆಗೆ ಹಳ್ಳಿಯ ಹಿರಿಯರನ್ನು, ಬೆಂಗಳೂರಿನಲ್ಲಿದ್ದ ಹಳ್ಳಿಗೆ ಸೇರಿದವರನ್ನು ಭೇಟಿಮಾಡಿ ಮಾರಿಗುಡಿ ಪಕ್ಕದ ನಿವೇಶನವನ್ನು ಕೇಳಿಪಡೆದೆ. ನನ್ನ ಜಾಗವನ್ನು ಬಿಟ್ಟು ಕೊಟ್ಟೆ. ಅಲ್ಲಿ ಮಾರಿಗುಡಿ ಪಕ್ಕದಲ್ಲಿ ರಾಮಮಂದಿರದ ಕಟ್ಟಡ ಕಟ್ಟಿಸಿದ್ದಾಯಿತು. ಈಗ ಅಲ್ಲೊಂದು ಭಜನೆ ಮಂದಿರ ಇದೆ. ಪ್ರತಿ ಶನಿವಾರ ಅಲ್ಲಿ ಭಜನೆ ಮಾಡುವರು. ಈಗ ಚೌದರಿ ಕೊಪ್ಪಲಿಗೆ ಹೋಗಲು ಅನುಕೂಲವಿದೆ, ಲಾರಿ, ಕಾರು ಓಡಾಡಬಹುದಾಗಿದೆ.

ತೆಂಗಿನ ಮರದ ರಸ್ತೆ ರಾಮಮಂದಿರ : ಶ್ರೀರಾಮ ಮಂದಿರದ ಆಡಳಿತದಲ್ಲಿ ಸುಧಾರಣೆಯಾಗಿರಲಿಲ್ಲ. ರಾಮ ಮಂದಿರದಲ್ಲಿ ಹಣವಿರಲಿಲ್ಲ. ನಾನು ಕೋಶಾಧಿಕಾರಿಯಾದೆ ನಾಲ್ಕಾಣೆ ಸದಸ್ಯರನ್ನು ಮೊದಲುಗೊಂಡು ಧನಿಕರನ್ನು ಸೇರಿಸಿ, 600 ಜನ ಸದಸ್ಯರನ್ನು ಮಾಡಿದೆ. ಶನಿವಾರ, ಭಾನುವಾರ ಹಣ ವಸೂಲಿ ಕೆಲಸ. ರಾಮ ಮಂದಿರದ ಪಶ್ಚಿಮಕ್ಕೆ ಬಾಗಿಲು ಇರಲಿಲ್ಲ. ಅದನ್ನು ಸಿದ್ಧ ಮಾಡಿದೆವು. ಕಡಿದಾಳ್ ಮಂಜಪ್ಪನವರನ್ನು ಕರೆಯಿಸಿ ಬಾಗಿಲಿನ ಉದ್ಘಾಟನೆ ನೆರವೇರಿಸಿದೆವು. ಪ್ರತಿವರ್ಷ ರಾಮೋತ್ಸವ ಸಂದರ್ಭದಲ್ಲಿ ಹಣ ವಸೂಲಿ ಪ್ರಾರಂಭಿಸಿದೆವು. ಗಾಂಧಿ ಸಾಹಿತ್ಯ ಸಂಘಕ್ಕಾಗಿ ಹಣ ಸಂಗ್ರಹಿಸುತ್ತಿದ್ದುದರ ಅನುಭವ ಇಲ್ಲಿ ನೆರವಾಯಿತು, ಹರಿಕಥೆ, ಸಂಗೀತ ಕಾರ್ಯ ಕ್ರಮಗಳನ್ನು ಏರ್ಪಡಿಸುತ್ತಿದ್ದೆವು. ರಾಮ ಮಂದಿರದ ಎದುರಿಗಿದ್ದ ಸ್ಥಳವನ್ನು ಶ್ರೀರಾಮ ಮಂದಿರದ ಕಟ್ಟಡಕ್ಕಾಗಿ ಕೊಡಬೇಕೆಂದು ಮುನಿಸಿಪಲ್ ಅಧ್ಯಕ್ಷರಾಗಿದ್ದ ಅನಂತರಾಮನ್, ಮಲ್ಲೇಶ್ವರದ ಕಾರ್ಪೊರೇಟರ್ ಡಾ. ಟಿ. ಪಾರ್ಥಸಾರಥಿ ಅವರನ್ನು ಕೇಳಿಕೊಂಡೆವು. ಶ್ರೀ ಜೆ. ಲಿಂಗಯ್ಯ ಆಗ ಟೌನ್‌ಪ್ಲಾನಿಂಗ್ ಕಮಿಟಿ ಅಧ್ಯಕ್ಷರು, ಶ್ರೀ ಎ.ಎಸ್. ಕೃಷ್ಣಯ್ಯರ್ ಅವರನ್ನು ಕರೆಯಿಸಿದರು. ಅರ್ಜಿ ತಯಾರಾಯಿತು. 30x40 ಅಡಿ ನಿವೇಶನ ರಾಮ ಮಂದಿರಕ್ಕಾಗಿ ಸುಲಭ ಬೆಲೆಯಲ್ಲಿ ದೊರೆಯಿತು. ರಾಮ ಮಂದಿರದ ಆದಾಯಕ್ಕಾಗಿ ಒಂದೆರಡು ಅಂಗಡಿಗಳನ್ನು ಹಾಕೋಣ ಬಾಡಿಗೆ ಬರುತ್ತದೆ. ಎಂದು ಶ್ರೀ ಜೆ. ರಾಮಗೌಡರು ಸಲಹೆ ಮಾಡಿದರು. ಅದೂ ಆಯಿತು.

ಮುಂದುವರಿಯುವುದು...

ಸಂಗ್ರಹ : ಡಾ. ಪ್ರಶಾಂತ

ಕೈಗಳನ್ನು ಕಟ್ಟಿ ಪೆರಿಯಾರ್ ನದಿಯುದ್ದಕ್ಕೂ ಈಜಿ ಜೈಸಿದ 70ರ ಅಜ್ಜಿ



ಸಾಧನೆಗೆ ವಯಸ್ಸಿನ ಹಂಗಿಲ್ಲ, ಸಾಧಿಸುವ ಛಲವೊಂದಿದ್ದರೆ ವಯಸ್ಸು ಕೇವಲ ಸಂಖ್ಯೆ ಮಾತ್ರ ಎಂಬುದು ಮತ್ತೆ ಮತ್ತೆ ಸಾಬೀತಾಗುತ್ತಿದೆ. ತಮ್ಮ ವಯಸ್ಸನ್ನು ಬದಿಗಿಟ್ಟು ಹಲವು ಸಾಧನೆ ಮಾಡಿ ತೋರಿದ ಅನೇಕರು ನಮ್ಮ ಸಮಾಜದಲ್ಲಿದ್ದಾರೆ. ಅಂತಹವರ ಸಾಲಿಗೆ ಮತ್ತೊಂದು ಸೇರ್ಪಡೆ ಕೇರಳದ 70 ವರ್ಷದ ಆರಿಫಾ ವಿ.ಕೆ. ಇಳಿವಯಸ್ಸಿನಲ್ಲೂ ಕೈಗಳನ್ನು ಕಟ್ಟಿಕೊಂಡು ಪೆರಿಯಾರ್ ನದಿಯಲ್ಲಿ ಈಜಿದ್ದಾರೆ. ಎಲ್ಲಾ ವಯೋಮಾನದವರಿಗೂ ಈಜು ಕಲಿಯಲು ಉತ್ತೇಜನ ನೀಡಲು ಇಲ್ಲಿನ ವಲಸ್ಸೆರಿ ರಿವರ್ ಸ್ವಿಮ್ಮಿಂಗ್ ಕ್ಲಬ್ ಈಜು ಕಾರ್ಯಕ್ರಮವನ್ನು ಆಯೋಜಿಸಿತ್ತು. ಇದರಲ್ಲಿ 70 ವರ್ಷದ ಮಹಿಳೆಯೊಬ್ಬರು 780 ಮೀಟರ್ ಅಗಲದ ಪೆರಿಯಾರ್ ನದಿಯಲ್ಲಿ ಕೈಗಳನ್ನು ಕಟ್ಟಿಕೊಂಡು ಈಜಿದ್ದಾರೆ. ಆಲುವಾದ ತೈಕ್ಕಟ್ಟುಕರದ ಆರಿಫಾ ವಿ.ಕೆ., ಕುನ್ನುಂಪುರಂನ 11 ವರ್ಷದ ಭರತ್ ಕೃಷ್ಣ ಮತ್ತು ಅಶೋಕಪುರಂನ 38 ವರ್ಷದ ಧನ್ಯ ಕೆ.ಜಿ. ಅವರೊಂದಿಗೆ ಮಡಪಂ ಕಡವುನಿಂದ ಮಣಪ್ಪುರಂ ದೇಸೊಮ್ ಕಡವುವರೆಗೆ ಈಜಿದರು. ಇದೇ ಅಕಾಡೆಮಿಯಲ್ಲಿ ತರಬೇತಿ ಪಡೆದ ನನ್ನ ಮಕ್ಕಳನ್ನು ನೋಡಿ ನಾನು ಈಜು ಕಲಿಯಲು ನಿರ್ಧರಿಸಿದೆ. ನನ್ನ ಕುಟುಂಬದ ಒಂಬತ್ತು ಮಂದಿಗೆ ಈಜು ಗೊತ್ತು. ಈ ವರ್ಷದ ಆರಂಭದಲ್ಲಿ, ನಾನು ಪೆರಿಯಾರ್ ನದಿಯಲ್ಲಿ ಈಜುತ್ತಿದ್ದೆ. ನನ್ನ ತರಬೇತುದಾರ ಸಾಜಿ ವಳಸ್ಸೆರಿ ಅವರು ಕೈಗಳನ್ನು ಕಟ್ಟಿಕೊಂಡು ಈಜಲು ಪ್ರಯತ್ನಿಸಲು ನನಗೆ ಆತ್ಮವಿಶ್ವಾಸವನ್ನು ತುಂಬಿದರು. ಅವರು ಎಲ್ಲರೂ ಈಜುವುದನ್ನು ಕಲಿಯಬೇಕು. ಮುಳುಗುವ ಭಯದಿಂದ ಜನರು ಈಜು ಕಲಿಯಲು ಹಿಂಜರಿಯಬಾರದು ಎಂದು ಅವರು ಹೇಳಿದರು. ಜನರಿಗೆ ಈಜು ಕಲಿಯಲು ವಯಸ್ಸು ಅಡ್ಡಿಯಾಗುವುದಿಲ್ಲ. ಈ ಸಂದೇಶ ಸಾರುವ ಉದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ಕಾರಣಕ್ಕಾದರೂ ಪೋಷಕರು ಮಕ್ಕಳನ್ನು ಈಜು ಕಲಿಕೆಗೆ ಕಳಿಸಬೇಕು ಎಂದು ಸಾಜಿ ಹೇಳಿದರು.

ಸೌಜನ್ಯ : ಸುವರ್ಣ ನ್ಯೂಸ್

Chronology of events of personal & Public life of Mahatma Gandhi (year wise - from 1869)

1905 - January 13. *Wrote to G.K. Gokhale regarding Indian Opinion and his intention to open a school for Indian children.*

February 17. *Visited Cape Town accompanied by Parsi Rustomji: lett for Johannesburg.*

March 4,11,18 and 25. *Delivered four lectures on Hindu religion at Theosophical Society, Johannesburg*

April 7. *Sent memorial to Natal Legislative Assembly regarding Bills to amend and consolidate the law relating to the Municipal Corporations" and to regulate "use of firearms".*

May. *Was learning Tamil.*

July 8. *Asked, in Indian Opinion, for abolition of salt tax in India.*

July 14. *Sought from Johannesburg Town Council assurance of facilities to Indians travelling in trams.*

July 15. *Criticized, in Indian Opinion, the Cape Immigration Act.*

July 20. *Partition of Bengal announced.*

July 22. *Called upon South African politicians to reconsider treatment of British Indians in light of India's contribution to defence of Empire.*

August 5. *Contributed 10s. to Edwin Arnold Memorial Fund, inclina*

August 9. *Poll-Tax Bill passed by Natal Legislative Council.*

August 12. *Gandhi commended, in Indian Opinion, Lord Selborne's pro nouncement that administrative injustice to natives was a blot and a disgrace. Welcomed Natal legislature's rejection of Locations and Land Tax Bills, and the Transvaal Supreme Court's judgment permitting transfer of religious property in the name of coloured persons.*

August 14. *Denied, in letter to Haji Habib, that his lectures on religion were crit ical of any religion or intended to hurt anyone.*

August 19. *Called for united opposition to Bengal partition and supported boy cott of British goods.*

August 26. *Praised British Association for Advancement of Science and hoped it would one day meet in India; commented on Curzon's term of viceroyalty.*

August 30. *British Indian Association objected to application to Indians of*

To be continued...

Courtesy : Mahatma Gandhi A Chronology, Published by : Ministry of Information & Broadcasting, Govt. of India, Collection by : Dr. Poornima Jogi, N.S.S.

ಸಾಧಕರು

ಸಂಗ್ರಹ : ಶಾಮಲ, ಅಧ್ಯಾಪಕರು (ನಿ)

ದಿಟ್ಟೆ ಪೈಲಟ್ ಮೋನಿಕಾ ಖನ್ನಾ



ಪಾಟ್ನಾದಿಂದ ದೆಹಲಿಗೆ ಟೇಕ್ ಆಫ್ ಆದ ಕೂಡಲೇ ಸ್ಪೈಸ್‌ಜೆಟ್ ವಿಮಾನದ ಎಂಜಿನ್‌ನಲ್ಲಿ ಬೆಂಕಿ ಕಾಣಿಸಿಕೊಂಡಿತು. ಆದರೆ ಪೈಲಟ್-ಇನ್-ಕಂಟ್ರೋಲ್ ಮೋನಿಕಾ ಖನ್ನಾ ಜಾಣತನದಿಂದ ಫಸ್ಟ್ ಆಫೀಸರ್ ಬಲ್‌ಪ್ರೀತ್ ಸಿಂಗ್ ಭಾಟಿಯಾ ಸಹಾಯದಿಂದ ವಿಮಾನವನ್ನು ಪಾಟ್ನಾ ವಿಮಾನ ನಿಲ್ದಾಣದಲ್ಲಿ ಸುರಕ್ಷಿತವಾಗಿ ಇಳಿಸಿದರು. 19 ನಿಮಿಷಗಳ ಈ ಹಾರಾಟದಲ್ಲಿ ಪ್ರಯಾಣಿಕರಷ್ಟೇ ಅಲ್ಲ, ಎಲ್ಲರ ಉಸಿರು ನಿಂತಿತ್ತು. ಯಾವಾಗ ಕ್ಯಾಪ್ಟನ್ ಮೋನಿಕಾ ವಿಮಾನವನ್ನು ಪಾಟ್ನಾದಂತಹ ವಿಮಾನ ನಿಲ್ದಾಣದಲ್ಲಿ ಒಂದು ಇಂಜಿನ್‌ನಲ್ಲಿ ಸುರಕ್ಷಿತವಾಗಿ ಇಳಿಸಿದರೋ, ಎಲ್ಲರೂ ನೆಮ್ಮದಿಯ ನಿಟ್ಟುಸಿರು ಬಿಟ್ಟರು. ಸ್ಪೈಸ್ ಜೆಟ್ ಬೋಯಿಂಗ್ 737 ವಿಮಾನ 185 ಪ್ರಯಾಣಿಕರು 6 ಜನ ಸಿಬ್ಬಂದಿಯೊಂದಿಗೆ ಪಾಟ್ನಾದ ಜೈಪ್ರಕಾಶ್ ನಾರಾಯಣ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಿಂದ ದೆಹಲಿಯ ಐಜಿಐ ವಿಮಾನ ನಿಲ್ದಾಣಕ್ಕೆ ಹೊರಟಿತ್ತು. ಟೇಕಾಫ್ ಆದ ಕೂಡಲೇ ವಿಮಾನದ ಇಂಜಿನ್‌ಗೆ ಹಕ್ಕಿ ಡಿಕ್ಕಿ ಹೊಡೆಯಿತು. ಇದರಿಂದಾಗಿ ಬೆಂಕಿ ಹೊತ್ತಿಕೊಂಡಿತ್ತು. ವಿಮಾನದಿಂದ ಹೊಗೆ ಬರುತ್ತಿರುವುದನ್ನು ಕಂಡ ಕೆಲವರು ಏರ್ ಟ್ರಾಫಿಕ್ ಕಂಟ್ರೋಲ್‌ಗೆ ಮತ್ತು ಕ್ಯಾಪ್ಟನ್ ಮೋನಿಕಾ ಖನ್ನಾ ಅವರಿಗೂ ಮಾಹಿತಿ ನೀಡಿದ್ದಾರೆ. ಪ್ರಮಾಣಿತ ಕಾರ್ಯವಿಧಾನವನ್ನು ಅನುಸರಿಸಿ, ಅವರು ವಿಮಾನದ ಒಂದು ಎಂಜಿನ್ ಅನ್ನು ಸ್ಥಗಿತಗೊಳಿಸಿದರು. ಕ್ಯಾಪ್ಟನ್ ಮೋನಿಕಾ ಖನ್ನಾ ಇನ್ನೊಂದು ಇಂಜಿನ್‌ನಲ್ಲಿ ಮಾತ್ರ ವಿಮಾನ ಹಾರಿಸಿ ಪಾಟ್ನಾ ವಿಮಾನ ನಿಲ್ದಾಣಕ್ಕೆ ಹಿಂತಿರುಗಿ ವಿಮಾನವನ್ನು ಸುರಕ್ಷಿತವಾಗಿ ಇಳಿಸಿದ್ದರು. ಇದಕ್ಕಾಗಿ ಕ್ಯಾಪ್ಟನ್ ಮೋನಿಕಾ ಖನ್ನಾ ಮತ್ತು ಫಸ್ಟ್ ಆಫೀಸರ್ ಬಲ್‌ಪ್ರೀತ್ ಭಾಟಿಯಾ ಅವರನ್ನು ಸ್ಪೈಸ್‌ಜೆಟ್‌ನ ಫ್ಲೈಟ್ ಆಪರೇಷನ್‌ಗಳ ಮುಖ್ಯಸ್ಥ ಗುರುಚರಣ್ ಅರೋರಾ ಶ್ಲಾಘಿಸಿದ್ದಾರೆ. ಎಎನ್‌ಐ ಪ್ರಕಾರ, ಅಂತಹ ಒತ್ತಡದ ಸಮಯದಲ್ಲೂ ಅವರು ತಮ್ಮ ಸಂಯಮವನ್ನು ಕಳೆದುಕೊಳ್ಳದೆ ವಿಮಾನವನ್ನು ನಿರ್ವಹಿಸಿದ್ದಾರೆ. ಕ್ಯಾಪ್ಟನ್ ಮೋನಿಕಾ ನಿಜವಾಗಿಯೂ ಅದ್ಭುತಗಳನ್ನು ಮಾಡಿದ್ದಾರೆ ಎಂದು ಏರ್‌ಲೈನ್‌ನ ಹಿರಿಯ ಕಮಾಂಡರ್ ತಿಳಿಸಿದ್ದಾರೆ. ಒಂದೆಡೆ ಎತ್ತರದ ಮರ, ಇನ್ನೊಂದೆಡೆ ರೈಲು ಮಾರ್ಗವಿರುವ ಪಾಟ್ನಾವನ್ನು ಕಷ್ಟಕರವಾದ ವಿಮಾನ ನಿಲ್ದಾಣಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ.

ಸೌಜನ್ಯ : ನ್ಯೂಸ್ 18

ಮಕ್ಕಳ ತಾಯಿಯ ವಿಶ್ವದಾಖಲೆ

ಸಂಗ್ರಹ : ನಳಿನಾ ಡಿ.



ಪುಣೆಯ ಪ್ರೀತಿ ಮಾಸ್ಕೆ ಅಲ್ಟ್ರಾ ಸೈಕ್ಲಿಂಗ್‌ನಲ್ಲಿ ವಿಶ್ವ ದಾಖಲೆ ನಿರ್ಮಿಸುವ ಮೂಲಕ ಎಲ್ಲರ ಗಮನ ಸೆಳೆದಿದ್ದಾರೆ. ಅವರು ಲೇಹ್‌ನಿಂದ ಮನಾಲಿವರೆಗೆ 55 ಗಂಟೆ 13 ನಿಮಿಷಗಳಲ್ಲಿ ಏಕಾಂಗಿ ಸೈಕಲ್ ರೈಡ್ ಮಾಡಿದ್ದು, ಈ ಸಾಧನೆ ಮಾಡಿರುವ ಮೊದಲ ಮಹಿಳೆ ಎನಿಸಿಕೊಂಡಿದ್ದಾರೆ. 45 ವರ್ಷದ ಇಬ್ಬರು ಮಕ್ಕಳ ತಾಯಿ, ಪ್ರೀತಿ ಅವರು ಗಿನ್ನೆಸ್ ವಿಶ್ವ ದಾಖಲೆಗೆ ಬೇಕಾದ 430 ಕಿ.ಮೀ. ದೂರವನ್ನು ಕ್ರಮಿಸಿದ್ದಾರೆ. ಪ್ರೀತಿ 6,000 ಕಿ.ಮೀ. ದೂರವನ್ನು ಒಳಗೊಂಡಿರುವ ಸುವರ್ಣ ಚತುಷ್ಪಥ ಮಾರ್ಗದಲ್ಲಿ ಅತಿ ವೇಗದ ಮಹಿಳಾ ಸೈಕ್ಲಿಸ್ಟ್ ಎಂಬ ದಾಖಲೆ ಹೊಂದಿದ್ದಾರೆ. ಪ್ರೀತಿ ಅವರು ಜೂನ್ 22ರಂದು ಬೆಳಗ್ಗೆ 6 ಗಂಟೆಗೆ ಲೇಹ್‌ನಲ್ಲಿ ಗಡಿ ರಸ್ತೆ ಸಂಸ್ಥೆ(ಬಿಆರ್‌ಒ)ಯ ಅಧಿಕಾರಿಗಳ ಸಮ್ಮುಖದಲ್ಲಿ ಸೈಕ್ಲಿಂಗ್ ಆರಂಭಿಸಿ, ಜೂನ್ 24ರಂದು ಮಧ್ಯಾಹ್ನ 1.13ಕ್ಕೆ ಮನಾಲಿಯನ್ನು ತಲುಪಿದ್ದರು. ಪ್ರೀತಿ ಪಯಣದ ಮಧ್ಯೆ ಅತೀ ಎತ್ತರದ ರಸ್ತೆಯಾದ 17,582 ಫೀಟ್ ಎತ್ತರದಲ್ಲಿರುವ ತಗ್ಲಾಂಗಲಾವನ್ನು ದಾಟಿದ್ದಾರೆ. 'ಮಾರ್ಗ ಮಧ್ಯೆ ಉಸಿರಾಟದ ಸಮಸ್ಯೆಯಿಂದ 2 ಬಾರಿ ಆಕ್ಸಿಜನ್ ನೆರವು ಪಡೆದಿದ್ದರು. ಸಾಧಿಸುವ ಮನಸ್ಸು ಮಾಡಿದರೆ ಅದಕ್ಕೆ ವಯಸ್ಸು ಅಡ್ಡಿಯಾಗುವುದಿಲ್ಲ' ಎಂದು ಪ್ರೀತಿ ತಮ್ಮ ಅನುಭವಗಳನ್ನು ಬಿಚ್ಚಿಟ್ಟಿದ್ದಾರೆ.

ಸೌಜನ್ಯ : ಸುವರ್ಣ ನ್ಯೂಸ್

ನಿಮಗೆ ಯಾರು ಮುಖ್ಯ ಎಂಬುದನ್ನು, ನೀವು ಅವರನ್ನು ಕಳೆದುಕೊಳ್ಳುವ ತನಕ ತಿಳಿಯಲಾರಿರಿ!

ಆತ್ಮಸಾಕ್ಷಿ ವಿಷಯದಲ್ಲಿ ಬಹುಮತದ ಯಾವ ಕಾನೂನಿಗೂ ಜಾಗವಿಲ್ಲ !

ಯಾರು ಆತ್ಮಸಾಕ್ಷಿಗೆ ವಿರುದ್ಧವಾಗಿ ನಡೆದುಕೊಳ್ಳುರೋ, ಅವರು ನಾಯಕನಾದರೂ ನಿರುಪಯುಕ್ತನಾಗಿರುತ್ತಾರೆ!

– ಮಹಾತ್ಮ ಗಾಂಧಿ

History of Medival India

by Satish Chandra
Translated by Jeffrey Hopkins

Continued from previous edition...

India and the WorldThe thousand-year period between the eighth and the eighteenth century saw important changes in India and the world. New social and political forms rose in Europe as well as Asia. The new forms also had profound effects on the thinking and living patterns of the people. These changes also impacted India since India had long-standing trade and cultural relations with countries around the Mediterranean Sea, and the various empires that arose in the area, including the Roman and Persian empires.

GROWTH OF FEUDALISM

Apart from the system of feudalism, the pattern of life in Europe during what is called the medieval period was. also shaped by the Christian Church. We have already referred to the role of the Greek Orthodox Church in the Byzantine empire and in Russia. In the absence of a powerful empire in the West, the Catholic Church took on some of the functions of the government as well. The Pope, who was the head of the Catholic Church, became not only a religious head, but also a figure who exercised a great deal of political and moral authority. In Europe, as in West Asia and in India, the Medieval Age was an age of religion, and those who spoke on behalf of religion exercised a great deal of power and influence. With the help of grants of land from the princes and feud.al chiefs, and donations from rich merchants, many monastic orders and monasteries were set up. Some of these orders, such as that of the Franciscans, served the needy and the poor. Many monasteries gave medical help, or shelter to the travellers. They also served as centres for education, and learning. In this way, the Catholic Church played an important role in the cultural life of Europe. However, some of the monasteries which became exceedingly wealthy began to behave like feudal lords. This led to internal discord, and conflic_t with the rulers who resented the worldly power of the Church and of the Popes. This conflict was reflected in the Renaissance and Reform movements later on.

THE AHAB WORLD

The rise oflslam from the seventh century onwards was instrumentµ} in uniting the warring Arab tribes into a powerful empire. The-At;b empire founded by the early caliphs embraced, apart frorri Arabia, Syria, Iraq, Iran, Egypt, North Africa and Spain.Following internal differences and civil war among the Arab tribes, in the middle of the eighth century the caliph at Damascus was displaced, and a new dynasty, called the Abbasids came to power. They set up their capital at the newly founded city of Baghdad. The Abbasids claimed- to belong to the same tribe to which the Prophet Muhammad belonged, and were for that reasoh considered holy. For about 150 yea.rs the Abbasid empire was one of the most powerful and flourishing empires in the world. At its height, it included all the important centres of civilization in the area, viz., parts ofNorth Africa, Egypt, Syria, Iran and Iraq. The Abbasids controlled not only some of the most important regions ofWestAsia and North Africa but also commanded the important trade routes linking the Mediterranean world with India. The safety and security which the Abbasids provided to these trade routes was an important factor for the wealth and prosperity of the people in the area, and of the splendour and magnificence of the Abbasid court. The Arabs were keen merchants and quickly emerged as the most enterprising and wealthy merchants and seafarers in the world during the period. Numerous cities, with magnificent buildings, both private and public, arose. The standard of living and the cultural environment of the Arab towns could hardly be parallel in any country in the world during the period. The Arabs also established the gold dinar and the silver dirham which became the currency of trade all over the world. This was made possible by Arab access to African gold. The Arabs also established double entry book-keeping, advanced accountancy, and large scale and elaborate banking and credit, including bills of exchange (hundis). The most famous caliphs of this period were al-Mamun and Harun al-Rashid. The splendour of their court and their palaces, and of their patronage to men of science and learning, became subjects of numerous stories and legends. During The early period, the Arabs displayed a remarkable capacity of assimilating the scientific knowledge and administrative skills of the ancient civilizations they had overrun. For managing the administration, they had no hesitation in employing non-Muslims, such as Christians and Jews, and also non:..Arabs, particularly the Iranians, many of whom were Zoroastrians or even Buddhists.

To be continueed...

Courtacy : Orient Black Swan

ಬಾಪು ಪ್ರಪಂಚ ಜೂನ್ ಸಂಚಿಕೆಯಲ್ಲಿ ಕರ್ನಾಟಕದಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದವರ ಮಾಹಿತಿ, ರಾಯದುರ್ಗದ ಶಾಸನಗಳು, ಹಾಗು ಪರಿಸರ ಕುರಿತಾದ ಲೇಖನ ಅರ್ಥಪೂರ್ಣವಾಗಿ ಮೂಡಿಬಂದಿದೆ.

ಡಾ. ವಿ.ಎಸ್. ಪಾರ್ವತಿ

ಗಾಂಧಿ ಭವನದಿಂದ ಪ್ರಕಟಗೊಳ್ಳುತ್ತಿರುವ ಬಾಪು ಸಂಚಿಕೆಯಲ್ಲಿ ಗಾಂಧಿ ಅವರ ವ್ಯಕ್ತಿವಿಚಾರ, ನಾಡು ನುಡಿಗಾಗಿ ಸೇವೆಗೈದ ಮಹನೀಯರು ಮತ್ತು ಕೆಂಗಲ್ ಹನುಮಂತಯ್ಯ ಹಾಗೂ ಡಾ. ಸಿದ್ದಲಿಂಗಯ್ಯ ಅವರ ಲೇಖನಗಳು, ಸಾಧಕರು, ಆರೋಗ್ಯ ವಿಚಾರಧಾರೆ ಮತ್ತು ವಿಶೇಷ ಸುದ್ದಿಗಳು ಸಂಚಿಕೆಯ ಅಂದವನ್ನು ಹೆಚ್ಚಿಸಿವೆ.

ಡಾ. ಪರೀಕ್ಷಾ

ಬಾಪು ಸಂಚಿಕೆ ಜೂನ್ ತಿಂಗಳ ಪತ್ರಿಕೆಯಲ್ಲಿನ ಗಾಂಧಿ ವಿಚಾರಧಾರೆಗಳು, ವ್ಯಕ್ತಿ ವಿಶೇಷತೆ, ಸಾಮಾನ್ಯ ಜ್ಞಾನಕ್ಕೆ ಸಂಬಧಿಸಿದ ತುಣುಕು ಮಾಹಿತಿ, ವಿಶೇಷ ಪುಸ್ತಕಗಳ ಪರಿಚಯ, ಗಾಂಧಿ ಭವನವು ಹಮ್ಮಿಕೊಳ್ಳುತ್ತಿರುವ ಅರ್ಥಪೂರ್ಣ ಕಾರ್ಯಕ್ರಮಗಳು, ಸ್ವಾತಂತ್ರ್ಯ ಹೋರಾಟಗಾರರ ಭೇಟಿ ಇತ್ಯಾದಿಗಳು ಸಂಚಿಕೆಯನ್ನು ಪರಿಪೂರ್ಣಗೊಳಿಸಿವೆ.

ಮಹೇಶ್

ಆರೋಗ್ಯ, ಪರಿಸರ, ವಿವಿಧ ಕ್ಷೇತ್ರಗಳಲ್ಲಿನ ಸಾಧಕರು, ವ್ಯಕ್ತಿ ವಿಚಾರಗಳು, ಗಾಂಧಿ ತತ್ವಸಿದ್ಧಾಂತಗಳನ್ನು ತಮ್ಮಲ್ಲಿ ಅಳವಡಿಸಿಕೊಂಡು ಹೋರಾಟ ನಡೆಸಿದವರ ಪರಿಚಯವು ವಿಶೇಷವಾದದ್ದಾಗಿದೆ.

ಶಾಲಿನಿ

ಗಾಂಧಿ ಭವನದ ಪ್ರತಿಷ್ಠಿತ ಪ್ರಕಟಣೆಯಾದ ಬಾಪು ಪ್ರಪಂಚ ಗಾಂಧಿ ತತ್ತ್ವ ಸಿದ್ಧಾಂತಗಳ ಪರಿಚಯ, ಸಮಾಜಮುಖಿ ಧ್ಯೇಯೋದ್ದೇಶಗಳನ್ನು ಅಳವಡಿಸಿಕೊಂಡು, ಸೇವಾಮನೋಭಾವ ಮೆರೆದ ಮಹನೀಯರ ಜೀವನಶೈಲಿ, ವಿಶೇಷ ಪುಸ್ತಕಗಳ ಪರಿಚಯ, ನಾಡು ನುಡಿಗಾಗಿ ತಮ್ಮನ್ನು ಸಮರ್ಪಿಸಿಕೊಂಡವರ ಕುರಿತಾದ ಲೇಖನಗಳು ಹಾಗೂ ಇನ್ನಿತರ ಮಹತ್ವಪೂರ್ಣ ಲೇಖನಗಳೊಂದಿಗೆ ಸಂಚಿಕೆಯು ಹೊರಬರುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ.

ಡಾ. ಪೂರ್ಣಿಮ

ಇಂದಿನ ಜೀವನಶೈಲಿಯಲ್ಲಿ ಪುಸ್ತಕ ಹಾಗೂ ಪತ್ರಿಕೆಗಳನ್ನು ಓದುವ ಅಭ್ಯಾಸ ಕಡಿಮೆಯಾಗುತ್ತಿದ್ದು, ಡಿಜಿಟಲ್ ಯುಗವೆಂಬ ಮಂಕು ಕವಿದು ಅರ್ಥಪೂರ್ಣವಾದ ವಸ್ತು ವಿಷಯ, ಮಾಹಿತಿ, ವಿಷಯಾಧಾರಿತ ಲೇಖನಗಳನ್ನು ಅಂತರ್‌ಜಾಲದಲ್ಲಿ ಹುಡುಕಿ ಓದುವ ಸಮಯ, ತಾಳ್ಮೆ ಇಂದು ಇಲ್ಲವಾಗಿದೆ. ಈ ವಿಷಯಗಳನ್ನು ಎಲ್ಲರಿಗೂ ತಲುಪಿಸುವಲ್ಲಿ ಸಾಧ್ಯವಾಗದೇ ಇರುವ ಇಂದಿನ ಪರಿಸ್ಥಿತಿಯಲ್ಲಿ ಒಂದು ಉತ್ತಮ ಮಾಸ ಪತ್ರಿಕೆಯಾಗಿ ಬಾಪು ಪ್ರಪಂಚ ಹೊರಹೊಮ್ಮುತ್ತಿರುವುದು ಅಭಿನಂದನಾರ್ಹವಾಗಿದೆ.

ಡಾ. ಎಸ್.ಜಿ. ಸುಶೀಲಮ್ಮ

ವಕೀಲರಾದ ಅಖಿಲಾ ವಿದ್ಯಾಸಂದ್ರ ಅವರ 'ಭೂಮಿ ತಾಯಿಯ ರಕ್ಷಣೆ ನಮ್ಮ ಹೊಣೆ' ಲೇಖನದಲ್ಲಿ ನಮ್ಮ ಭವಿಷ್ಯದ ಪೀಳಿಗೆಗೆ ಭೂಮಿ ತಾಯಿ ರಕ್ಷಣೆ ಮಾಡಬೇಕಾದ ಅನಿವಾರ್ಯ ಸಂದರ್ಭವನ್ನು ಒತ್ತಿ ಹೇಳಿದೆ. ಈ ಭೂಮಿ ಮನುಷ್ಯನಿಗೆ ಎಲ್ಲವನ್ನೂ ಕೊಡುತ್ತದೆ. ಅದರ ರಕ್ಷಣೆ ಮಾಡಬೇಕಾದವನು ಹಾಳುಮಾಡುತ್ತಿದ್ದಾನೆನ್ನುವ ನೋವು ಇಲ್ಲಿದೆ. ಅಭಿನಂದನೆಗಳು.

ಸರ್ವೇಶ್ ಎಸ್. ಗೌಡ, ರಾಮನಗರ

ಬಾಪು ಸಂಚಿಕೆ ಪ್ರತಿ ಸಂಚಿಕೆಯಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು, ಕಸ್ತೂರ್‌ಬಾ, ಗಾಂಧಿ, ಅಂಬೇಡ್ಕರ್, ತಿಲಕರು, ಬಾಬು ಜಗಜೀವನರಾಂ, ಕೆಂಪೇಗೌಡರು, ಹಾಗೂ ಕನ್ನಡದ ಸಾಹಿತ್ಯ, ಸಂಸ್ಕೃತಿಗೆ ವಿಶೇಷವಾಗಿ ಸೇವೆಗೈದ ಗಣ್ಯರ ಪರಿಚಯಗಳೊಂದಿಗೆ ಪತ್ರಿಕೆ ವಿಶೇಷವಾದ ಮಾಹಿತಿಯನ್ನು ಓದುಗರಿಗೆ ಪರಿಚಯಿಸುತ್ತಿದೆ.

ಡಾ. ಹೆಚ್.ಎಸ್. ಸುರೇಶ್

ಜೂನ್ ತಿಂಗಳ ಸಂಚಿಕೆಯಲ್ಲಿ ಮಹಾತ್ಮ ಗಾಂಧಿ ಅವರ ದಕ್ಷಿಣ ಆಫ್ರಿಕ ಜೀವನ, ಕಸ್ತೂರ್‌ಬಾ ಅವರ ಲೇಖನ, ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿಯ ಹಲವು ಘಟ್ಟಗಳು, ಪ್ರಮುಖವಾದ ಪುಸ್ತಕಗಳ ಮಾಹಿತಿಯಲ್ಲದೆ ಸಾಧಕರು, ಪರಿಸರ, ಆರೋಗ್ಯವಲ್ಲದೆ ಗಾಂಧಿ ವಿಚಾರಧಾರೆಗಳ ಪ್ರಸರಣೆಗಾಗಿ ಗಾಂಧಿ ಭವನವು ಹಮ್ಮಿಕೊಳ್ಳುತ್ತಿರುವ ಕಾರ್ಯಕ್ರಮಗಳು ಹಾಗೂ ಧ್ಯೇಯೋದ್ದೇಶಗಳನ್ನು ಸಮಾಜಮುಖಿಯಾಗಿವೆ.

ಶಾಮಲಾ

ಜೂನ್ ಮಾಹೆಯ 'ಬಾಪು ಪ್ರಪಂಚ' ಪತ್ರಿಕೆ ಕೈಸೇರಿದಾಗ ಪ್ರತಿಯೊಂದು ಪುಟಗಳನ್ನು ಗಮನಿಸಲಾಯಿತು. ಸಹೃದಯ ಮನಸೂರೆಗೊಳ್ಳುವ ಲೇಖನಗಳಿರುವುದನ್ನು ಕಂಡು ಸಂತೋಷವಾಯಿತು. ಕಸ್ತೂರ್‌ಬಾ – ಗಾಂಧೀಜಿ ಅವರ ಕುಟುಂಬದ ಪರಿಚಯ ಮತ್ತು ಚಿತ್ರ ಗಮನ ಸೆಳೆಯಿತು. ಸಂಪಾದಕರಿಗೆ ಹಾಗೂ ಗಾಂಧಿ ಭವನಕ್ಕೆ ವಂದನೆಗಳು.

– ಡಾ. ಉದಯರವಿ, ಹಾಸನ

ನವ ಭಾರತ ನಿರ್ಮಾಪಕರ ಮಾಲಿಕೆಯ ಲೇಖನದಲ್ಲಿ ಶ್ರೀಮತಿ ಇಂದಿರಾ ಕೃಷ್ಣಪ್ಪ ಅವರು ಲೋಲಮಾನ್ಯ ತಿಲಕರ ಬರಹವು ಅವರ ಜೀವನಾನುಭವಗಳ ಅಂತರಂಗವನ್ನು ತೆರೆದಿರುವ ಪ್ರಯತ್ನ ಶ್ಲಾಘನೀಯವಾದುದು.

– ಡಾ. ಪೂರ್ಣಿಮಾ ಎಸ್.

ಶ್ರದ್ಧಾಂಜಲಿ : 'ಮಹಾನ್' ನಾಟಕಕಾರ ಪೀಟರ್ ಬ್ರೂಕ್ : 21.03.1925 – 02.07.2022



ಬ್ರಿಟನ್‌ನ ಹಿರಿಯ ರಂಗಭೂಮಿ ನಿರ್ದೇಶಕ, ಪದ್ಮಶ್ರೀ ಪುರಸ್ಕೃತ ಪೀಟರ್ ಬ್ರೂಕ್ 'ಮಹಾಭಾರತ' ಮಹಾಕಾವ್ಯವನ್ನು ವಿಶ್ವ ರಂಗಭೂಮಿಗೆ ಪರಿಚಯಿಸಿದವರು. ಬ್ರಿಟನ್‌ನ ಖ್ಯಾತ ರಂಗಭವನ ಬ್ರಾಡ್‌ವೇನ ಇರ್ಮಾ ಲಾ ಡೌಸ್, ಮರಾಟ್ ಸ್ಯಾಡೆ ನಾಟಕಗಳಿಂದ ಹಿಡಿದು ರಂಗಭೂಮಿಯಲ್ಲಿ ಹೊಸ ಪ್ರಯೋಗಗಳನ್ನು ನಡೆಸಿದ್ದರು. ಫ್ರೆಂಚ್ ಭಾಷೆಯಲ್ಲಿ ನಿರ್ಮಾಣವಾದ ಮಹಾಭಾರತ ನಾಟಕದ ಮೂಲಕ ಪೀಟರ್ ಬ್ರೂಕ್ ಅವರ ಕೊಡುಗೆಯನ್ನು ಪರಿಗಣಿಸಿ ಭಾರತ ಸರ್ಕಾರವು ಅವರಿಗೆ ಪದ್ಮಶ್ರೀ ಪುರಸ್ಕಾರವನ್ನು ನೀಡಿ ಗೌರವಿಸಿತ್ತು. ಬ್ರೂಕ್ ಅವರು ಸ್ಟ್ರಾಟ್‌ಫೋರ್ಡ್‌ನ ರಾಯಲ್ ಶೇಕ್ಸ್‌ಪಿಯರ್ ನಾಟಕ ಸಂಸ್ಥೆಯಲ್ಲಿ ನಿರ್ದೇಶಕರಾಗಿ, ರಂಗಕರ್ಮಿಯಾಗಿ 30ವರ್ಷಗಳಿಗೂ ಅಧಿಕ ಸಮಯ ಕೆಲಸ ಮಾಡಿದ್ದರು. ಹಲವಾರು ಸಂಗೀತ ಪ್ರಧಾನ ನಾಟಕಗಳನ್ನು ಕೂಡಾ ಬ್ರೂಕ್ ನಿರ್ದೇಶಿಸಿದ್ದರು. 1970ರಲ್ಲಿ ಬ್ರೂಕ್ ನಿರ್ದೇಶನದ ಶೇಕ್ಸ್‌ಪಿಯರ್ ವಿರಚಿತ ನಾಟಕ 'ಎ ಮಿಡ್‌ಸಮ್ಮರ್ ನೈಟ್ಸ್ ಡ್ರೀಮ್ಸ್' ಅವರಿಗೆ ಜನಪ್ರಿಯತೆಯನ್ನು ತಂದುಕೊಟ್ಟಿತ್ತು. ಇವಲ್ಲದೆ ಜಾನ್ ಗಿಲ್‌ಗುಡ್, ಲಾರೆನ್ಸ್ ಒಲಿವರ್, ಪೌಲ್ ಸ್ಕಾಟ್‌ಫೀಲ್ಡ್, ಆ್ಯಡ್ರಿಯನಾನ್ ಲೆಸ್ಟರ್ ಅವರ ನಾಟಕಗಳನ್ನು ರಂಭೂಮಿಗೆ ತಂದಿದ್ದರು. ಜುಲೈ 2 ರಂದು ಪ್ಯಾರಿಸ್‌ನಲ್ಲಿ ನಿಧನರಾದ ವಿಶ್ವಮಾನ್ಯ ನಾಟಕಕಾರ ಪೀಟರ್ ಬ್ರೂಕ್ ಅವರಿಗೆ ಗಾಂಧ ಭವನವು ಶ್ರದ್ಧಾಂಜಲಿ ಅರ್ಪಿಸುತ್ತದೆ.


ಗಾಂಧಿ ಭವನದ ಕಾರ್ಯಕ್ರಮಗಳು



ಗಾಂಧಿ ಭವನದಲ್ಲಿ ದಿ. 18.06.2022 ರಂದು ತಮಿಳುನಾಡು ಪಠ್ಯಪುಸ್ತಕ ಮತ್ತು ಶೈಕ್ಷಣಿಕ ಸೇವಾ ನಿಗಮದ ವತಿಯಿಂದ ತಮಿಳು ಗಾಂಧಿ ಸಾಹಿತ್ಯದ ಕನ್ನಡ ಅವತರಣಿಕೆಯ ಲೋಕಾರ್ಪಣೆಯಲ್ಲಿ ಅಧ್ಯಕ್ಷತೆ ವಹಿಸಿದ ಕ.ಗಾಂ.ಸ್ಮಾ.ನಿಧಿ ಗೌ.ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಡಾ. ಜಿ. ರಾಮಕೃಷ್ಣ, ಎಸ್. ದಿವಾಕರ್, ಕೆ. ನಲ್ಲತಂಬಿ, ವಿ.ಎಸ್.ಶ್ರೀಧರ್, ಪಾವಣ್ಣನ್ ಮತ್ತು ಲಡಾಯಿ ಪ್ರಕಾಶನದ ಬಸು ಅವರು ಇದ್ದಾರೆ.




ಗಾಂಧಿ ಅಧ್ಯಯನ ಕೇಂದ್ರ ಶೇಷಾದ್ರಿಪುರಂ ಕಾಲೇಜಿನಲ್ಲಿ ದಿ. 18.06.2022ರಂದು ವರ್ತಮಾನ ಭಾರತ ಮತ್ತು ಗಾಂಧಿ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಡಾ. ವಿಕ್ರಂ ವಿಸಾಜಿ, ಜೇರಿಗೆ ಲೋಕೇಶ್, ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಗಾಂಧಿ ಭವನದ ಅಧ್ಯಕ್ಷರಾದ ಡಾ. ವೂಡೇ ಪಿ. ಕೃಷ್ಣ, ಡಾ. ಸತ್ಯಮಂಗಲ ಮಹಾದೇವ ಮತ್ತೆಲ್ಲರೂ ಇದ್ದಾರೆ.






ಗಾಂಧಿ ಭವನದಲ್ಲಿ ದಿ. 22.06.2022ರಂದು ನಡೆದ ರಾಜ್ಯ ಮಟ್ಟದ ಸ್ವಯಂ ಸೇವಾ ಸಂಸ್ಥೆಗಳ ಸಮಾವೇಶವನ್ನು ಕರ್ನಾಟಕದ ಮುಖ್ಯಮಂತ್ರಿ ಸನ್ಮಾನ್ಯ ಬಸವರಾಜ ಬೊಮ್ಮಾಯಿ ಅವರು ಉದ್ಘಾಟಿಸಿದರು. ಚಿತ್ರದಲ್ಲಿ ಸುಮಂಗಲಿ ಸೇವಾಶ್ರಮದ ಸುಶೀಲಮ್ಮ, ಸಚಿವರಾದ ಮುರುಗೇಶ್ ನಿರಾಣಿ, ಲೋಕಸಭಾ ಸದಸ್ಯರಾದ ಶೋಭಾ ಕರಂದ್ಲಾಜೆ, ಡಾ. ಸಿ.ಸೋಮಶೇಖರ್, ಗಾಂಧಿ ಭವನದ ಅಧ್ಯಕ್ಷರಾದ ಡಾ. ವೂಡೇ ಪಿ. ಕೃಷ್ಣ ಮತ್ತು ಹೆಚ್.ಜಿ. ಶೋಭಾ ಅವರಿದ್ದಾರೆ.





ದಕ್ಷಿಣ ಭಾರತದ ಗಾಂಧಿ ಸ್ಮಾರಕ ನಿಧಿ ಸಮಿತಿಗಳ ಪದಾಧಿಕಾರಿಗಳ ಸಮ್ಮೇಳನವನ್ನು ದಿ. 25 – 26ನೇ ಜೂನ್ 2022ರಂದು ಉಸ್ಮಾನಿಯ ವಿಶ್ವವಿದ್ಯಾಲಯ, ಹೈದ್ರಾಬಾದ್‌ನಲ್ಲಿ ನಡೆಸಿದ ಸಂದರ್ಭದ ಚಿತ್ರದಲ್ಲಿ ಕೇ.ಗಾಂ.ಸ್ಮಾ.ನಿಧಿ. ಅಧ್ಯಕ್ಷರಾದ ರಾಮಚಂದ್ರರಾಹಿ, ಭೂದಾನ ಜಿ.ವಿ.ಸುಬ್ಬರಾವ್, ಪ್ರೊ. ಕೆ. ಸೀತಾರಾಮರಾವ್, ಉಪಕುಲಪತಿಗಳು, ಅಂಬೇಡ್ಕರ್ ಮುಕ್ತ ವಿಶ್ವವಿದ್ಯಾಲಯ, ಕೆ.ಪಿ.ಸಿ. ಗಾಂಧಿ, ಅಣ್ಣಾಮಲೈ, ನಿರ್ದೇಶಕರು, ಗಾಂಧಿ ರಾಷ್ಟ್ರೀಯ ವಸ್ತು ಸಂಗ್ರಹಾಲಯ ಕೆ.ವಿ. ರಮಣ ಮತ್ತು ಮಾತನಾಡುತ್ತಿರುವವರು ಡಾ. ವೂಡೇ ಪಿ ಕೃಷ್ಣ, ಅಧ್ಯಕ್ಷರು, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಮತ್ತೆಲ್ಲರೂ ಇದ್ದಾರೆ.

ಗಾಂಧಿ ಭವನದ ಕಾರ್ಯಕ್ರಮಗಳು





ಮುಧೋಳದಲ್ಲಿ ಚಿಂತನಸಿರಿ ವೇದಿಕೆ ಹಾಗೂ ಗಾಂಧಿ ಅಧ್ಯಯನ ಕೇಂದ್ರದವರು ದಿ. 26.06.2022ರಂದು ಆಯೋಜಿಸಿದ್ದ ಹಿರಿಯ ಗಾಂಧೀವಾದಿ ತಮ್ಮಣ್ಣಪ್ಪ ಬುದ್ನಿ ಅವರ ಸನ್ಮಾನ ಮತ್ತು ತತ್ವಾದರ್ಶಿ ಅಭಿನಂದನಾ ಗ್ರಂಥ ಬಿಡುಗಡೆಯಲ್ಲಿ ಲೆಫ್ಟಿನೆಂಟ್ ರಮೇಶ್ ಹಲಗಲಿ, ಮಂಗೇಶ್ ಭೇಂಡೆ, ಡಾ. ಶಿವಾನಂದ ಕುಬಸದ, ಡಾ. ಎಂ.ಆರ್. ದೇಸಾಯಿ, ಲಕ್ಷ್ಮೀಬಾಯಿ ತಮ್ಮಣ್ಣಪ್ಪ ಬುದ್ನಿ, ಶಂಕರ ಉತ್ತೂರ, ರಮೇಶ್ ಅಣ್ಣಿಗೇರಿ ಮತ್ತಿತರರು ಇದ್ದಾರೆ.






ಶೇಷಾದ್ರಿಪುರಂ ಇನ್ಸಿಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್ ಮತ್ತು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅವರು ದಿ.29.06.2022ರಂದು ಆಯೋಜಿಸಿದ್ದ ಕಸ್ತೂರ್‌ಬಾ ಗಾಂಧಿ ವಿಶೇಷ ಉಪನ್ಯಾಸ ಮತ್ತು ನಮ್ಮ ಗಾಂಧಿ ಭಾಷಣ ಸ್ಪರ್ಧೆಯಲ್ಲಿ ಕ.ಗಾಂ.ಸ್ಮಾ.ನಿಧಿ ಅಧ್ಯಕ್ಷರಾದ ಡಾ. ವೂಡೇ ಪಿ. ಕೃಷ್ಣ, ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಪ್ರಿನ್ಸಿಪಾಲರಾದ ಡಾ. ಪ್ರೇಮಾ ಸಿದ್ದರಾಜು, ಡಾ. ಎಸ್. ರಾಮಲಿಂಗೇಶ್ವರ, ಪ್ರೊ. ಕೆ.ಪಿ. ನರಸಿಂಹಮೂರ್ತಿ, ಪ್ರೊ. ವಿದ್ಯಾ ಶಿವಣ್ಣನವರ್, ಡಾ. ಪೂರ್ಣಿಮಾ ಹಾಗೂ ಶೇಷಾದ್ರಿಪುರಂ ಕಾಲೇಜಿನ ಶಿಕ್ಷಕ ವೃಂದ ಹಾಗೂ ವಿದ್ಯಾರ್ಥಿಗಳು ಇದ್ದಾರೆ.



ಗಾಂಧಿ ಭವನಕ್ಕೆ ದಿ. 30.06.2022ರಂದು ಆಂಧ್ರ ಪ್ರದೇಶದ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಶತಾಯುಷಿ ಧಾನೇಧಾರ್ ಚಿನರಾಜನ್ ಅವರು ಆಗಮಿಸಿದ ಸಂದರ್ಭದಲ್ಲಿ ಕ.ಗಾಂ.ಸ್ಮಾ.ನಿಧಿ ಅಧ್ಯಕ್ಷರಾದ ಡಾ. ವೂಡೇ ಪಿ. ಕೃಷ್ಣ ಅವರು ಗೌರವಿಸಿದರು. ಚಿತ್ರದಲ್ಲಿ ಇಂದಿರಾ ಕೃಷ್ಣಪ್ಪ, ಉಪಾಧ್ಯಕ್ಷರಾದ ವಿಶುಕುಮಾರ್, ಕಲ್ಲೂರ್ ಹಾಗೂ ಸಿಬ್ಬಂದಿ ವರ್ಗ ಮತ್ತು ಸ್ವಾತಂತ್ರ್ಯ ಹೋರಾಟಗಾರರ ಬಳಗದವರು ಇದ್ದಾರೆ.



ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಟಿ. ದಾಸರಹಳ್ಳಿಯ ಗಾಂಧಿ ಅಧ್ಯಯನ ಕೇಂದ್ರದ ವತಿಯಿಂದ ಗಾಂಧಿ ಭವನದಲ್ಲಿ ದಿ.22.06.2022ರಂದು ಸರ್ವೋದಯ ಕಾರ್ಯಕರ್ತೆ ಸುಶ್ರೀ ಗಂಗಾಲಕ್ಷ್ಮಿ, ಸುಶ್ರೀ ಚೆನ್ನಮ್ಮ ಹಳ್ಳಿಕೇರಿ ಅವರಿಗೆ ಗೌರವಾರ್ಪಣೆ ಮಾಡಿದ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಎನ್. ಆರ್. ವಿಷುಕುಮಾರ್, ಎಚ್.ಆರ್.ಸುಜಾತಾ ಅಬಿದಾ ಬೇಗಂ ಮತ್ತೆಲ್ಲರೂ ಇದ್ದಾರೆ.



ಗಾಂಧೀ ಭವನಕ್ಕೆ ದಿ.01.07.2022ರಂದು ಬಿಹಾರ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾದ ಶ್ರೀ ಪ್ರಭಾಕರ್ ಕುಮಾರ್ ಅವರು ಆಗಮಿಸಿದ ಸಂದರ್ಭದಲ್ಲಿ ಕಾರ್ಯದರ್ಶಿ, ಇಂದಿರಾ ಕೃಷ್ಣಪ್ಪ ಅವರು, ಅವರನ್ನು ಗೌರವಿಸಿದರು. ಚಿತ್ರದಲ್ಲಿ ಕ.ಗಾಂ.ಸ್ಮಾ.ನಿಧಿ ಸಿಬ್ಬಂದಿಗಳಿದ್ದಾರೆ.



ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಗಳವರ ಕಚೇರಿಯಲ್ಲಿ ದಿ.01.07.2022ರಂದು 'ಜ್ಞಾನ ವೃಕ್ಷ' ಕಾರ್ಯಕ್ರಮದ ಉದ್ಘಾಟನೆಯನ್ನು ಅಪರ ಜಿಲ್ಲಾಧಿಕಾರಿ ವಿಜಯ ಈ. ರವಿಕುಮಾರ್ ನೆರವೇರಿಸಿದ ಸಂದರ್ಭದಲ್ಲಿ ಡಾ. ವಿ. ಪ್ರಶಾಂತ, ಜಿ.ಎನ್. ವಿಶ್ವಾಸ್‌ಗೌಡ, ಕೆ.ಎನ್. ರವಿಕುಮಾರ್, ಎನ್. ಮಹೇಂದ್ರ, ಆರ್. ಅನಿಲ್, ಮತ್ತು ಆರ್.ಅನಿಲ್ ಪ್ರಜ್ವಲ್ ಕೆ.ಎಸ್ ಇದ್ದಾರೆ.

ಪತ್ರಿಕಾ ವರದಿಗಳು



ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕದ ಪಾತ್ರ

ಗಾಂಧೀಜಿ ಹೋರಾಟ ಸ್ಮರಿಸುವ ಬೆಂಗಳೂರಿನ ಗಾಂಧಿಭವನ

ಮಹಾತ್ಮ ಗಾಂಧೀಜಿ ಭಾಷಣ ಮಾಡುತ್ತಿದ್ದ ಜಾಗದಲ್ಲೇ ಭವನ ನಿರ್ಮಾಣ | ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿ ತುಂಬಿದ ಜಾಗ

ಶ್ರೀಕಾಂತ್. ಎಸ್. ಗೌಡಸಂದ್ರ

India 75 ಸ್ವಾತಂತ್ರ್ಯದ ಅಮೃತ ಮಹೋತ್ಸವಕ್ಕೆ 43 ದಿನ



ತಲುಪುವುದು ಹೇಗೆ?

ವಿಜಯ ಕರ್ನಾಟಕ VK

ಬುಧವಾರ 22.6.202

...ದ್ರಿಪುರಂ ಶಿಕ್ಷಣ ದತ್ತಿ ಸಭಾಂಗಣದಲ್ಲಿ ಗಾಂಧೀ ...ಪ್ರತಿಷ್ಠಾನ, ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ...ರ ಬಾಪು ಚಿಂತನ, ಶೇಷಾದ್ರಿಪುರಂ ಸಂಜೆ ಪದವಿ ...ೇಜು ಮತ್ತು ಗಾಂಧೀ ಅಧ್ಯಯನ ಕೇಂದ್ರ ...ಯೋಜಿಸಿದ್ದ 'ವರ್ತಮಾನ ಭಾರತ ಮತ್ತು ಗಾಂಧಿ' ...ಚಾರ ಸಂಕಿರಣವನ್ನು ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ...ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ಉದ್ಘಾಟಿಸಿದರು. ...ಬುರಗಿಯ ಕರ್ನಾಟಕ ಕೇಂದ್ರೀಯ ವಿವಿಯ ...ಗಾಂಧೀ ಶಾಂತಿ ... ಉಪಸ್ಥಿತರಿದ್ದರು.

ಬುದ್ನಿ ಜೀವನ ಅನುಕರಣೀಯ'

ಜಾವಾಣಿ ವಾರ್ತೆ

ಮುಧೋಳ: 'ಭವ್ಯ ಭಾರತದ ಅಭಿವೃದ್ಧಿ ಗ್ರಾಮಗಳಲ್ಲಿ ಅಡಗಿದ್ದು ...ಪುಗಳು ಸಮೃದ್ಧಿಯಾಗಬೇಕು ಎನ್ನುವ ಗಾಂಧಿ ತತ್ವಾದರ್ಶಗಳ ...ಜತೆಗೆ ಹೊರಟ ತಮ್ಮಣ್ಣಪ್ಪ ಬುದ್ನಿ ...ಜೀವನ ಅನುಕರಣೀಯ' ಎಂದು ...ಭಾರತೀಯ ಸೇನೆಯ ನಿವೃತ್ತ ಮಹಾ ...ದಂಡನಾಯಕ ರಮೇಶ ಹಲಗಲಿ ...ಹೇಳಿದರು.

ಭಾನುವಾರ ಚಿಂತನ ಸಿರಿ ...ತಿಯಿಂದ ನಗರದ ಕವಿಚಕ್ರವರ್ತಿ ...ನ್ನ ಸಾಂಸ್ಕೃತಿಕ ಭವನದಲ್ಲಿ ನಡೆದ ...ಗಾಂಧಿವಾದಿ ತಮ್ಮಣ್ಣಪ್ಪ ಬುದ್ನಿಯವರಿಗೆ ...ಚಿನ್ನವತ್ತಳೆ' ಸಮರ್ಪಣೆ ಹಾಗೂ ...ತತ್ವಾದರ್ಶಿ' ಅಭಿನಂದನಾ ಗ್ರಂಥ ...ಬಿಡುಗಡೆ ಕಾರ್ಯಕ್ರಮದಲ್ಲಿ ...



ಮುಧೋಳದ ಚಿಂತನ ಸಿರಿ ವತಿಯಿಂದ ನಗರದ ಕವಿಚಕ್ರವರ್ತಿ ರನ್ನ ಸಾಂಸ್ಕೃತಿಕ ಭವನದಲ್ಲಿ ನಡೆದ ಗಾಂಧಿವಾದಿ ತಮ್ಮಣ್ಣಪ್ಪ ಬುದ್ನಿಯವರಿಗೆ ಚಿನವತ್ತಳೆ ... ಹಾಗೂ 'ತತ್ವಾದರ್ಶಿ' ಅಭಿನಂದನಾ ಗ್ರಂಥ ... ಡಾ.ಶಿವಾನಂದ ...

ಮಂಜುಳಾ ಸಂಬಾಳಮಠ ಲೋಕಾಪುರ ಹಾಗೂ ಸಂಗಡಿಗರಿಂದ ಗಾಂಧಿ ಭಜನ್ ಜರುಗಿತು.

ಅಧ್ಯಕ್ಷತೆಯನ್ನು ವಹಿಸಿದ ಚಿಂತನಸಿರಿ ಗೌರವಾಧ್ಯಕ್ಷ ಡಾ.ಎಂ. ಆರ್. ದೇಸಾಯಿ, ಲಕ್ಷ್ಮೀಬಾಯಿ ತಮ್ಮಣ್ಣಪ್ಪ ಬುದ್ನಿ, ಸರ್ವೋದಯ ಕಾರ್ಯಕರ್ತ ಶಂಕರ ಉತ್ತೂರ ಮಾತನಾಡಿದರು. ಡಾ.ಸಂಗಮೇಶ ಕಲ್ಯಾಣಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಚಿಂತನ ಸಿರಿ ಅಧ್ಯಕ್ಷ ಡಾ. ಶಿವಾನಂದ ಕುಬಸದ ಚಿನ್ನವತ್ತಳೆ ಸಮರ್ಪಣೆ ಮಾಡಿದರು.

ಕಾರ್ಯಕ...

ಭಾರತೀಯ ಸಂಸ್ಕೃತಿಗೆ ಸಿಕ್ಕ ದೊಡ್ಡ ಗೌರ...



ವೈದ್ಯ ಡಾ.ವೈ.ರುದ್ರಪ್ಪ ರಚಿಸಿದ ಸ್ವಾಸ್ಥ್ಯ ಮತ್ತು ಯೋ... ಪುಸ್ತಕವನ್ನು ಶ್ರೀಗಳು, ರಾ... ಶೇಖರ್, ವೂಡೇ ಪಿ.ಕೃಷ್ಣ ಡಾ. ಚೇತನ್ ಕುಮಾರ್ ಬಿಡುಗಡೆ ಮಾಡಿದರು.

...ಕ ನೆಲಮಂಗಲ ಗ್ರಾ: ... 21ರಂದು ಯೋಗ ದಿನಾಚರಣೆ ...ವುದು ಭಾರತೀಯ ಸಂಸ್ಕೃತಿ ಸಿಕ್ಕ ... ಎಂದು ಸೋಲೂರಿನ ಆರ್ಯ ...ನ ಶ್ರೀ ವಿಖ್ಯಾತನಾಂದ ಸ್ವಾಮೀಜಿ ...

ಅಸ್ತಮಾ ರೋಗಿಯಾಗಿದ್ದ ನಾನು, ಸೂ... ನಮಸ್ಕಾರ ಕಲಿತು ಇಂದು ನಿರೋಗಿಯಾಗಿ ... ಎಂದರು.

ಧರ್ಮಸ್ಥಳ ಯೋಗ ಮತ್ತು ನಿಸರ್ಗ ... ಆಸ್ಪತ್ರೆಯ ಸಂಸ್ಥಾಪಕ ... ಡಾ.ವೈ... ...ದಲ್ಲಿ ... ...ತ್ತಿದ್ದರು.

ಬೆಂಗಳೂರು ಗ್ರಾ. ರಾಮನಗರ

ಬುಧವಾರ 22.6.2022 ಬೆಂಗಳೂರು

...ಲು ಯೋಗ ಸಹಕಾರಿ

...ಶ್ರೀವಿಖ್ಯಾತಾನಂದ ಸ್ವಾಮೀಜಿ ಅಭಿಮತ

ಕನ್ನಡಪ್ರಭ

ಮಾನವೀಯತೆ ಜಾಗೃತಗೊಳಿಸಲು ಯೋಗ ಸಹಕಾರಿ

ವಿಶ್ವ ಯೋಗ ದಿನಾಚಾರಣೆ ಉದ್ಘಾಟನಾ ಕಾರ್ಯಕ್ರಮದಲ್ಲಿ ಆರ್ಯ ಈಡಿಗ ಸಂಸ್ಥಾನ ಮಠದ ಶ್ರೀವಿಖ್ಯಾತಾನಂದ ಸ್ವಾಮೀಜಿ ಅಭಿಮತ

• ಕನ್ನಡಪ್ರಭ ವಾರ್ತೆ ಕುದೂರು





ಪ್ರಜಾವಾಣಿ

ಬುಧವಾರ • ಜೂನ್ 22, 2022

ಸೋಲೂರಿನ ವಿಖ್ಯಾತಾನಂದ ಸ್ವಾಮೀಜಿ ವಿಷಾದ

ಪರರ ನಿಂದನೆಯಲ್ಲೇ ಸಮಯ ವ್ಯರ್ಥ

ಪ್ರಜಾವಾಣಿ ವಾರ್ತೆ



ಮಾಗಡಿ ತಾಲ್ಲೂಕಿನ ಸೋಲೂರು ಗ್ರಾಮದ ಆರ್ಯ ಈಡಿಗರ ಮಹಾಸಂಸ್ಥಾನ ಮಠದ ಆವರಣದಲ್ಲಿ ಬ್ರಿಲಿಯಂಟ್ ವ್ಯಾಲಿ ಶಾಲೆ ಮತ್ತು ಎಂಆರ್‌ಆರ್ ಆಸ್ಪತ್ರೆ ಸಹಯೋಗದಡಿ ಅಂತರರಾಷ್ಟ್ರೀಯ ಯೋಗ ದಿನಾಚರಣೆ ನಡೆಯಿತು

40 ಸಾವಿರ ಎನ್‌ಎಸ್‌ಎಸ್ ಘಟಕ'

ಪ್ರಜಾವಾಣಿ ವಾರ್ತೆ

ಹೊಳೆನರಸೀಪುರ: 'ರಾಜ್ಯದಲ್ಲಿ 40 ಸಾವಿರ ಎನ್‌ಎಸ್‌ಎಸ್ ಘಟಕಗಳಿದ್ದು, ... ಲಕ್ಷ ಸದಸ್ಯರಿದ್ದಾರೆ' ಎಂದು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಯೋಜನೆಯ ಗೌರವ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ತಿಳಿಸಿದರು.



ಹೊಳೆನರಸೀಪುರ ಸರ್ಕಾರಿ ಗೃಹ ವಿಜ್ಞಾನ ಕಾಲೇಜಿನಲ್ಲಿ ಬುಧವಾರ ಆಯೋಜಿಸಿದ್ದ ಕಾರ್ಯಕ್ರಮವನ್ನು ಇಂದಿರಾ ಕೃಷ್ಣಪ್ಪ ಉದ್ಘಾಟಿಸಿದರು. ಡಾ.ಎಸ್.ರಾಮಲಿಂಗೇಶ್ವರ, ... ಡಾ.ಬಿ.ಜಯಲಕ್ಷ್ಮಿ, ಪ್ರೇಮಾ ಮಂಜುನಾಥ್, ... ಇಂದು ಇದ್ದಾರೆ

ಸ್ವಾತಂತ್ರ್ಯ ಹೋರಾಟಗಾರ ಬಸವಲಿ...



ನಾಗರಮುನ್ನೋಳಿ (ಬೆಳಗಾವಿ): ಸ್ವಾತಂತ್ರ್ಯ ಹೋರಾಟಗಾರ, ನಿವೃತ್ತ ಶಿಕ್ಷಕರಾದ ಬಸವಲಿಂಗಪ್ಪ ...ರುದ್ರಪ್ಪ ಕುಂಬಾರ (101) ...ರು ಶನಿವಾರ ರಾತ್ರಿ ನಿಧನರಾದರು. ...ವರಿಗೆ ಪತ್ನಿ ಕೃಷ್ಣಾಬಾಯಿ, ...ನಾಯು ತಜ್ಞ ಡಾ.ಎಂ. ...ರ ಸೇರಿದಂತೆ ...

ಶಿಕ್ಷಣವನ್ನು ಅಲ್ಲಿಯೇ ... ಅವರು ತಮ್ಮ 22ನೇ ... ರಾಯಬಾಗದಲ್ಲಿ ಮರಾಠಿ ... ಶಿಕ್ಷಕರಾಗಿ ಸೇವೆ ಆರಂ... ನಂತರ ನಾಗರಾಳ, ಬಾವಚಿ, ...ನಾಳ, ಪಂಚರಗಾವಹಟ್ಟಿಯಲ್ಲಿ ... ಶಾಲೆ ಶಿಕ್ಷಕರಾಗಿದ್ದರು.

1944 ಹಾಗೂ 45ರಲ್ಲಿ ... ಜಿಲ್ಲೆಯಲ್ಲಿ ನಡೆದ ... ಹೋರಾಟದಲ್ಲಿ ಅವರು ...ವಾಗಿ ಪಾಲ್ಗೊಂಡರು. ಆಗಿನ ... ಸಮುದಾಯವನ್ನು ... ಸಂಗ್ರಾಮಕ್ಕೆ ಸೆಳೆಯುವಲ್ಲಿ ಯಶಸ್ವಿ...ಗಿದ್ದರು. ರಾಯಬಾಗ ತಾಲ್ಲೂಕಿ... 'ಕುಂಬಾರಜ್ಜ' ಎಂದೇ ಅವರು ...ವಾಸಿ.

ಸ್ವಾತಂತ್ರ್ಯದ ನಂತರ ಸಾಮಾ... ಹಾಗೂ ಧಾರ್ಮಿಕ ಚಟುವಟಿಕೆಗ... ...ವರು ತೊಡಗಿಸಿಕೊಂಡಿದ್ದರು.

ಸಾಲುಮರದ ತಿಮ್ಮಕ್ಕ ಜನ್ಮದಿನದ ಅಂಗವಾಗಿ ಸಸಿ ನೆಡುವ ಕಾರ್ಯಕ್ರಮ

ವಿಜಯಪುರ, ಜು.1 – ವಿಶ್ವದಲ್ಲಿ ಮರಗಳೇ ನನ್ನ ಮಕ್ಕಳೆಂದು ಹೇಳಿದವರು ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಎಂದು ರಾಷ್ಟ್ರೀಯ ಯುವ ಯೋಜನೆಯ ರಾಜ್ಯ ಸಂಯೋಜಕ ಡಾ.ವಿ.ಪ್ರಶಾಂತ ತಿಳಿಸಿದರು.

ವಿಜಯಪುರ ಸಮೀಪದ ಗೊಡ್ಡು ಮುದ್ದೇನಹಳ್ಳಿ ಗ್ರಾಮದ ನಮ್ಮೂರ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆಯ ಆವರಣದಲ್ಲಿ ಕರ್ನಾಟಕ ವಲಯದ ರಾಷ್ಟ್ರೀಯ ಯುವ ಯೋಜನೆ, ಬೆಂಗಳೂರಿನ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಬೆಂಗಳೂರು, ಜೇಸಿಐ ದೇವನಹಳ್ಳಿ ಡೈಮಂಡ್ ಹಾಗೂ ಗೊಡ್ಡುಮುದ್ದೇನಹಳ್ಳಿ ಗ್ರಾಮದ ಬೆಣಕ ಗೆಳೆಯರ ಬಳಗ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾದ ವೃಕ್ಷಮಾತೆ ಪದ್ಮಶ್ರೀ ನಾಡೋಜ ಡಾ. ಸಾಲುಮರದ ತಿಮ್ಮಕ್ಕನವರ 111ನೇ ಜನ್ಮ ದಿನದ ಸಂಭ್ರಮಾಚರಣೆಯ ಅಂಗವಾಗಿ ...



ಕಾರ್ಯ ಮಾಡಿದವರು ಎಂದು ತಿಳಿಸಿದರು.

ಜೇಸಿಐ ದೇವನಹಳ್ಳಿ ಡೈಮಂಡ್ ಉಪಾಧ್ಯಕ್ಷ ಜೆ.ಎನ್. ಪ್ರಶಾಂತ್ ಕುಮಾರ್ ಮಾತನಾಡಿ, ಹಸಿರೇ ಉಸಿರು ನಾವು ಪರಿಸರವನ್ನು ಸಂರಕ್ಷಿಸಿದರೆ ಪರಿಸರ ನಮ್ಮನ್ನು ರಕ್ಷಿಸುತ್ತದೆ ಆದ್ದರಿಂದ ಪ್ರತಿಯೊಬ್ಬರೂ ಪರಿಸರ ಸಂರಕ್ಷಣೆಗಾಗಿ ಸೂಕ್ತ ಸ್ಥಳಗಳಲ್ಲಿ ...

ಪುಸ್ತಕ ವಿಭಾಗ

(ಪ್ರಸಿದ್ಧ ಕೃತಿಗಳ ಸಂಕ್ಷಿಪ್ತ ಭಾಗ ನಿಯತವಾಗಿ ಬರಲಿವೆ)

Bengaluru Through the Centuries

by M. Fazlul Hasan,

Local history has received little attention in our country. Many cities in India have a fascinating historical background. But only a few books have been written about them. The Gazetteers, though re-written in recent years, give only brief accounts of places of local importance. The emphasis, in these accounts, is more on the historical aspect than on the cultural and social life of the times they deal with. Bangalore has a singular charm of arousing the interest of both Indians and foreigners in its chequered history. Its strategic position has played a great part in influencing the history of peninsular India. Its salubrious climate, which has attracted people from all over the country and abroad, is largely instrumental in leading it to its present prosperity. It is interesting to know that Bangalore had been a pawn on the chess board of Indian intrigues.


THE HEROIC LAND

While affairs were on a slow move in the south, momentous events had taken place in the north. The great Shivaji was dead. He was succeeded by his son Sambaji to the Maratha throne. Aurangazeb, who previously held the office of Mughal Subcdar in the Deccan and while: in that office dreamed to build a vast empire extending from the Himalayas to the south shores, was now on the Delhi throne He knew well th'1t the wealth of the Deccan would afford him, opportunity to realise his ambition. After the eclipse of the Nizam Shahi Sultanate of Ahmednagar, the Mughal spotlight was switched on to Bijapur and Golkonda, the last two of the Shahi Sultanate. And, when he ascended the Delhi throne, Aurangzeb lost no time in crushing Bijapur. He then laid siege to Golkonda and over-nan the Maratha kingdom, Everywhere, in the south, success attended the Mughal arms. At this time, the impetuous Sambaji sent out a strong Maratha expeditionary force to Karnataka under his famous generals Keshava Pingle and Sanntaji Ghorpade. Aurangazeb who was carefully watching the movements of Sambaji's armies in the Deccan was, therefore, not without concern at this unexpected advance of the Maratha expeditionary force to the south, and rightly guessing that Samhaji's design, by this move, was to capture his ancestral jagir of Bangalore, which was then in the possession of his hostile uncle Venkaji, and also to reinforce the garrison at Ginjee, the Maratha strong-hold in the Karnataka, he detached a large body of Mughal horse from the Golkonda siege and put it under the command of his general Khasim Khan, with orders to take Bangalore immediately at any cost. The Mughal commander, after forced marches through Kumool and Penakonda, reached Bangalore in time and occupied it, in August.1687, driving away from the troops of Venkaji, whose prolonged negotiation for the sale of Bangalore with Chikka Deva Raja Wodeyar was not yet complete. A few days after the capture of Bangalore by the Mughals, arrived at its gates the Maratha expeditionary force sent by Sambhaji only to be disappointed at the course of events that had happened. Baulked of its prey it retired to Ginjee. For nearly three years Bangalore was in the occupation by the Mughal forces and rem;1ined part of the province of Sira, the newly formed Suha of the Mughal empire in the south. The Mughal Subedar of Sira, however, being pre-occupied with other work thereafter sold Bangalore for a sum of 3 lakhs of rupees to his new ally Chikka Deva Raja Wodcyar, who since the days of Venkaji was desirous of adding this strategically situated frontier fort to his dominion.With the acquisition of Bangalore by Chikka Deva Raja Wodcyar began a new and glorious epoch in its history. The Mysore ruler, immediately after its acquisition, fortified Bangalore with yet another fort, oval in shape, which he built to the south of the old Kempe Gowda fort. Chikka Deva Raja improved the fortifications of the two forts and garrisoned them with regular troops for the protection of Mysore's frontiers in this region. The main object of building the second fort was to ensure the security of the principal town situated within the first fort, which lay often exposed to the Mulkgiri raids of roving bands of Marathas. Within the new fort, Chikka Deva Raja also built a temple dedicated to Venkatesha. This temple remains to this day in the fort area of Bangalore and is an object of great. veneration to the people.

Chikka Deva Raja Wodeyar was succeeded by a line of weak and ephemeral Rajas. Consequently, royal authority was usurped first b)' the Dalavoys of the Mysore army and finally by the celebrated Haider Ali Khan. In 1759 Bangalore and the surrounding Country was conferred on Haider Ali as a personal jagir by Krishna Raja Wodeyar 11 in recognition of his services rendered to the kingdom at a time when its fortunes were at the lowest ebb.


To be continueed...

Courtacy : Hisorical Publications
Courtacy : Penguin Books



8 ವರ್ಷಗಳು

ನವ ಭಾರತಕ್ಕಾಗಿ
ನವ ಕರ್ನಾಟಕ



ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನ ಮಂತ್ರಿಗಳು

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ನರೇಂದ್ರ ಮೋದಿಯವರ ಸಮರ್ಥ ನಾಯಕತ್ವ

ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ವರದಾನ

ಕೃಷಿ ಕ್ಷೇತ್ರ: ರೂ. 19,374 ಕೋಟಿ

ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆ (2018–19 ರಿಂದ 2021–22)
ರೂ. 8,704.29 ಕೋಟಿ
ಫಲಾನುಭವಿಗಳು: 4.17 ಕೋಟಿ

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ
ರೂ.2,111 ಕೋಟಿ
ಫಲಾನುಭವಿಗಳು: 23.9 ಲಕ್ಷ

ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ
ರೂ.500 ಕೋಟಿ
ಫಲಾನುಭವಿಗಳು: 17 ಲಕ್ಷ

ಪ್ರಧಾನ ಮಂತ್ರಿ ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆ
ರೂ.19,950 ಕೋಟಿ

ಕೌಶಲ್ಯಾಭಿವೃದ್ಧಿ: ರೂ. 1196.97 ಕೋಟಿ

ರಾಷ್ಟ್ರೀಯ ಗ್ರಾಮೀಣ ಜೀವನಾಧಾರ ಯೋಜನೆ
ರೂ.870.50 ಕೋಟಿ
ಫಲಾನುಭವಿಗಳು: 1,65,486

ಗ್ರಾಮೀಣ ಸ್ವಉದ್ಯೋಗ ತರಬೇತಿ ಸಂಸ್ಥೆಗಳು (ಆರ್‌ಎಸ್‌ಇಟಿಐ): ಕೌಶಾಲ್ಯಾಭಿವೃದ್ಧಿ ಪಡೆದಿರುವ
ಒಟ್ಟು ಫಲಾನುಭವಿಗಳು: 1,83,909
ಸ್ವಉದ್ಯೋಗ ಫಲಾನುಭವಿಗಳು: 1,09,950

ದೀನ್‌ದಯಾಳ್ ಅಂತ್ಯೋದಯ ಯೋಜನೆ
ಕೌಶಲ್ಯಾಭಿವೃದ್ಧಿ ಫಲಾನುಭವಿಗಳು: 2.19 ಲಕ್ಷ
ವಸತಿ ಸೌಕರ್ಯ ಫಲಾನುಭವಿಗಳು: 3,120
ಗುರುತಿನ ಚೀಟಿ ಪಡೆದಿರುವ ರಸ್ತೆ ವ್ಯಾಪಾರಿಗಳು: 1.35 ಲಕ್ಷ

ಪ್ರಧಾನಮಂತ್ರಿ ಮುದ್ರಾ ಯೋಜನೆ

ರೂ.1.63 ಲಕ್ಷ ಕೋಟಿ
ಫಲಾನುಭವಿಗಳು: 3.22 ಕೋಟಿ

ಪ್ರಧಾನ ಮಂತ್ರಿ ಬೀದಿ ವ್ಯಾಪಾರಿಗಳ ಆತ್ಮನಿರ್ಭರ ನಿಧಿ

ಫಲಾನುಭವಿಗಳು 1.61 ಲಕ್ಷ
ರೂ.10,000 ಪ್ರತಿ ಫಲಾನುಭವಿಗೆ

ಆರೋಗ್ಯ, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ: ರೂ.17,669.15 ಕೋಟಿ

ರಾಷ್ಟ್ರೀಯ ಆರೋಗ್ಯ ಮಿಷನ್
2014–15ರಲ್ಲಿ ರೂ.665.40 ಕೋಟಿ
2021–22 ರಲ್ಲಿ ರೂ.1,274.71 ಕೋಟಿ

ಆಯುಷ್ಮಾನ್ ಭಾರತ್ ಯೋಜನೆ
ರೂ. 1,213.13 ಕೋಟಿ ಹಂಚಿಕೆ

ತುರ್ತು ಕೋವಿಡ್–19 ಪ್ರತಿಕ್ರಿಯೆ ಪ್ಯಾಕೇಜ್
ರೂ.1,277.70 ಕೋಟಿ

ಐಸಿಡಿಎಸ್ ಯೋಜನೆ
ರೂ. 6,685 ಕೋಟಿ
ಫಲಾನುಭವಿಗಳು: 4.12 ಕೋಟಿ

ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆ
ರೂ.465 ಕೋಟಿ
ಫಲಾನುಭವಿಗಳು: 18.62 ಲಕ್ಷ

ಪರಿಶಿಷ್ಟ ಜಾತಿ/ವರ್ಗ, ಹಿಂದುಳಿದವರು ಹಾಗೂ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ

ರೂ.4,834.69 ಕೋಟಿಗಳು
ಫಲಾನುಭವಿಗಳು: 2,68,20,000

ಸುರಕ್ಷಾ ಬಿಮಾ ಯೋಜನೆ

ಪರಿಹಾರ: ರೂ.144.12 ಕೋಟಿ
ಫಲಾನುಭವಿಗಳು: 1.10 ಕೋಟಿ

ಪೋಷಣ್ ಅಭಿಯಾನ

ಒಟ್ಟು ಫಲಾನುಭವಿಗಳು: 53,93,685

ಪಿಎಂ ಗರೀಬ್ ಕಲ್ಯಾಣ್ ಅನ್ನ ಯೋಜನೆ

ವಿತರಿಸಲಾಗಿರುವ ಒಟ್ಟು ಪಡಿತರ 36,27,460 ಮೆ. ಟನ್

3298 ಕಿ.ಮೀ. ಹೆದ್ದಾರಿ ನಿರ್ಮಾಣ

ರೂ. 50,527 ಕೋಟಿ

ರಾಜ್ಯಕ್ಕೆ ಕೇಂದ್ರದ ಕೊಡುಗೆ (2014–22)

ರೂ.1,29,776.74 ಕೋಟಿ

ಹಣಕಾಸಿನ ಹಂಚಿಕೆ, ಜಿಎಸ್‌ಟಿ ಪರಿಹಾರ, ಹಣಕಾಸು ಆಯೋಗದ ಅನುದಾನ ಇತ್ಯಾದಿಗಳನ್ನು ಹೊರತುಪಡಿಸಿ.

ಶಿಕ್ಷಣ: ರೂ. 11,607 ಕೋಟಿ

ಸಮಗ್ರ ಶಿಕ್ಷಣ ಕರ್ನಾಟಕ (ಎಸ್‌ಎಸ್‌ಎ ಹಾಗೂ ಆರ್‌ಎಂಎಸ್‌ಎ) ಯೋಜನೆ
ರೂ.5,240.71 ಕೋಟಿ

ಪ್ರಧಾನ ಮಂತ್ರಿ ಪೋಷಣ್ ಶಕ್ತಿ ನಿರ್ಮಾಣ (ಮಧ್ಯಾಹ್ನದ ಬಿಸಿಯೂಟ) ಯೋಜನೆ
ರೂ.3,803.95 ಕೋಟಿ
ಫಲಾನುಭವಿಗಳು: 3.6 ಕೋಟಿ ಮಕ್ಕಳು

ಗ್ರಾಮೀಣಾಭಿವೃದ್ಧಿ

ರೂ.33,676 ಕೋಟಿ

ನಗರಾಭಿವೃದ್ಧಿ

ರೂ.13,960 ಕೋಟಿ

ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ

6189 ಕಿ.ಮೀ. ರಾಷ್ಟ್ರೀಯ ಹೆದ್ದಾರಿಗಳ ಸುಧಾರಣೆ
ರೂ.1,06,830 ಕೋಟಿ

ಅಟಲ್ ಪಿಂಚಣಿ ಯೋಜನೆ

ಒಟ್ಟು ಚಂದಾದಾರರು 22.06 ಲಕ್ಷ

ಪ್ರಧಾನ ಮಂತ್ರಿ ಜನ್‌ಧನ್ ಯೋಜನೆ

ತೆರೆಯಲಾಗಿರುವ ಒಟ್ಟು ಖಾತೆಗಳು: 1.56 ಕೋಟಿ
ಠೇವಣಿ: ರೂ.5,821 ಕೋಟಿ

ಜೀವನಜ್ಯೋತಿ ಬಿಮಾ ಯೋಜನೆ

ರೂ.741.42 ಕೋಟಿ
ಫಲಾನುಭವಿಗಳು: 49.95 ಲಕ್ಷ

ಇ–ಶ್ರಮಿಕ್ ಕಾರ್ಡ್ ಯೋಜನೆ

ಫಲಾನುಭವಿಗಳು: 60,66,422

ಪಿಎಂ ಸ್ವನಿಧಿ ಯೋಜನೆ

ಒಟ್ಟು ಖಾತೆಗಳು: 1,75,643
ಹಣ ಸಂದಾಯವಾಗಿರುವ ಖಾತೆಗಳ ಸಂಖ್ಯೆ: 1,50,314

ಬಾಪು ಪ್ರಪಂಚ ಕನ್ನಡ-ಇಂಗ್ಲಿಷ್ ಮಾಸ ಪತ್ರಿಕೆ
RNI NO : KARBIL/2019/77950
Registered No. : KA/BGGPO/2589/2020-2022
published 15th of every month and posted on 20th of every month at Patrikachannel, Bengaluru - 560026

ಪತ್ರಕರ್ತ ಡಾ. ಬಿ.ಆರ್. ಅಂಬೇಡ್ಕರ್

– ಇಂದಿರಾ ಕೃಷ್ಣಪ್ಪ


ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ.



ಅಂಬೇಡ್ಕರ್ ಅವರು 'ಬಹಿಷ್ಕೃತ ಭಾರತ' ಪತ್ರಿಕೆಯನ್ನು 1927ರ ಏಪ್ರಿಲ್ 3 ರಂದು ಆರಂಭಿಸಿ, ಸುಮಾರು ಎರಡು ವರ್ಷಗಳ ಕಾಲ ಅಂದರೆ 1928ರವರೆಗೆ ನಡೆಸಿದ್ದರು. ಈ ಸಂದರ್ಭ ಬ್ರಿಟಿಷರ ವಿರುದ್ಧ, ವಿವಿಧ ಆಯಾಮಗಳಲ್ಲಿ, ಪ್ರತಿರೋಧ, ವಿದ್ರೋಹ, ಅಸಹಕಾರ, ಆಂದೋಲನಗಳು ತೀವ್ರವಾಗಿದ್ದ ಕಾಲಘಟ್ಟವಾಗಿತ್ತು. ಹಾಗೆಯೇ ಭಾರತ ಸ್ವರಾಜ್ಯ ಸ್ಥಾಪನೆಗೆ ಆಡಳಿತಾತ್ಮಕ ಶಕ್ತಿಯಾಗುತ್ತಿದ್ದ ನಿರ್ಣಾಯಕ ಕಾಲವೂ ಆಗಿತ್ತು. ಇಂಥಹ ತೀಕ್ಷ್ಣ ಪರಿವರ್ತನೆಯ ಕಾಲದಲ್ಲಿ ಪತ್ರಿಕೆಗಳ ಪಾತ್ರ ಮಹತ್ತರವಾದುದಾಗಿದೆ. ಈ ಸಕಾಲಿಕ ಸಂದರ್ಭದಲ್ಲಿ ನಾಡಿನ ಪ್ರಜೆಗಳು ಅದರಲ್ಲೂ ದಲಿತರು, ದಮನಿತರು, ಅಲ್ಪಸಂಖ್ಯಾತರು, ಧ್ವನಿ ಇಲ್ಲದವರ ಧ್ವನಿಯಾಗಿ ಮೊಳಗಿದ್ದೇ "ಬಹಿಷ್ಕೃತ ಭಾರತ" ಪತ್ರಿಕೆ. ಈ ಪತ್ರಿಕೆಯ ಹಿಂದಿನ ಶಕ್ತಿ ಅಂಬೇಡ್ಕರ್ ಅವರು ಸ್ಥಾಪಿಸಿದ "ಬಹಿಷ್ಕೃತ ಹಿತಕಾರಿಣಿ ಸಭಾ" ಆಗಿತ್ತು. 1924ರ ಜುಲೈ 20ರಂದು ಸ್ಥಾಪಿತವಾದ ಬಹಿಷ್ಕತ ಹಿತಕಾರಿಣಿ ಸಭಾದ ಮುಖ್ಯ ಧ್ಯೇಯವೇ "ಓದು, ಓದಿ ಹೇಳು, ಮತ್ತು ಕೇಳು, ಅರ್ಥ ಮಾಡಿಕೋ, ಸಿದ್ಧಿಸಿಕೋ ಮತ್ತು ಸಿದ್ಧಿಯನ್ನು ಇತರರಿಗೆ ಕೊಡು" ಎಂಬುದಾಗಿತ್ತು. ಈ ಸಂಘಟನೆಯ ಮೂಲಕ ಪತ್ರಿಕೆಯನ್ನು ಆರಂಬಿಸಿದ್ದಲ್ಲದೆ, ವಿದ್ಯಾರ್ಥಿ ನಿಲಯಗಳನ್ನು ಥಾಣೆ, ನಾಸಿಕ್, ಪುಣೆ ಮತ್ತು ಧಾರವಾಡಗಳಲ್ಲಿ ಸ್ಥಾಪಿಸಿದರು. ಮತ್ತು ಪ್ರಾಂತೀಯ ಸರ್ಕಾರಕ್ಕೆ ಶಾಲೆಗಳನ್ನು, ವಿದ್ಯಾರ್ಥಿ ನಿಲಯಗಳನ್ನೂ ಸ್ಥಾಪಿಸಲು ಮನವಿ ಸಲ್ಲಿಸಿದ್ದರು.

'ಬಹಿಷ್ಕೃತ ಭಾರತ' ಪತ್ರಿಕೆಯಲ್ಲಿ ಅಂಬೇಡ್ಕರ್ ಅವರು ಬರೆದ ನೂರಾರು ಲೇಖನಗಳು ಇಂದಿಗೂ ಲಭ್ಯವಿದೆ. ಈ ಪತ್ರಿಕೆಯ ಕಾಲಾವಧಿಯಲ್ಲಿಯೇ ಬಾಲಗಂಗಾಧರ ತಿಲಕರ 'ಕೇಸರಿ', ಬಾಸ್ಕರ್ ಭೂಪಟ್ಕರ್ ಅವರ 'ಭಾಲಾ', ಧುಳೇಯ – ಪ್ರಭೋದ, ಪೇಣದಿಂದ ಕುಲಬಾ ಸಮಾಚಾರ್, ಮುಂಬೈನ ರಣಗರ್ಜನೆ ಎಂಬ ಸನಾತನ ಪತ್ರಿಕೆಗಳೂ ಪ್ರಕಟಗೊಳ್ಳುತ್ತಿದ್ದು, ಹೆಚ್ಚು ಪ್ರಸಾರವನ್ನು ಪಡೆದಿದ್ದವು. ಅವುಗಳು ಅಸ್ಪೃಶ್ಯರು, ಹಿಂದೂಯೇತರರ ಸುದ್ದಿ ಸಮಾಚಾರ, ವಿಶ್ಲೇಷಣೆಗಳನ್ನು ಒಳಗೊಂಡಿರುತ್ತಿರಲಿಲ್ಲ. ದಲಿತ-ದಮನಿತರ ಜನಜಾಗೃತಿಯನ್ನು ಮಹಾರಾಷ್ಟ್ರದ ಯಾವ ಪತ್ರಿಕೆಯೂ ಅಂದು ಪ್ರಕಟಿಸುತ್ತಿರಲಿಲ್ಲ. ಇಂಥಹ ಗಳಿಗೆಯಲ್ಲಿ ಅಂಬೇಡ್ಕರ್ ಅವರಿಗೆ ಆಸರೆಯಾಗಿ ಬಂದ ಸ್ನೇಹಬಂಧವೊಂದನ್ನು ಇಲ್ಲಿ ಹೇಳುವುದು ಔಚಿತ್ಯಪೂರ್ಣವಾಗಿದೆ. ತಿಲಕ್ ಮತ್ತು ಸಮಾಜ ಸುಧಾರಕ ಗೋಪಾಲರಾವ್ ಗಣೇಶ್‌ಅಗರ್‌ಕರ್ ನಡುವೆ ನಡೆದ ಭಿನ್ನಾಭಿಪ್ರಾಯದಿಂದಾಗಿ, 'ಕೇಸರಿ' ಪತ್ರಿಕೆಯಿಂದ ಅಗರ್‌ಕರ್ ಅವರನ್ನು ಕಿತ್ತು ಹಾಕಲಾಯಿತು. ಇದಕ್ಕೆ ಪ್ರಮುಖ ಕಾರಣವಾದದ್ದು, ಅಗರ್‌ಕರ್ ಅವರು ಸಮಾಜ ಸುಧಾರಣೆ ಕೆಲಸದಲ್ಲಿ ತೊಡಗಿದ್ದು ಮತ್ತು ಅದನ್ನು ಪತ್ರಿಕೆಯಲ್ಲಿ ಬರೆಯಲಾರಂಭಿಸಿದ್ದೇ ಆಗಿತ್ತು. ಈ ವಿಷಯವನ್ನೂ ಸೇರಿದಂತೆ ಅಂಬೇಡ್ಕರ್ ಅವರು 'ತಿಲಕರ ಪರಂಪರೆಯ ಅಂತರಂಗ' ಎಂಬ ಲೇಖನವನ್ನು 'ಬಹಿಷ್ಕೃತ ಭಾರತ' ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಆ ಲೇಖನದಲ್ಲಿ ತಿಲಕರು, ಅಗರ್‌ಕರ್ ಅವರ ಸಮಾಜ ಸುಧಾರಣೆಯನ್ನು ಕಟುವಾಗಿ ಟೀಕಿಸಿದ್ದು, "ರಾಜಕೀಯ ಸುಧಾರಣೆಯ ಸಮರ್ಥನೆ ಮತ್ತು ಸಮಾಜ ಸುಧಾರಣೆ ವಿರೋಧ" ಇವು ತಿಲಕರ ಧ್ಯೇಯವಾಗಿರುವುದು, ಅವರ ದ್ವಂದ್ವ ನಿಲುವುಗಳು, ಬ್ರಾಹ್ಮಣ ಅಗರ್‌ಕರ್ ಅವರಿಗೆ ತಿಲಕರ ಅನುಯಾಯಿಗಳ ಕೊಲೆ ಬೆದರಿಕೆಗಳನ್ನು, ಯಥಾವತ್ತಾಗಿ ಪ್ರಕಟಿಸಿದರು. ಕೇಸರಿ ಪತ್ರಿಕೆಯಿಂದ ಹೊರಬಂದ, ಅಗರ್‌ಕರ್ ಅವರು 'ಸುಧಾರಕ' ಎಂಬ ಪತ್ರಿಕೆಯನ್ನು ಆರಂಭಸಿದ್ದು, ಅದೂ ಜನಪ್ರಿಯವಾದದ್ದೂ, ಅವರ ಕೊಲೆ ಬೆದರಿಕೆಗೆ ಮುಖ್ಯ ಕಾರಣವೆಂಬುದನ್ನು ಬರೆದಿದ್ದರು. ಅಂಬೇಡ್ಕರ್ ಮತ್ತು ಅಗರ್‌ಕರ್ ಅವರು, ಸಾರ್ವಜನಿಕ ಸುಧಾರಣೆ, ಪತ್ರಿಕಾ ಧರ್ಮದಿಂದ ಒಂದಾದ ಈ ಘಟ್ಟದಿಂದ, ಸರ್ವಜನರ ಸ್ವಾತಂತ್ರ್ಯದ ಪತಾಕೆಯನ್ನು ಎತ್ತಿಹಿಡಿದು ನಡೆದರು. 'ಬಹಿಷ್ಕೃತ ಭಾರತ' ಪತ್ರಿಕೆಯಲ್ಲಿ ಪ್ರಕಟವಾದ ಅಂಬೇಡ್ಕರ್ ಅವರ ಇನ್ನೊಂದು ಲೇಖನವೆಂದರೆ, "ಬೆಂಕಿಯಲ್ಲಿ ತುಪ್ಪ ಸುರಿಯುವ 'ಕೇಸರಿ'ಯ ಗುಣ" ಎಂಬುದಾಗಿದೆ. ಇದರಲ್ಲಿ ದಲಿತರು ಪತ್ರಿಕೆಯನ್ನು ಆರಂಭಿಸುವುದನ್ನು ತಿಲಕರೂ ಸೇರಿದಂತೆ, ಮೇಲ್ವರ್ಗದವರು ಅತೀವ ಅಸಹನೆ ತೋರಿದ್ದನ್ನು ದಾಖಲಿಸುತ್ತಾರೆ.

ಮುಂದುವರಿಯುವುದು...



ಅಂಬೇಡ್ಕರ್ ಅವರು ಪ್ರಕಟಿಸುತ್ತಿದ್ದ ಮೂಕನಾಯಕ ಮತ್ತು ಬಹಿಷ್ಕೃತ ಭಾರತ ಪತ್ರಿಕೆ

ಇವರಿಗೆ,

____

____

Printed and Published by Secretary, Karnataka Gandhi Smaraka Nidhi on behalf of Gandhi Bhavana, Kumarapark East, Bengaluru - 560001, Ph : 080 22261967, Printed at CreativeGeekZ, #58, Yadhava College Road, Madhavanagara Bengaluru - 560001, Ph : 080 4092704